ವಿಶೇಷ ಸಂಚಿಕೆ


ವಾರ್ಷಿಕ ಚಂದಾ ರೂ.25/-

# ಜನಪದ

ಸಂಪುಟ-04 • ಸಂಚಿಕೆ-11 • ಆಗಸ್ಟ್ 2021

ಆಗಸ್ಟ್
2021

## ಜನಸ್ನೇಹಿ ಆಡಳಿತದ




## ಸವಾಲುಗಳ ಮೀರಿದ ✦ ಸಾಧನಾ ಪರ್ವ

Downloaded From: www.kpscvaani.com




ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಟೋಕಿಯೋ ಒಲಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ರಾಜ್ಯದ ಈಜುಪಟು ಶ್ರೀಹರಿ ನಟರಾಜ್ ಅವರಿಗೆ 10 ಲಕ್ಷ ರೂಗಳ ಪ್ರೋತ್ಸಾಹಧನ ವಿತರಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಯುವಜನ ಸಬಲೀಕರಣ ಹಾಗೂ ಕ್ರೀಡಾ ಸಚಿವರಾದ ನಾರಾಯಣ ಗೌಡ, ಇಂಡಿಯನ್ ಒಲಂಪಿಕ್ಸ್ ಅಸೋಸಿಯೇಷನ್ ಉಪಾಧ್ಯಕ್ಷರಾದ ಕೆ.ಗೋವಿಂದರಾಜು, ಕ್ರೀಡಾ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಗಳಾದ ಡಾ.ಶಾಲಿನಿ ರಜನೀಶ್, ಶ್ರೀಹರಿಯ ತಾಯಿ ಮತ್ತು ತರಬೇತುದಾರರು ಉಪಸ್ಥಿತರಿದ್ದರು.



ಜುಲೈ 14 ರಂದು ವಿಧಾನಸೌಧದಲ್ಲಿ ಕರ್ನಾಟಕ ವಿದ್ಯುತ್ ಬೈಕ್ ಟ್ಯಾಕ್ಸಿ ಯೋಜನೆಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅನಾವರಣ ಗೊಳಿಸಿದರು. ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಪಿ. ರವಿಕುಮಾರ್, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಅಂಜುಮ್ ಪರ್ವೇಜ್, ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಾದ ಡಾ.ಎಸ್.ಸೆಲ್ವಕುಮಾರ್ ಉಪಸ್ಥಿತರಿದ್ದರು

Downloaded From: www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-04 • ಸಂಚಿಕೆ-11 • ಆಗಸ್ಟ್ 2021

ಜುಲೈ 2021





06 ಸವಾಲುಗಳ ನಡುವೆಯೂ ಸಮೃದ್ಧ-ಸ್ವಾವಲಂಬಿ ಕರ್ನಾಟಕ ನಿರ್ಮಾಣಕ್ಕೆ ಆದ್ಯತೆ
• ನಂಜುಂಡಪ್ಪ ವಿ



20 ಹದಿನಾಲ್ಕು ಸಾವಿರ ಕೋಟಿ ನಗದು ಪರಿಹಾರ ನೇರವಾಗಿ ಫಲಾನುಭವಿಗಳ ಖಾತೆಗೆ
• ಕೆ.ರೋಹಿಣಿ

18 ಸರ್ಕಾರದ ಸಾಫಲ್ಯದ ಕುರಿತು ವಿವಿಧ ಕ್ಷೇತ್ರಗಳ ಪ್ರಮುಖರ ಅಭಿಮತ
• ಕಂ.ಕ. ಮೂರ್ತಿ



22 ರಾಜ್ಯದಲ್ಲಿ ಕಿಸಾನ್ ರೈಲು ಸೌಲಭ್ಯಕ್ಕೆ ಚಾಲನೆ
• ಬಿ.ಜಿ.ಪೂರ್ಣಿಮ

24 ಡಿಜಿಟಲ್ ಕಲಿಕಾ ಯೋಜನೆಯಡಿ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್
• ಎನ್. ನಾಗರತ್ನಮ್ಮ

26 ನೂತನ ರಾಜ್ಯಪಾಲರ ಪ್ರಮಾಣವಚನದ ಛಾಯಾಚಿತ್ರಗಳು

28 ದೇಶದಲ್ಲೇ ಮೊಟ್ಟಮೊದಲ ಜಾನುವಾರು ಸಹಾಯವಾಣಿ ಕೇಂದ್ರ
• ಶಿವಕುಮಾರ್ ಕಟ್ಟೆ



40 ಭಾರತ ಸ್ವಾತಂತ್ರ್ಯೋತ್ಸವ : ಅಮೃತ ಮಹೋತ್ಸವದ ಸಂಭ್ರಮ
• ಡಿ.ಪಿ.ಮುರಳೀಧರ್

31 ಡಿಜಿಟಲೀಕರಣದತ್ತ ಬೆಂಗಳೂರು ನಗರ ಸಂಚಾರ ಪೊಲೀಸ್
• ಡಾ. ಅನಿಲ್‌ಕುಮಾರ್ ಪಿ.ಜಿ

34 ಬೆಂಗಳೂರಿನಲ್ಲಿ ಮತ್ತೊಂದು ಮಿನಿ ಲಾಲ್‌ಬಾಗ್
• ಕೆ.ಎಸ್.ರಾಜಮನ್ನಾರ್



37 ರಾಜ್ಯ ಪ್ರವಾಸೋದ್ಯಮಕ್ಕೆ ಗರಿಮೆ ಹೆಚ್ಚಿಸಿದ ವಿಸ್ಟಾಡೋಮ್ ರೈಲು
• ವರಪ್ರಸಾದ್ ರಾವ್ ಪಿ.ವಿ

42 ತಾಯಿ ಭಾರತಿಗೆ ಅಮೃತ ಚೇತನ
• ಟಿ.ಗುರುರಾಜ್

46 ಲೋಕಾರ್ಪಣೆಗೊಂಡ ಸರ್ಕಾರಿ ನೌಕರರ ಶತಮಾನೋತ್ಸವ ಭವನ
• ಎನ್. ಮಾಲತೇಶ್

48 ನಾಡಿನ ಹೆಮ್ಮೆಯ ಲಾಂಛನ ಗಂಡಭೇರುಂಡ
• ಪಿ. ಎಸ್. ಪರ್ವತಿ

50 ಪದಬಂಧ-21



ಪ್ರಧಾನ ಸಂಪಾದಕರು
ಡಾ|| ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ನಿಮ್ಮ ಅನಿಸಿಕೆ

ಶ್ರೀಯುತ ಮಾಧವ ಅವರು 'ಸೈಬರ್ ವಂಚನೆಯ ಹತ್ತಾರು ಮುಖಗಳು' ಎನ್ನುವ ತಮ್ಮ ಲೇಖನದ ಮೂಲಕ ಸೈಬರ್ ವಂಚನೆ ಹೇಗೆ ಮಾಡಲಾಗುತ್ತದೆ ಎಂದು ಸವಿಸ್ತಾರವಾಗಿ ಜನರಲ್ಲಿ ಜಾಗೃತಿ ಮೂಡಿಸಿರುವುದು ಸಾರ್ವಜನಿಕರಿಗೆ ತುಂಬಾ ಸಹಕಾರಿಯಾಗಿದೆ.

ಫೋನ್ ಕರೆ ಮೂಲಕ ಬ್ಯಾಂಕ್ ಖಾತೆ ವಂಚನೆ, ಒಟಿಪಿ, ಕ್ಯೂ ಆರ್ ಕೋಡ್ ವಂಚನೆ, ಎಟಿಎಂ ಬಳಸುವಲ್ಲಿ ಎಚ್ಚರವಹಿಸುವ ಬಗ್ಗೆ, ಹಣಕಾಸು ಕಳೆದುಕೊಂಡಾಗ ಅದನ್ನು ವಾಪಸ್ ಪಡೆಯಬಹುದಾದ ಮಾರ್ಗ ಮತ್ತು ವಂಚನೆಗೆ ಬಲಿಯಾಗದಿರಲು ಸಲಹೆಗಳನ್ನು ನೀಡಿದ್ದಾರೆ. ಇಂತಹ ಉತ್ತಮ ಲೇಖನ ಪ್ರಕಟಿಸಿದ ಸಂಪಾದಕರಿಗೆ ಧನ್ಯವಾದಗಳು.

**–ಪ್ರಭುಲಿಂಗಸ್ವಾಮಿ, ಅರಕಲಗೂಡು**


ಕುಳಿತಲಿಂದಲೇ ಆನ್‌ಲೈನ್ ಮೂಲಕ ನಾಗರೀಕ ಸೇವೆಗಳನ್ನು ಪಡೆಯುವ ಕುರಿತು ಜುಲೈ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನ ಅತ್ಯುತ್ತಮ ಮಾಹಿತಿಯನ್ನು ಒದಗಿಸಿತು. ಸೇವಾಸಿಂಧುವಿನ ಮೂಲಕ ಹಿರಿಯ ನಾಗರಿಕರು, ವಿಕಲಚೇತನರು ತಮಗೆ ಬೇಕಾದ ದಾಖಲೆಗಳನ್ನು ಹೇಗೆ ಪಡೆದುಕೊಳ್ಳಬಹುದು ಎಂಬುದನ್ನು ಲೇಖಕರು ವಿವರವಾಗಿ ತಿಳಿಸಿದ್ದಾರೆ. ಲೇಖನದಿಂದ ಕರ್ನಾಟಕ ನಾಗರಿಕ ಸೇವೆಗಳನ್ನು ಮನೆ ಮನೆ ಬಾಗಿಲಿಗೆ ತಲುಪಿಸುವ ಸರ್ಕಾರದ ಈ ವ್ಯವಸ್ಥೆಯ ಕುರಿತು ತಿಳಿಸಿಕೊಳ್ಳಲು ಸಾಧ್ಯವಾಯಿತು.

**–ಮೀನಾಕ್ಷಿ ಕೆ.ಎಲ್, ಕೆ.ಎಂ.ದೊಡ್ಡಿ**

"ಸದನದಲ್ಲಿ ನಾವಿಕ ಹೊಲದಲ್ಲಿ ಕೃಷಿಕ" ಜಡಿಯಪ್ಪ ಗೆದ್ದಲಗಟ್ಟಿ ಅವರ ಲೇಖನ ಸಮಸ್ತ ಜನಪ್ರತಿನಿಧಿಗಳು ಓದಬೇಕಾದ ಲೇಖನವಾಗಿದೆ. ವಿಧಾನಪರಿಷತ್ ಸಭಾಪತಿಯಾಗಿರುವ ಬಸವರಾಜ ಹೊರಟ್ಟಿ ಅವರಲ್ಲಿರುವ ಕೃಷಿ ಕಾಯಕದ ಉತ್ಸಾಹ ಹಾಗೂ ಅವರಲ್ಲಿರುವ ಕೃಷಿ ಮತ್ತು ಹೈನುಗಾರಿಕೆ ಬಗ್ಗೆ ಅಪಾರ ಆಸ್ತಕಿ ಬಗ್ಗೆ ತಿಳಿದು ಆಶ್ಚರ್ಯವಾಯಿತು.

ಏಕೆಂದರೆ ಅವರು ಮೂಲತಃ ಶಿಕ್ಷಕ ವೃತ್ತಿಯಿಂದ ಬಂದವರಾಗಿದ್ದು, ಈ ಇಳಿ ವಯಸ್ಸಿನಲ್ಲಿ ಕೋವಿಡ್‌ಗೆ ತುತ್ತಾಗಿ ಗುಣಮುಖರಾಗಿ ಬಂದ ನಂತರದ ದಿನಗಳಲ್ಲಿ ಹೊರಟ್ಟಿಯವರು ತಾವೇ ಎತ್ತುಗಳಿಂದ ಹೊಲವನ್ನು ಉತ್ತಿ ಬಿತ್ತನೆ ಮಾಡಿರುವುದನ್ನು ನೋಡಿದರೆ, ಅವರು ಎಷ್ಟೇ ಎತ್ತರಕ್ಕೆ ಬೆಳೆದರೂ ಅವರಿಗಿರುವ ಕೃಷಿ ಮೇಲಿನ ಪ್ರೀತಿ ಬತ್ತದಿರುವುದು ಆಶ್ಚರ್ಯವೇ ಸರಿ.

**–ಶಿವಪ್ರಸಾದ್, ಸಾಗರ**






ಜುಲೈ 2021 ರ ಸಂಚಿಕೆಯಲ್ಲಿ ಸಾಹಿತಿ ಸಿದ್ದಲಿಂಗಯ್ಯ ಅವರ ಕುರಿತು ಪ್ರಕಟವಾಗಿರುವ "ಊರು ಕೇರಿ ತೊರೆದ ಸಿದ್ದಲಿಂಗಯ್ಯ" ಲೇಖನ ಸಿದ್ದಲಿಂಗಯ್ಯನವರ ಬರಹ ಮತ್ತು ಬದುಕಿನ ಬಗ್ಗೆ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಅವರ ಕವನ ಸಂಕಲನಗಳು, ವಿಮರ್ಶಾ ಗ್ರಂಥಗಳು ಮತ್ತು ಲೇಖನಗಳ ಬಗ್ಗೆ ವಿಸ್ತಾರವಾಗಿ ಲೇಖಕರು ತಿಳಿಸಿರುತ್ತಾರೆ. ಬಂಡಾಯ ಸಾಹಿತಿ ಎಂದೇ ಗುರುತಿಸಿಕೊಂಡಿದ್ದ ಶ್ರೀಯುತ ಸಿದ್ದಲಿಂಗಯ್ಯನವರಿಗೆ ದೊರೆತಿದ್ದ ಅಪಾರ ಗೌರವ ಸನ್ಮಾನಗಳು ಅವರ ಪರಿಶ್ರಮಕ್ಕೆ ದೊರೆತ ಗೌರವಾರ್ಪಣೆಯಾಗಿದೆ.

–ಕಾವ್ಯ, ದೊಡ್ಡಬಳ್ಳಾಪುರ

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೆ,**

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಜುಲೈ 26ಕ್ಕೆ ಎರಡು ವರ್ಷ ತುಂಬಲಿದೆ. ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದಾಗಿನಿಂದಲೂ ನಿರಂತರವಾಗಿ ಒಂದಲ್ಲಾ ಒಂದು ಸಂಕಷ್ಟಗಳು, ಸವಾಲುಗಳು ಎದುರಾಗುತ್ತಲೇ ಇದೆ. ಆದಾಗ್ಯೂ ಕೂಡ ಎರಡು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

ಸಂಕಷ್ಟ ಬರುತ್ತದೆ, ಹೋಗುತ್ತದೆ. ನಿರಂತರವಾಗಿ ಎರಡು ವರ್ಷ ಪೂರ್ತಿ ಸಂಕಷ್ಟಗಳು ಎದುರಾದರೆ ಎಂತಹವರೂ ಧೃತಿಗೆಡುತ್ತಾರೆ. ಐದು ದಶಕಗಳ ರಾಜಕೀಯ ಅನುಭವವನ್ನು ಹೊಂದಿರುವ ಮುಖ್ಯಮಂತ್ರಿಗಳು ಸರಣಿಯಾಗಿ ಎದುರಾದ ಸಂಕಷ್ಟಗಳಿಗೆ ಎದೆಗುಂದದೆ ಅತ್ಯಂತ ಜಾಣ್ಮೆಯಿಂದ ಸಮರ್ಥವಾಗಿ ಸರ್ಕಾರವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ರಾಜ್ಯದಲ್ಲಿ ಪ್ರವಾಹ ಉಂಟಾಯಿತು. ಪ್ರವಾಹ ಪೀಡಿತ ಎಲ್ಲಾ ಜಿಲ್ಲೆಗಳಿಗೂ ಪ್ರವಾಸ ಕೈಗೊಂಡು ಜನರ ಸಂಕಷ್ಟಕ್ಕೆ ಪರಿಹಾರ ಒದಗಿಸಿದರು. ಇನ್ನೇನು ನಿಟ್ಟುಸಿರು ಬಿಡುವಷ್ಟರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ಕಾಣಿಸಿಕೊಂಡಿತು. ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಈ ರೋಗ ಕಾಡಿದ ಪರಿಣಾಮ ಜನಜೀವನ ಅಸ್ತವ್ಯಸ್ತವಾಯಿತು.

ಇಂತಹ ಸಂಕಷ್ಟದ ಸಮಯದಲ್ಲಿ ಮುಖ್ಯಮಂತ್ರಿಗಳು ಸಚಿವ ಸಂಪುಟದ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅಧಿಕಾರಿಗಳು ಮತ್ತು ಕೊರೊನಾ ವಾರಿಯರ್ಸ್‌ಗಳನ್ನು ಹುರಿದುಂಬಿಸುತ್ತಾ ಸಮರೋಪಾದಿಯಲ್ಲಿ ಕಾರ್ಯಪ್ರವೃತ್ತರಾದ ಕಾರಣ ಕಡಿಮೆ ಅವಧಿಯಲ್ಲೇ ಕೊರೊನಾ ಸೋಂಕಿನ ಪ್ರಮಾಣವನ್ನು ತಗ್ಗಿಸುವಲ್ಲಿ ಯಶಸ್ವಿಯಾದರು.

ಈ ಸಂದರ್ಭದಲ್ಲಿ ಸಂಕಷ್ಟಕ್ಕೆ ಒಳಗಾಗಿದ್ದ ಬಹುಪಾಲು ಎಲ್ಲಾ ವರ್ಗದ ದುರ್ಬಲರಿಗೆ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಪರಿಹಾರ ಪ್ಯಾಕೇಜ್, ಕೈಗೊಂಡ ಕ್ರಮಗಳು ಇತರೆ ರಾಜ್ಯಗಳಿಗೂ ಮಾದರಿಯಾಯಿತು. ಅಲ್ಲದೆ ಕೇಂದ್ರ ಸರ್ಕಾರದಿಂದ ಶ್ಲಾಘನೆಯನ್ನು ಪಡೆದುಕೊಂಡರು.

ಸದಾ ರೈತರ ನೆಮ್ಮದಿಯನ್ನು ಬಯಸುವ ಮುಖ್ಯಮಂತ್ರಿಗಳು ದೇಶದಲ್ಲೇ ಮೊಟ್ಟ ಮೊದಲಿಗೆ ಕೃಷಿ ಬಜೆಟ್ ಅನ್ನು ಮಂಡಿಸಿದರು. ಕೊರೊನಾ ಸಂಕಷ್ಟದಲ್ಲಿ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಿದ ಕಾರಣ 2020-21ನೇ ಸಾಲಿನಲ್ಲಿ ರಾಜ್ಯವು ದೇಶದ ಇತರೆ ರಾಜ್ಯಗಳಿಗಿಂತ ಅತಿ ಹೆಚ್ಚು ಆಹಾರ ಧಾನ್ಯ ಉತ್ಪಾದಿಸಲು ಸಾಧ್ಯವಾಯಿತು.

ಸತತವಾಗಿ ಎರಡು ವರ್ಷಗಳಿಂದ ಎದುರಾದ ಸಂಕಷ್ಟಗಳಿಂದಾಗಿ ಆರ್ಥಿಕ ನಷ್ಟವನ್ನು ಅನುಭವಿಸಿದರೂ ಕೂಡ 2021-22ನೇ ಸಾಲಿನ ಬಜೆಟ್‌ನ ಗಾತ್ರವನ್ನು ಅವರು ಕುಗ್ಗಿಸಲಿಲ್ಲ. ಬದಲಿಗೆ ಹಿಂದಿನ ಬಜೆಟ್‌ಗಿಂತಲೂ ಅಧಿಕ ಮೊತ್ತದ ಬಜೆಟ್ ಅನ್ನು ಮಂಡಿಸಿದರಲ್ಲದೆ, ಜನತೆಯ ಮೇಲೆ ಯಾವುದೇ ಹೊಸ ತೆರಿಗೆಯನ್ನು ವಿಧಿಸಲಿಲ್ಲ.

ರಾಜ್ಯದಲ್ಲಿ ಕೈಗಾರಿಕಾ ನೀತಿ 2020-25 ಅನ್ನು ಜಾರಿಗೆ ತರುವ ಮೂಲಕ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದ ಕೈಗಾರಿಕೆಗಳನ್ನು ಇತರೆ ನಗರಗಳಲ್ಲೂ ಸ್ಥಾಪನೆ ಮಾಡಲು ಅವಕಾಶ ಮಾಡಿಕೊಟ್ಟು, ಇತರೆ ಜಿಲ್ಲೆಗಳ ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವಂತಹ ಅವಕಾಶವನ್ನು ಕಲ್ಪಿಸಿದರು.

ಸರ್ಕಾರ ನೀಡುವ ಪರಿಹಾರದ ಹಣವು ಮಧ್ಯವರ್ತಿಗಳ ಪಾಲಾಗುವುದನ್ನು ತಪ್ಪಿಸುವ ಸಲುವಾಗಿ ಡೈರೆಕ್ಟ್ ಬೆನಿಫಿಷಿಯರಿ ಟ್ರಾನ್ಸ್‌ಫಾರ್ಮ್ (ಡಿಬಿಟಿ) ಮೂಲಕ ಫಲಾನುಭವಿಗಳ ಖಾತೆಗೆ ನೇರವಾಗಿ ಪರಿಹಾರದ ಹಣವನ್ನು ಅವರ ಬ್ಯಾಂಕ್ ಖಾತೆಗೆ ಜಮೆ ಮಾಡುವ ಯೋಜನೆಯನ್ನು ಪ್ರಾರಂಭಿಸಿದರು. ಆ ಮೂಲಕ ಇದುವರೆವಿಗೂ ಹದಿನಾಲ್ಕು ಸಾವಿರ ಕೋಟಿ ರೂ ನಗದು ಫಲಾನುಭವಿಗಳ ಖಾತೆಗೆ ನೇರವಾಗಿ ಜಮೆಯಾಗಿದೆ.

ಸವಾಲುಗಳ ಸರಮಾಲೆಯ ನಡುವೆಯೂ ಸಮಪಾಲು-ಸಮಬಾಳು ಎಂಬ ಧ್ಯೇಯದಡಿಯಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡುತ್ತಾ, ಆತ್ಮನಿರ್ಭರ ಭಾರತದ ಬೆಳಕಿನಲ್ಲಿ ಸ್ವಾವಲಂಬಿ ಕರ್ನಾಟಕವನ್ನು ರೂಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುವುದನ್ನು ನೋಡಿದರೆ, ಅವರದು **"ಸವಾಲುಗಳನ್ನು ಮೀರಿದ ಸಾಧನಾ ಪರ್ವ"** ವೇ ಸರಿ.

**ಓದುಗರೆಲ್ಲರಿಗೂ 75ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು.**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Downloaded From: www.kpscvaani.com

ಜುಲೈ 26ಕ್ಕೆ ರಾಜ್ಯ ಸರ್ಕಾರ ರಚನೆಯಾಗಿ ಎರಡು ವರ್ಷ ಪೂರ್ಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಎರಡು ವರ್ಷದಲ್ಲಿ ಎದುರಿಸಿದ ಸವಾಲುಗಳು, ಅಭಿವೃದ್ಧಿ ಕಾರ್ಯಕ್ರಮಗಳು, ಪ್ರಮುಖ ತೀರ್ಮಾನಗಳು ಇವೇ ಮುಂತಾದವುಗಳನ್ನು ಪುನರ್ ಮನನ ಮಾಡಿಕೊಳ್ಳುವುದೇ ಈ ಲೇಖನದ ಉದ್ದೇಶವಾಗಿದೆ.

ನಂಜುಂಡಪ್ಪ ವಿ

ಸವಾಲುಗಳ ನಡುವೆಯೂ

# ಸಮೃದ್ಧ–ಸ್ವಾವಲಂಬಿ ಕರ್ನಾಟಕ ನಿರ್ಮಾಣಕ್ಕೆ ಆದ್ಯತೆ





Downloaded From: www.kpscvaani.com

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರ್ಕಾರ ಜುಲೈ 26ಕ್ಕೆ ಎರಡು ವರ್ಷ ತುಂಬುತ್ತಿದೆ. ಹಿಂದೆಂದೂ ಇಲ್ಲದಷ್ಟು ಸವಾಲುಗಳಿಂದ ಕೂಡಿದ ಸರ್ಕಾರ ಇದಾಗಿದ್ದು, ಅಧಿಕಾರ ಎಂಬುದು ಹೂವಿನ ಹಾಸಿಗೆಯಾಗಿರಲಿಲ್ಲ. ಸದಾ ಒಂದಿಲ್ಲೊಂದು ಸಮಸ್ಯೆ, ಸವಾಲು, ಸಂಕಷ್ಟಗಳನ್ನು ಎದುರಿಸುತ್ತಲೇ ಯಡಿಯೂರಪ್ಪ ಅವರು ಆಡಳಿತ ನಡೆಸುತ್ತಿದ್ದಾರೆ. ಹಿಂದೆ ಯಾವ ಮುಖ್ಯಮಂತ್ರಿಗಳು ಇಷ್ಟೊಂದು ಅಡೆತಡೆಗಳನ್ನು ಕಂಡಿರಲಿಲ್ಲ. ಅದು ಪ್ರವಾಹವಾಗಿರಬಹುದು, ಕೋವಿಡ್ ಮಹಾ ಮಾರಿಯೇ ಇರಬಹುದು, ಸಾಮಾಜಿಕವಾಗಿ, ಆರ್ಥಿಕ, ರಾಜಕೀಯವಾಗಿಯೂ ಎಲ್ಲವನ್ನೂ ಬಿ.ಎಸ್. ಯಡಿಯೂರಪ್ಪ ಅವರು ಮೆಟ್ಟಿನಿಂತಿದ್ದಾರೆ. ಮೂಲತಃ ಹೋರಾಟ ಹಿನ್ನೆಲೆಯ, ಅದಮ್ಯ ಉತ್ಸಾಹ, ವಿಶ್ವಾಸ, ಛಲ ಹೊಂದಿರುವ ಬಿ.ಎಸ್. ಯಡಿಯೂರಪ್ಪ ವ್ಯಕ್ತಿಗತವಾಗಿ, ಒಂದು ತಂಡದ ನೇತಾರರಾಗಿ ಎಲ್ಲವನ್ನೂ, ಎಲ್ಲರನ್ನೂ  ನಿಭಾಯಿಸಿಕೊಂಡು ಹೋಗುತ್ತಿದ್ದಾರೆ.



ಮೊದಲ ವರ್ಷದ ಆರಂಭದಲ್ಲಿ ಪ್ರವಾಹ ಪರಿಸ್ಥಿತಿ ಎದುರಾದಾಗ ಮುಖ್ಯಮಂತ್ರಿ ಒಬ್ಬರೇ ಸಂಪುಟದಲ್ಲಿದ್ದರು. ಯಾವುದಕ್ಕೂ ಎದೆಗುಂದದೆ ಇಡೀ ರಾಜ್ಯದ ಸಮಸ್ಯೆಗಳನ್ನು ಒಬ್ಬರೇ ಎದುರಿಸಿದರು. ಆ ನಂತರ ಕೋವಿಡ್-19 ಸಾಂಕ್ರಾಮಿಕ. ಮೊದಲ ಹಾಗೂ ಎರಡನೇ ಅಲೆಗಳಿಂದ ಬದುಕು ಬಹುತೇಕ ಜರ್ಝರಿತಗೊಂಡಿತ್ತು. ಎರಡನೇ ಅಲೆ ಸಂದರ್ಭದಲ್ಲಿ ಜನ ಜೀವನ ತೀವ್ರ ಬಾಧಿತವಾಗಿತ್ತು. ಎಲ್ಲೆಡೆ ಆಂಬುಲೆನ್ಸ್ ಸೈರನ್ ಸದ್ದು ಜನರನ್ನು ಆತಂಕಕ್ಕೀಡು ಮಾಡಿತ್ತು. ಆಮ್ಲಜನಕ, ಹಾಸಿಗೆಗಳಿಗೆ ಇನ್ನಿಲ್ಲದ ಬೇಡಿಕೆ, ಯಾರೂ ಊಹಿಸದ ರೀತಿಯಲ್ಲಿ ಶವ ಸಂಸ್ಕಾರಕ್ಕೂ ಸಾಲುಗಟ್ಟಿ ನಿಂತ ದೃಶ್ಯ. ಈ ಎಲ್ಲಾ ಬೆಳವಣಿಗೆಗಳಿಂದ ಜನ ಭೀತಿಗೊಂಡಿದ್ದರು.  ಯಡಿಯೂರಪ್ಪ ಅವರು ಸಹ ಎರಡು ಬಾರಿ ಕೋವಿಡ್ ಸೋಂಕಿಗೆ ಒಳಗಾಗಿದ್ದರೂ ಧೃತಿಗೆಡಲಿಲ್ಲ. ಆಸ್ಪತ್ರೆಯಲ್ಲೇ ಕಡತಗಳ ವಿಲೇವಾರಿ, ದೈನಂದಿನ ಆಡಳಿತ ವ್ಯವಸ್ಥೆ ನಿಭಾಯಿಸಿ ಕರ್ತವ್ಯ ಪ್ರಜ್ಞೆ ಮೆರೆದರು. ಬಹುಬೇಗ ಚೇತರಿಸಿಕೊಂಡು ದೈನಂದಿನ ಆಡಳಿತ ವ್ಯಹವಾರಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡು ಸಮಾಜಕ್ಕೆ, ದೇಶಕ್ಕೆ ಸಕಾರಾತ್ಮಕ ಸಂದೇಶ ರವಾನಿಸಿದರು.



ಕೋವಿಡ್ ಸಂಕಷ್ಟವನ್ನು ಚೆನ್ನಾಗಿಯೇ ಅರಿತಿದ್ದ ಅವರು, ಮೊದಲ ಅಲೆ ಸಂದರ್ಭದಲ್ಲಿ ಇಡೀ ದೇಶದಲ್ಲಿ ಮೊಟ್ಟಮೊದಲು ಲಾಕ್‌ಡೌನ್ ಆದೇಶ ಜಾರಿ ಮಾಡಿ ಗಮನ ಸೆಳೆದಿದ್ದರು. ಎರಡನೇ ಅಲೆ ಕಾಲದಲ್ಲೂ ರಾಜ್ಯದಲ್ಲಿರುವ ಜಾಗತಿಕ ಮಟ್ಟದ ವೈದ್ಯಕೀಯ ಸಮೂಹವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಲಹೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದರು. ಮೇ ಮಧ್ಯ ಭಾಗದಲ್ಲಿ ಪರಾಕಾಷ್ಠೆ ತಲುಪಿದ್ದ ಸೋಂಕು ಸಂಖ್ಯೆಯನ್ನು ತಗ್ಗಿಸಲು ರಚನಾತ್ಮಕ ಕ್ರಮಗಳನ್ನು ಕೈಗೊಂಡರು. ಒಂದೇ ತಿಂಗಳಲ್ಲಿ ಪಾಸಿಟಿವಿಟಿ ದರವನ್ನು ಶೇ 5ಕ್ಕಿಂತ ಕಡಿಮೆ ಮಾಡಿ ರಾಜ್ಯವನ್ನು ಲಾಕ್‌ಡೌನ್‌ನಿಂದ ಅನ್‌ಲಾಕ್ ಹಂತಕ್ಕೆ ತರುವಲ್ಲಿ ಯಶಸ್ವಿಯಾದರು. ಖಾಸಗೀ ಸಂಸ್ಥೆಗಳು, ಸ್ವಯಂ ಸೇವಾ ಸಂಘಟನೆಗಳು, ಮಠಾಧೀಶರು, ಮತ್ತು ಜನಸಾಮಾನ್ಯರನ್ನು ಸಹ ತಮ್ಮ ಹೋರಾಟದಲ್ಲಿ ತೊಡಗಿಸಿಕೊಂಡರು.



ಸರ್ಕಾರದ ಮಾರ್ಗಸೂಚಿಗಳನ್ನು ಪರಿಪಾಲನೆ ಮಾಡುವಂತೆ ವಿಶ್ವಾಸ ತುಂಬಿದರು. ಮುಂಚೂಣಿ ಸೇನಾನಿಗಳಲ್ಲಿ ಆತ್ಮಸ್ಥೈರ್ಯ ಮೂಡಿಸಿದರು. ಕೊರೊನಾ ಸಾಂಕ್ರಾಮಿಕ ವಿರುದ್ಧದ ಹೋರಾಟದಲ್ಲಿ ಯಶಸ್ವಿಯಾದರು. ಮೊದಲ ಅಲೆಗಿಂತ ಎರಡನೇ ಅಲೆ ನಿಭಾಯಿಸುವುದು ಸವಾಲಿನದಾಗಿತ್ತು. ಕೊರೊನಾ ಸೇನಾನಿಗಳಿಗೆ ಜನವರಿಯಿಂದಲೇ ಅತ್ಯಂತ ವ್ಯವಸ್ಥಿತವಾಗಿ ಲಸಿಕೆ ಹಾಕಿಸಿದ ಪರಿಣಾಮ ಉಳಿದವರ ಜೀವ ರಕ್ಷಿಸಲು ಸಾಧ್ಯವಾಯಿತು. ಇಲ್ಲವಾದಲ್ಲಿ ವೈದ್ಯರು, ದಾದಿಯರು, ಅರೆ ವೈದ್ಯಕೀಯ ಸಿಬ್ಬಂದಿ, ಕೊರೊನಾ ಸೇನಾನಿಗಳು ಸೋಂಕಿಗೆ ಒಳಗಾಗಿ ಇಡೀ ಆರೋಗ್ಯ ವ್ಯವಸ್ಥೆ ಕುಸಿದು ಬೀಳುವ ಅಪಾಯ ಇತ್ತು. ಬಿ.ಎಸ್. ಯಡಿಯೂರಪ್ಪ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರ ಬದ್ಧತೆ, ಪ್ರೇರಣಾದಾಯಕ ಮಾತುಗಳಿಂದ





Downloaded From: www.kpscvaani.com



> **ಮೇ ಮಧ್ಯ ಭಾಗದಲ್ಲಿ ಪರಾಕಾಷ್ಠೆ ತಲುಪಿದ್ದ ಸೋಂಕು ಸಂಖ್ಯೆಯನ್ನು ತಗ್ಗಿಸಲು ರಚನಾತ್ಮಕ ಕ್ರಮಗಳನ್ನು ಕೈಗೊಂಡು ಒಂದೇ ತಿಂಗಳಲ್ಲಿ ಪಾಸಿಟಿವಿಟಿ ದರವನ್ನು ಶೇ 5ಕ್ಕಿಂತ ಕಡಿಮೆ ಮಾಡಿ ರಾಜ್ಯವನ್ನು ಲಾಕ್‌ಡೌನ್‌ನಿಂದ ಅನ್‌ಲಾಕ್ ಹಂತಕ್ಕೆ ತರುವಲ್ಲಿ ಸರ್ಕಾರ ಯಶಸ್ವಿಯಾಯಿತು.**

ಪ್ರಭಾವಿತರಾದ ಕೊರೊನಾ ಸೇನಾನಿಗಳು ಬಹುಬೇಗ ಲಸಿಕೆ ಪಡೆದು ತಮ್ಮ ಜೀವ ಉಳಿಸಿಕೊಂಡು ಅಸಂಖ್ಯಾತ ಜೀವಗಳನ್ನೂ ರಕ್ಷಿಸಿದರು.

ಎರಡನೇ ಅಲೆ ತಡೆಗೆ ಅವಿರತವಾಗಿ ಸಭೆಗಳನ್ನು ನಡೆಸಿ, ಸೋಂಕಿತರಿಗೆ ಚಿಕಿತ್ಸೆ, ಆಸ್ಪತ್ರೆಗಳಿಗೆ ವೈದ್ಯಕೀಯ ಸಲಕರಣೆಗಳಿಗೆ ತೊಂದರೆಯಾಗದಂತೆ ನೋಡಿಕೊಂಡರು. ಕೋವಿಡ್ ಸಮರದಲ್ಲಿ ವೈದ್ಯರ ಕೊರತೆ ನೀಗಿಸಲು ಅಲ್ಪಾವಧಿಯಲ್ಲಿ ನೇರ ನೇಮಕಾತಿ ಮೂಲಕ 1,763 ವೈದ್ಯರನ್ನು ನೇಮಿಸಿಕೊಂಡು ಐತಿಹಾಸಿಕ ಸಾಧನೆ ಬರೆದರು.

ಕೊರೊನಾ ಎರಡನೇ ಅಲೆ ಗ್ರಾಮೀಣ ಪ್ರದೇಶಗಳಿಗೆ ಹರಡದಂತೆ ನೋಡಿಕೊಂಡರು. ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯಪಡೆಗಳನ್ನು ಬಲಗೊಳಿಸಿ, ಪಂಚಾಯತ್ ಅಧ್ಯಕ್ಷರೊಂದಿಗೆ ವಿಡಿಯೋ ಸಂವಾದ ನಡೆಸಿ ಮುಂಜಾಗ್ರತೆಗೆ ಒತ್ತು ನೀಡಿದರು. ದಾದಿಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರೊಂದಿಗೂ ವರ್ಚುವಲ್ ಸಂವಾದ ನಡೆಸಿ ಸೋಂಕು ತಡೆಗೆ ಎಲ್ಲರನ್ನೂ ತೊಡಗಿಸಿಕೊಂಡರು.

ಮೂರನೇ ಅಲೆಯಲ್ಲಿ ಸೋಂಕು ಮಕ್ಕಳ ಮೇಲೆ ಪರಿಣಾಮ ಬೀರಲಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿರುವ ಕಾರಣ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಮಕ್ಕಳ ರಕ್ಷಣಾ ಕ್ರಮಗಳನ್ನು ಬಲಪಡಿಸುವಂತೆ ಸೂಚಿಸಿದರು. ಪರಿಣಾಮ ಅಪೌಷ್ಠಿಕ ಮತ್ತು ಅನಾರೋಗ್ಯ ಮಕ್ಕಳನ್ನು ಗುರುತಿಸಿ ಆರೈಕೆ ಕೇಂದ್ರಕ್ಕೆ ಸೇರಿಸುವ ಜತೆಗೆ ಮಕ್ಕಳು, ಬಾಣಂತಿಯರು ಹಾಗೂ ಗರ್ಭಿಣಿಯರ ಯೋಗಕ್ಷೇಮಕ್ಕೆ ಒತ್ತು ನೀಡುವಂತಾಯಿತು. ಕೊರೊನಾದಿಂದ ಹೆತ್ತವರನ್ನು ಕಳೆದುಕೊಂಡು ಅನಾಥರಾದ ಮಕ್ಕಳ ನೆರವಿಗಾಗಿ **'ಮುಖ್ಯಮಂತ್ರಿಗಳ ಬಾಲಸೇವಾ ಯೋಜನೆ"** ಜಾರಿಗೆ ತಂದಿರುವುದು ಸರ್ಕಾರದ ಮಾನವೀಯತೆಗೆ ಸಾಕ್ಷಿಯಾಗಿದೆ.



ಕೋವಿಡ್-19 ವಿರುದ್ಧದ ಹೋರಾಟ ಕೇವಲ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ ಎಂಬುದನ್ನು ಮನಗಂಡ ಮುಖ್ಯಮಂತ್ರಿ ಅವರು, ಸರ್ಕಾರ ಮತ್ತು ದಾನಿಗಳ ನಡುವೆ ಪಾರದರ್ಶಕ ಸೇತುವೆಯಾಗಬಲ್ಲ 'ಆಕಾಂಕ್ಷಾ' ಎಂಬ ಪೋರ್ಟಲ್ ಅನ್ನು ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಅಸ್ತಿತ್ವಕ್ಕೆ ತಂದರು. ಹಲವು ಜಾಗತಿಕ ಮಟ್ಟದ ಮತ್ತು ಸ್ಥಳೀಯ ಕಂಪೆನಿಗಳು ಸಿ.ಎಸ್.ಆರ್ ನಿಧಿಯಡಿ ಆರ್ಥಿಕ ಮತ್ತು ವೈದ್ಯಕೀಯ ಪರಿಕರಗಳನ್ನೊಳಗೊಂಡಂತೆ ಸಾಂಸ್ಥಿಕ ನೆರವು ಒದಗಿಸಿರುವುದು ಸಹ ದಾಖಲಾರ್ಹ ಸಂಗತಿಯಾಗಿದೆ.

ಮೊದಲ ಅಲೆ ಕಾಲದಲ್ಲಿ ಲಾಕ್‌ಡೌನ್ ನಿಂದ ಹಲವು ಸಮುದಾಯಗಳು ಸಂಕಷ್ಟಕ್ಕೆ ಸಿಲುಕಿದಾಗ ಪರಿಹಾರ ನೀಡಲಾಗಿತ್ತು. ಎರಡನೇ ಅಲೆ ಕಾಲದಲ್ಲೂ ಪರಿಹಾರ ವಿತರಿಸಲಾಗುತ್ತಿದೆ. ಮೊದಲಿಗೆ 1,250 ಕೋಟಿ ರೂ ಮೊತ್ತದ ಪರಿಹಾರ ಪ್ಯಾಕೇಜ್ ಘೋಷಣೆ ಮಾಡಿದರು.



Downloaded From: www.kpscvaani.com





ನಂತರ ಪರಿಹಾರ ಕೋರಿ ಬೇರೆ ಬೇರೆ ವರ್ಗದಿಂದಲೂ ಮನವಿಗಳು ಬಂದ ಹಿನ್ನೆಲೆಯಲ್ಲಿ ಆರ್ಥಿಕ ಹಿಂಜರಿತದ ನಡುವೆಯೂ ಮುಖ್ಯಮಂತ್ರಿಗಳು 500 ಕೋಟಿ ರೂ ಗೂ ಹೆಚ್ಚಿನ ಮೊತ್ತದ ಎರಡನೇ ಪ್ಯಾಕೇಜ್ ಪ್ರಕಟಿಸಿದರು.

25 ಲಕ್ಷ ಕಟ್ಟಡ ನಿರ್ಮಾಣ ಮತ್ತು ಇತರೆ ಕಾರ್ಮಿಕರಿಗೆ 749.55 ಕೋಟಿ ರೂ ನೆರವಿನಿಂದ ತಲಾ 3 ಸಾವಿರ ರೂ, ಬೀದಿ ಬದಿ ವ್ಯಾಪಾರಿಗಳಿಗೆ 38.33 ಕೋಟಿ ರೂ, 59 ಸಾವಿರ ಪವರ್ ಲೂಮ್‌ನ ಕೆಲಸಗಾರರು, ಸಂಕಷ್ಟದಲ್ಲಿದ್ದ ಚಾಲಕರಿಗೆ, ಚಲನಚಿತ್ರೋದ್ಯಮ ಹಾಗೂ ದೂರದರ್ಶನ ಮಾಧ್ಯಮದಲ್ಲಿನ ನೋಂದಾಯಿತ 22 ಸಾವಿರ ಅಸಂಘಟಿತ ಕಾರ್ಮಿಕರು, ಮುಜರಾಯಿ ಇಲಾಖೆಯ 'ಸಿ' ವರ್ಗದ ದೇವಸ್ಥಾನಗಳ ಅರ್ಚಕರು, ಅಡುಗೆ ಕೆಲಸಗಾರರು ಸೇರಿ ಸುಮಾರು 36,047 ಸಿಬ್ಬಂದಿ, ಮಸೀದಿಗಳ ಪೇಶ್ ಇಮಾಮ್ ಮತ್ತು ಫೌಜಿಂಗಳಿಗೆ, 42,574 ಆಶಾ ಕಾರ್ಯಕರ್ತೆಯರಿಗೆ ತಲಾ 3 ಸಾವಿರ ರೂ, 64,423 ಅಂಗನವಾಡಿ ಕಾರ್ಯಕರ್ತರು, 59,169 ಅಂಗನವಾಡಿ ಸಹಾಯಕರಿಗೆ ತಲಾ 2 ಸಾವಿರ ರೂ ಮತ್ತು ಅನುದಾನ ರಹಿತ ಶಾಲೆಗಳ ಶಿಕ್ಷಕರಿಗೆ ತಲಾ 5 ಸಾವಿರ ರೂಗಳನ್ನು ಎರಡನೇ ಪ್ಯಾಕೇಜ್‌ನಲ್ಲಿ ಪರಿಹಾರವಾಗಿ ನೀಡಲಾಗುತ್ತಿದೆ. ಮೂರನೇ ಅಲೆಯನ್ನು ಎದುರಿಸಲು ಖ್ಯಾತ ವೈದ್ಯ ಡಾ.ದೇವಿಪ್ರಸಾದ್ ಶೆಟ್ಟಿ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿ ಮುನ್ನೆಚ್ಚರಿಕೆ ವಹಿಸಲಾಗಿದೆ. ಸರ್ಕಾರ ಎಲ್ಲಾ ಆಯಾಮಗಳಿಂದಲೂ ಮೂರನೇ ಅಲೆ ತಡೆಗೆ ಸಜ್ಜಾಗಿದ್ದು, ಇದೀಗ ಯಾರೂ ಆತಂಕ ಪಡುವ ಅಗತ್ಯವಿಲ್ಲ ಎಂದು ಸ್ವತಃ ಯಡಿಯೂರಪ್ಪ ಅವರು ಭರವಸೆ ನೀಡಿದ್ದಾರೆ.

ಲಾಕ್‌ಡೌನ್ ಸಮಯದಲ್ಲಿ ಹಾಲಿನ ಬೇಡಿಕೆ ಕಡಿಮೆಯಾದ ಕಾರಣ ರೈತರಿಗೆ ನಷ್ಟ ತಪ್ಪಿಸಲು ಹೆಚ್ಚುವರಿ ಹಾಲಿನಿಂದ ಹಾಲಿನ ಪುಡಿ ತಯಾರಿಸಿ ವಿದ್ಯಾರ್ಥಿಗಳಿಗೆ ಆಹಾರ ಧಾನ್ಯಗಳ ಜೊತೆಗೆ ಅರ್ಧ ಕೆ.ಜಿ. ಹಾಲಿನ ಪುಡಿ ನೀಡಲಾಗುತ್ತಿದೆ. ಕಿರು, ಸಣ್ಣ, ಮಧ್ಯಮ ಉದ್ಯಮ ವಲಯಕ್ಕೆ ನಿಗದಿತ ವಿದ್ಯುತ್ ಶುಲ್ಕ ವಿನಾಯಿತಿ ಸೇರಿ ಹಲವು ರಿಯಾಯಿತಿಗಳನ್ನು ಪ್ರಕಟಿಸಿದ್ದಾರೆ. ಬಿಪಿಎಲ್ ಕುಟುಂಬಗಳಲ್ಲಿ ದುಡಿಯುವ ವ್ಯಕ್ತಿ ಕೊರೊನಾದಿಂದ ಮೃತರಾದಲ್ಲಿ ಅಂತಹ ಕುಟುಂಬಕ್ಕೆ ಒಂದು ಲಕ್ಷ ರೂ ಪರಿಹಾರ ನೀಡುವ ಯೋಜನೆಯನ್ನು ಇಡೀ ದೇಶದಲ್ಲಿಯೇ ಮಾದರಿಯಾಗಿ ಜಾರಿಗೆ ತಂದಿದ್ದು, ಈ ಕುರಿತು ಅಧಿಕೃತ ಆದೇಶ ಜಾರಿಯಾಗಿದೆ. ಕಂದಾಯ ಇಲಾಖೆಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ನಿರ್ದೇಶಕರು ಪರಿಹಾರ ವಿತರಣೆ ಜವಾಬ್ದಾರಿ ನಿಭಾಯಿಸುತ್ತಿದ್ದಾರೆ. ಸರ್ಕಾರದ ಈ ಸವಲತ್ತು ಕೊರೊನಾ ಮೊದಲ ಮತ್ತು ಎರಡನೇ ಅಲೆಗಳಲ್ಲದೆ ಮುಂದೆಯೂ ಕೊರೊನಾದಿಂದ ಮೃತಪಟ್ಟವರಿಗೆ ಅನ್ವಯಿಸಲಿದೆ. ಇದಕ್ಕೆ 300 ಕೋಟಿ ರೂ ವೆಚ್ಚವಾಗಲಿದ್ದು, ಅಂದಾಜು 20 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಸಹಾಯವಾಗಲಿದೆ.











Downloaded From: www.kpscvaani.com



**ಇಡೀ ದೇಶದಲ್ಲಿಯೇ ಮೊದಲ ಕೃಷಿ ಬಜೆಟ್ ಮಂಡಿಸಿ ತಮ್ಮ ರೈತಪರ ಕಾಳಜಿ ತೋರಿದ್ದ ಬಿ.ಎಸ್. ಯಡಿಯೂರಪ್ಪ ಅವರು ಕೋವಿಡ್ ಎದುರಿಸಲು ಪೌಷ್ಠಿಕ ಆಹಾರ ಒದಗಿಸುವ, ನಮ್ಮ ಆಹಾರ ಭದ್ರತೆಗೆ ಕೊಡುಗೆ ನೀಡುತ್ತಿರುವ ಕೃಷಿಕರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದಂತೆ ನೋಡಿಕೊಂಡು ತಾವು ಎಂದೂ ರೈತರ ಪರ ಎಂಬುದನ್ನು ಸಾಬೀತು ಪಡಿಸಿದ್ದಾರೆ.**

ಕೋವಿಡ್ ಸೋಂಕಿತರ ನೆರವಿಗಾಗಿ ಯಡಿಯೂರಪ್ಪ ಅವರು ಮೊದಲ ಅಲೆ ಸಂದರ್ಭದಲ್ಲೇ ತಮ್ಮ ಒಂದು ವರ್ಷ ವೇತನದ ಒಟ್ಟು ಮೊತ್ತ 24.10 ಲಕ್ಷ ರೂ ಹಣವನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆಯಾಗಿ ನೀಡುವುದಾಗಿ ಪ್ರಕಟಿಸುತ್ತಿದ್ದಂತೆ ಹಲವು ಸಚಿವರು ಇದನ್ನು ಅನುಸರಿಸಿದರು. ಸರ್ಕಾರಿ ನೌಕರರ ಒಂದು ದಿನದ ವೇತನದ ಮೊತ್ತ 200 ಕೋಟಿ ರೂ ನಿಧಿಗೆ ಜಮೆಯಾಗಿದೆ. ಹಲವು ನಟ, ನಟಿಯರು, ಸಮಾಜದ ಗಣ್ಯರು, ಉದ್ಯಮಿಗಳು, ಖಾಸಗಿ ಸಂಸ್ಥೆಯವರು ಸಹಾಯ ಹಸ್ತ ಚಾಚಿರುವುದು ವಿಶೇಷ.

ಕೋವಿಡ್ ಸಂದರ್ಭದಲ್ಲಿ ಎಲ್ಲಾ ಚಟುವಟಿಕೆಗಳು ಸ್ಥಗಿತಗೊಂಡರೂ ಕೃಷಿ ಚಟುವಟಿಕೆ ನಿರಂತರವಾಗಿತ್ತು. ನಮ್ಮ ರೈತ ಗೀತೆ ಸಾಲಿನಲ್ಲಿ "ರಾಜ್ಯಗಳಳಿಯಲಿ, ರಾಜ್ಯಗಳುಳಿಯಲಿ" ಎಂಬಂತೆ ಯಾವುದೇ ಯುದ್ಧ, ವಿಪತ್ತುಗಳಿಂದ ರಾಜ್ಯಗಳೇ ಅಳಿಯಲಿ, ಕೃಷಿ ಚಟುವಟಿಕೆ ಅಬಾಧಿತವಾಗಿ ನಡೆಯುತ್ತಲೇ ಇರುತ್ತದೆ ಎಂಬುದು ಇದರ ಸಾರಂಶ. ಇದಕ್ಕೆ ರಾಜ್ಯವೂ ಸಾಕ್ಷಿಯಾಗಿದೆ. ಇಡೀ ದೇಶದಲ್ಲಿಯೇ ಮೊದಲ ಕೃಷಿ ಬಜೆಟ್ ಮಂಡಿಸಿ ತಮ್ಮ ರೈತಪರ ಕಾಳಜಿ ತೋರಿದ್ದ ಬಿ.ಎಸ್. ಯಡಿಯೂರಪ್ಪ ಅವರು ಕೋವಿಡ್ ಎದುರಿಸಲು ಪೌಷ್ಠಿಕ ಆಹಾರ ಒದಗಿಸುವ, ನಮ್ಮ ಆಹಾರ ಭದ್ರತೆಗೆ ಕೊಡುಗೆ ನೀಡುತ್ತಿರುವ ಕೃಷಿಕರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದಂತೆ ನೋಡಿಕೊಂಡಿದ್ದಾರೆ.

ಮೊದಲ ಅಲೆಯ ಸಂದರ್ಭದಲ್ಲೂ ರೈತರ ಬೆಳೆಗಳ ಸಾಗಾಟಕ್ಕೆ ಮುಕ್ತ ಅವಕಾಶ ಕಲ್ಪಿಸಿದ್ದರು. ಎಪಿಎಂಸಿಗಳನ್ನು ತೆರೆಯುವ ಜತೆಗೆ ರೈತರು ಬೆಳೆದ ತರಕಾರಿ ಹಣ್ಣುಗಳನ್ನು ಹೆಚ್ಚುವರಿಯಾಗಿ ಖರೀದಿಸಲು ಹಾಪ್‌ಕಾಮ್ಸ್‌ಗೆ ಆದೇಶ ನೀಡಿದರು. ರೈಲುಗಳ ಮೂಲಕ ಹೊರ ರಾಜ್ಯಗಳಿಗೆ ಹಣ್ಣು ತರಕಾರಿ ಸಾಗಾಟಕ್ಕೆ ಅನುಮತಿ ದೊರಕಿಸಿಕೊಟ್ಟರು. ವಿಜಯಪುರ, ಬಾಗಲಕೋಟೆ ಹಾಗೂ ಹುಮ್ನಾಬಾದ್‌ಗಳಲ್ಲಿ ಶೀತಲಗೃಹಗಳನ್ನು ಉಚಿತವಾಗಿ ಉಪಯೋಗಿಸಲು ರೈತರಿಗೆ ಅವಕಾಶ ಕಲ್ಪಿಸಿದರು. ರಾಜ್ಯದ 27 ರೇಷ್ಮೆ ಮಾರುಕಟ್ಟೆಗಳನ್ನು ತೆರೆಯಲು ಸೂಚಿಸಿದರು. ರೈತರ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರದ ಮಟ್ಟದಲ್ಲಿ "ಅಗ್ರಿ ವಾರ್ ರೂಮ್" ಸಹಾಯವಾಣಿ ಸಂಖ್ಯೆ-080-22210237 ಅನ್ನು ಸ್ಥಾಪಿಸಲಾಯಿತು. ಎರಡನೇ ಅಲೆ ಸಂದರ್ಭದಲ್ಲೂ ಇದು ಮುಂದುವರೆದಿತ್ತು. ಕೇಂದ್ರ ಸರ್ಕಾರ ರಸಗೊಬ್ಬರ ದರ ಇಳಿಕೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದು, ಇದನ್ನು ಕೃಷಿ ಸಚಿವ ಬಿ.ಸಿ. ಪಾಟೀಲ್ ನೇತೃತ್ವದ ತಂಡ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ.

2020 - 21 ನೇ ಸಾಲಿನಲ್ಲಿ ಇಡೀ ದೇಶದಲ್ಲಿಯೇ ಅತಿ ಹೆಚ್ಚು ಆಹಾರ ಧಾನ್ಯ ಉತ್ಪಾದಿಸಿ ಗಮನಾರ್ಹ ಸಾಧನೆ ಮಾಡಿದ ರಾಜ್ಯ ಕರ್ನಾಟಕವಾಗಿದ್ದು, ದೇಶದ ಜಿಡಿಪಿಗೆ ಹೆಚ್ಚಿನ ಕೊಡುಗೆ ನೀಡಿದೆ ಎಂಬುದು ಸಹ ಮಹತ್ವದ ಸಂಗತಿ. ಹೂವು, ಹಣ್ಣು, ತರಕಾರಿ ಬೆಳೆಗಾರರಿಗೆ 19 ಕೋಟಿ ರೂ ಪರಿಹಾರ, ಭಾರತ ಸರ್ಕಾರದ ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ನೋಂದಾಯಿತ 18,746 ಮೀನುಗಾರರಿಗೆ, 7,668 ಒಳನಾಡು ದೋಣಿ ಮಾಲೀಕರಿಗೆ ಪರಿಹಾರ, ಸಹಕಾರ ಸಂಘಗಳಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಕಂತು ಮರುಪಾವತಿ ಅವಧಿಯನ್ನು ಮೂರು ತಿಂಗಳು ಮುಂದೂಡಿದ್ದು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಗೆ ಸರಿ ಸಮಾನವಾಗಿ ಎರಡು ಸಾವಿರ ರೂ ನೆರವನ್ನು ಎರಡು ಸಮಾನ ಕಂತುಗಳಲ್ಲಿ ನೀಡುತ್ತಿರುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಿದೆ.

ಕೊರೊನಾ ನಿಯಂತ್ರಣ ಸಂಬಂಧ ರಾಜ್ಯ ಸರ್ಕಾರ ಕೈಗೊಂಡ ಹಲವು ಕ್ರಮಗಳು ರಾಷ್ಟ್ರವ್ಯಾಪಿ ಮೆಚ್ಚುಗೆಗೆ ಕಾರಣವಾಗಿದೆ. ತಂತ್ರಜ್ಞಾನ ಆಧರಿತ ಉಪ ಕ್ರಮಗಳನ್ನು ಕೇಂದ್ರ ಸರ್ಕಾರ ಶ್ಲಾಘಿಸಿದ್ದು, ಅದರಲ್ಲಿ ವಾರ್ ರೂಂ ತೆರೆದಿರುವ ಹಾಗೂ ಗೃಹ ಆರೈಕೆಯಲ್ಲಿರುವವರ ಮೇಲೆ ನಿಗಾ ಇಡಲು ಅಭಿವೃದ್ಧಿ ಪಡಿಸಿರುವ ಆ್ಯಪ್ ಅನ್ನು ಸ್ವತಃಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದು, ಇತರೆ ರಾಜ್ಯಗಳೂ ಇಂತಹ ತಂತ್ರಜ್ಞಾನ ಅಳವಡಿಸಿಕೊಳ್ಳುವಂತೆ ಸೂಚಿಸಿದ್ದರು.

ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮುಖ್ಯಮಂತ್ರಿ ಅವರ ಕಳಕಳಿಯ ಮನವಿ ಕೂಡ ಅಷ್ಟೇ ಮಹತ್ವದ ಪರಿಣಾಮ ಬೀರಿದೆ. ದೇಶದಾದ್ಯಂತ 21 ದಿನ ಲಾಕ್‌ಡೌನ್ ವಿಧಿಸಿದ್ದಕ್ಕೆ ಸ್ವತಃ ನರೇಂದ್ರ ಮೋದಿ ಅವರೇ ದೇಶದ ಜನತೆಯಲ್ಲಿ ಕ್ಷಮೆ ಕೇಳಿದ್ದಾರೆ. ಪ್ರಧಾನಿಯವರೇ ಕ್ಷಮೆ ಕೇಳುವ ಅನಿವಾರ್ಯತೆ ಇದೆ ಎಂದರೆ ಪರಿಸ್ಥಿತಿಯ ಗಂಭೀರತೆಯನ್ನು ರಾಜ್ಯದ



Downloaded From: www.kpscvaani.com

ಜನರೂ ಅರ್ಥ ಮಾಡಿಕೊಳ್ಳಬೇಕು ಎಂಬ ಮನವಿ ಸಾಕಷ್ಟು ಮಂದಿಯನ್ನು ಪ್ರಭಾವಿಸಿತು. ಇದರಿಂದ ಲಾಕ್ ಡೌನ್ ಮತ್ತು ಕರ್ಫ್ಯೂ ಜಾರಿಗೆ ಜನರ ಸಹಕಾರ ಕೂಡ ದೊರೆತದ್ದು ಕೂಡ ವಿಶೇಷ.

ಕೋವಿಡ್ ಸಂದರ್ಭದಲ್ಲಿ ಅನಾಥ ಶವಗಳನ್ನು ಅಂತ್ಯ ಸಂಸ್ಕಾರ ಮಾಡಿ ಮಗನ ಸ್ಥಾನದಲ್ಲಿ ನಿಂತು ರಾಜ್ಯ ಸರ್ಕಾರ ಕೆಲಸ ಮಾಡಿದ್ದನ್ನು ಮರೆಯುವಂತೆಯೇ ಇಲ್ಲ. ಸೋಂಕಿನಿಂದ ಸ್ವಂತ ತಂದೆ, ಹೆತ್ತ ತಾಯಿ ಸತ್ತಾಗ ಕೆಲವೆಡೆ ಅವರ ಮಕ್ಕಳು ಅಂತಿಮ ದರ್ಶನಕ್ಕೂ ಆಗಮಿಸಲಿಲ್ಲ. ಇನ್ನೂ ಕೆಲ ಪ್ರಕರಣಗಳಲ್ಲಿ, ಖಾಸಗೀ ಆಸ್ಪತ್ರೆಗಳಲ್ಲಿ ಅಸುನೀಗಿದವರ ದುಬಾರಿ ಚಿಕಿತ್ಸಾ ವೆಚ್ಚ ಭರಿಸಲಾಗದ ಅಸಹಾಯಕರಾಗಿ ಹೆತ್ತವರ ಹೆಣಗಳತ್ತಲೂ ಮಕ್ಕಳು ಸುಳಿಯಲಿಲ್ಲ. 1200 ಕ್ಕೂ ಹೆಚ್ಚು ಹಿಂದೂಗಳಿಗೆ ಅವರ ಸಂಪ್ರದಾಯದಂತೆ ದಹನ ಕ್ರಿಯೆ ನಡೆಸಿ, ಇಸ್ಲಾಂ ಮತ್ತು ಕ್ರೈಸ್ತ ಧರ್ಮೀಯರನ್ನು ಅವರ ವಿಧಿ–ವಿಧಾನಗಳ ಅನ್ವಯ ಮಣ್ಣು ಮಾಡಿ ಗೌರವಯುತವಾಗಿ ಕಂಡು ಅಂತ್ಯ ಸಂಸ್ಕಾರವನ್ನು ಸರ್ಕಾರ ನೆರವೇರಿಸಿತು. ಜೂನ್ 2 ರಂದು ವಾರಸುದಾರರಿಲ್ಲದ 500 ಕ್ಕೂ ಹೆಚ್ಚು ಮಂದಿಯ ಅಸ್ಥಿ ಮತ್ತು ಚಿತಾಭಸ್ಮಗಳ ಕುಂಡಗಳನ್ನು ಒಂದೆಡೆ ಇರಿಸಿ ಶಾಸ್ತ್ರೋಕ್ತವಾಗಿ ಅಂತಿಮ ವಿಧಿ–ವಿಧಾನಗಳನ್ನು ಸರ್ಕಾರವೇ ನೆರವೇರಿಸಿತು. ದಕ್ಷಿಣದ ಗಂಗೆ ಕಾವೇರಿ ನದಿಯಲ್ಲಿ ಅಸ್ಥಿಗಳನ್ನು ಗೌರವಯುತವಾಗಿ ಒಮ್ಮೆಲೆ ವಿಸರ್ಜಿಸಿದ್ದು ಕೇವಲ ಭಾವನಾತ್ಮಕ ವಿಷಯ ಮಾತ್ರವಲ್ಲ, ಇದು ಇತಿಹಾಸ ಪುಟಗಳಲ್ಲಿ ದಾಖಲಾದ ಸಂಗತಿಯಾಗಿದೆ. ವಿಪತ್ತು ನಿರ್ವಹಣಾ ಜವಾಬ್ದಾರಿ ಹೊತ್ತ ಕಂದಾಯ ಸಚಿವ ಆರ್. ಅಶೋಕ್, ಯುವ ಸಬಲೀಕರಣ ಮತ್ತು ಕ್ರೀಡೆಗಳು ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವ ಎಂ. ಸಿ. ನಾರಾಯಣ ಗೌಡ ಅವರ ನೇತೃತ್ವದಲ್ಲಿ, ಅಪರ ಕಾರ್ಯಗಳ ವಿಧಿ–ವಿಧಾನ ನಡೆದಿದ್ದು ಸ್ಮರಣಾರ್ಹ.

ಕೋವಿಡ್ ಮೊದಲ ಅಲೆ ಸಂದರ್ಭದಲ್ಲಿ ಸಾಕಷ್ಟು ಕೈಗಾರಿಕೆಗಳು ಚಟುವಟಿಕೆಗಳನ್ನು ಸ್ಥಗಿತಗೊಳಿಸಿದವು. ಎರಡನೇ ಅಲೆ ನಂತರ ಇದರ ಪ್ರಮಾಣ ಮತ್ತಷ್ಟು ಹೆಚ್ಚಾಯಿತು. ಆದ್ದರಿಂದ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರ ನಡುವೆ ಸರ್ಕಾರ ಕೌಶಲ್ಯ ಸಂಪರ್ಕ ವೇದಿಕೆ ಒದಗಿಸಿಕೊಟ್ಟಿತು. ಕೌಶಲ್ಯ ತರಬೇತಿ ಮತ್ತು ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ವಿವಿಧ ಪಾಲುದಾರರನ್ನು ಜೋಡಿಸಲು ಮುಖ್ಯಮಂತ್ರಿ ಅವರು ಜೂನ್ 29 ರಂದು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಕೌಶಲ್ಯ ಸಂಪರ್ಕ ವೇದಿಕೆಯನ್ನು ಉದ್ಘಾಟಿಸಿದರು. ಈ ವೇದಿಕೆಯಿಂದ ವಲಸೆ ಕಾರ್ಮಿಕರಿಗೂ ಹೆಚ್ಚು ಅನುಕೂಲವಾಗಲಿದ್ದು. ಈ ನಿಟ್ಟಿನಲ್ಲಿ ಸ್ಕಿಲ್ ಕನೆಕ್ಟ್ ಪೋರ್ಟಲ್ ಕಾರ್ಯನಿರ್ವಹಿಸಲಿದೆ. ಖಾಸಗಿ ಸಹಭಾಗಿತ್ವದಡಿ ಉದ್ಯೋಗಾವಕಾಶ ಸೃಷ್ಟಿಸಲು ನಮ್ಮ ಸರ್ಕಾರ ಕಾರ್ಯೋನ್ಮುಖವಾಗಿದೆ ಎಂದು ಸಹ ಯಡಿಯೂರಪ್ಪ ಅವರು ರಾಜ್ಯದ ಜನತೆಗೆ ಅಭಯ ನೀಡಿದ್ದಾರೆ.

ಇದೇ ಜುಲೈ 15 ರ ವಿಶ್ವ ಕೌಶಲ್ಯ ದಿನದಂದು ನಡೆದ ಕಾರ್ಯಕ್ರಮದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಸರ್ಕಾರದ ನೀಲನಕ್ಷೆಯನ್ನು ಮುಖ್ಯಮಂತ್ರಿಗಳು ಅನಾವರಣಗೊಳಿಸಿದರು. ರಾಜ್ಯದಲ್ಲಿ 150 ಸರ್ಕಾರಿ ಐಟಿಐಗಳನ್ನು ಉನ್ನತೀಕರಿಸಲು ನಿರ್ಧರಿಸಿದ್ದು, ಇಲ್ಲಿ ಅತ್ಯಾಧುನಿಕ ಕೌಶಲ್ಯ ತರಬೇತಿ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಇಂಡಸ್ಟ್ರಿಯಲ್ ಆಟೋಮೇಷನ್ ರೊಬೋಟಿಕ್ – ಇಂಡಸ್ಟ್ರಿ ನಂತಹ ಅತ್ಯಾಧುನಿಕ ಪ್ರಯೋಗಾಲಯ ಸ್ಥಾಪಿಸಿಲಾಗಿದೆ. 4636.50 ಕೋಟಿ ರೂಪಾಯಿ ವೆಚ್ಚದಲ್ಲಿ ಇವುಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದ್ದು. ಒಡಂಬಡಿಕೆಗೆ ಈಗಾಗಲೇ ಸಹಿ ಹಾಕಲಾಗಿದೆ. ಟಾಟಾ ಕನ್ಸಲ್ಟೆನ್ಸಿ ಸೇರಿ 20ಕ್ಕೂ ಹೆಚ್ಚು ಕಂಪೆನಿಗಳ ಜತೆ ಆಗಿರುವ ಒಪ್ಪಂದದಿಂದ ವೃತ್ತಿ ತರಬೇತಿ ಶಿಕ್ಷಣದಲ್ಲಿ ಸಾಕಷ್ಟು ಸುಧಾರಣೆಗಳು ಕಂಡು ಬರಲಿವೆ. ಉನ್ನತೀಕರಣ ಕಾರ್ಯ ಶೀಘ್ರ ಪೂರ್ಣಗೊಳಿಸಿ ಇದೇ ಸೆಪ್ಟೆಂಬರ್‌ನಲ್ಲಿ ಮೇಲ್ದಜೇಗೇರಲಿರುವ ಐಟಿಐಗಳನ್ನು ಉದ್ಘಾಟನೆ ಮಾಡಲಾಗುವುದು











Downloaded From: www.kpscvaani.com

ಎಂದು ಯಡಿಯೂರಪ್ಪ ಅವರು ತಿಳಿಸಿದ್ದಾರೆ. ಈ ಕಾರ್ಯದಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆ ಹೊಂದಿರುವ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಅವರ ಪ್ರಯತ್ನ ಕೂಡ ಅಷ್ಟೇ ಮಹತ್ವದ್ದಾಗಿದೆ.



ಕೋವಿಡ್ ಎರಡನೇ ಅಲೆ ತಗ್ಗಿರುವ ಹಿನ್ನೆಲೆಯಲ್ಲಿ ಬಜೆಟ್ ಕಾರ್ಯಕ್ರಮಗಳು ಇದೀಗ ಅನುಷ್ಠಾನಕ್ಕೆ ಸಜ್ಜಾಗುತ್ತಿವೆ. ಸೋಂಕಿಗೆ ಕಡಿವಾಣ ಹಾಕಲು ಜಾರಿಗೊಳಿಸಲಾಗಿದ್ದ ಸಾಮಾಜಿಕ - ಆರ್ಥಿಕ ದಿಗ್ಬಂಧನಗಳಿಂದ ಹೊರ ಬಂದಿದ್ದು, ಆರ್ಥಿಕ ಚಟುವಟಿಕೆಗಳನ್ನು ಹಳಿ ಮೇಲೆ ತರುವ ಪ್ರಯತ್ನಗಳು ಆರಂಭಗೊಂಡಿವೆ. ಆದರೆ ದಿನೇ ದಿನೇ ಆರ್ಥಿಕ ಸಂಕಷ್ಟಗಳ ಸವಾಲುಗಳು ಇನ್ನಷ್ಟು ಹೆಚ್ಚಾಗುತ್ತಿದ್ದು, ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಇನ್ನೂ ಸಾಕಷ್ಟು ದೂರ ಸಾಗಬೇಕಾಗಿದೆ. ಬಜೆಟ್ ಆಶಯಗಳನ್ನೆಲ್ಲ ಸಾಕಾರಗೊಳಿಸಲು ಸರ್ಕಾರದ ವಿವಿಧ ಇಲಾಖೆಗಳು ಹೆಚ್ಚಿನ ಮುತುವರ್ಜಿ ವಹಿಸಿ ಬಜೆಟ್ ಅನುಷ್ಠಾನಕ್ಕೆ ಸಿದ್ಧತೆ-ಬದ್ಧತೆ ತೋರುವ ಅಗತ್ಯ ಇದೆ.



ಈ ನಡುವೆ 2021-2022ನೇ ವರ್ಷದ ಬಜೆಟ್‌ನಲ್ಲಿ ಮುಖ್ಯಮಂತ್ರಿ ಅವರು ಹಲವಾರು ಘೋಷಣೆ ಮಾಡಿದ್ದಾರೆ. ಮಾರ್ಚ್ 8 ರಂದು ವಿಶ್ವ ಮಹಿಳಾ ದಿನ ಮಂಡಿಸಿದ ಬಜೆಟ್ ಹಲವು ವಲಯಗಳ ಬೆಳವಣಿಗೆಗೆ ಮುನ್ನುಡಿ ಬರೆದಿದೆ. ಬಜೆಟ್ ಗಾತ್ರ ಕುಗ್ಗಿಸಿಲ್ಲ. ರಾಜಸ್ವ ಕ್ರೋಢೀಕರಣಕ್ಕೆ ಪೆಟ್ರೋಲ್, ಡೀಸೆಲ್ ಮೇಲೆ ಅಲ್ಪ ಪ್ರಮಾಣದ ತೆರಿಗೆ ಹೇರಿದ್ದು ಬಿಟ್ಟರೆ ಹೆಚ್ಚಿನ ತೆರಿಗೆ ಹೊರೆ ವಿಧಿಸಿಲ್ಲ. ಇದು ಬೆಲೆ ಏರಿಕೆಯ ಪರ್ವದಲ್ಲಿ ನಿಜಕ್ಕೂ ಸಮಾಧಾನದ ಸಂಗತಿ. ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ, ಮಹಿಳೆಯರು ಸೇರಿದಂತೆ ಹಲವು ವಲಯಗಳಿಗೆ ಆದ್ಯತೆ ನೀಡಿರುವ 2,46,207 ಕೋಟಿ ಮೊತ್ತದ ಬಜೆಟ್ ಇದಾಗಿದ್ದು. ಹಿಂದಿನ (2020-21) ಬಜೆಟ್ ಗಾತ್ರಕ್ಕೆ ಹೋಲಿಸಿದರೆ ಈ ಬಜೆಟ್ 8,314 ಕೋಟಿ (ಶೇ 3.5ರಷ್ಟು) ರೂ ನಷ್ಟು ಹೆಚ್ಚಳವಾಗಿದೆ. ಸಂಕಷ್ಟದಲ್ಲಿ ಮಂಡಿಸಿದ ಬಜೆಟ್ ಜನಸಾಮಾನ್ಯರಿಂದ ಹಿಡಿದು ಉದ್ಯಮಿಗಳವರೆಗೆ ಮೆಚ್ಚುಗೆಗೆ ಪಾತ್ರವಾಗಿದೆ.



ಜನಪ್ರಿಯ ಕಾರ್ಯಕ್ರಮಗಳಿಗೆ ಆದ್ಯತೆ ನೀಡದೇ ರಾಜ್ಯದ ಆರ್ಥಿಕ ಶಿಸ್ತು ಕಾಯ್ದುಕೊಳ್ಳಲು ಯಡಿಯೂರಪ್ಪ ಅವರು ಪ್ರಯತ್ನ ನಡೆಸಿರುವುದು ಗೋಚರವಾಗುತ್ತದೆ. ಕೃಷಿಗೆ ಉದ್ದಿಮೆಯ ಸ್ಥಾನಮಾನ ನೀಡುವ ಪ್ರಸ್ತಾವ, ಉದ್ಯಮಶೀಲ ಮಹಿಳೆಯರಿಗೆ ಒತ್ತಾಸೆಯಾಗಿ ನಿಲ್ಲಲು ಹಲವಾರು ರಚನಾತ್ಮಕ ಕ್ರಮಗಳು. ವಿಶೇಷವಾಗಿ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಲಾಗಿದೆ. ಮಹಿಳಾ ಉದ್ಯಮಿಗಳಿಗೆ ಶೇ 4ರ ರಿಯಾಯ್ತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ, ಸ್ತ್ರೀ-ಶಕ್ತಿ ಗುಂಪುಗಳಿಗೆ ಇ-ಮಾರುಕಟ್ಟೆ ಸೌಲಭ್ಯ, ನಿರ್ಭಯಾ ಯೋಜನೆಯಡಿ 7,500 ಸಿಸಿಟಿವಿ ಕ್ಯಾಮೆರಾಗಳ ಅಳವಡಿಕೆ, ಮಹಿಳೆಯರಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ 37,188 ಕೋಟಿ ರೂ ಅನುದಾನ ನಿಗದಿ ಮಾಡಿರುವುದು ಬಜೆಟ್‌ನ ವಿಶೇಷತೆಯಾಗಿದೆ. ಕೇಂದ್ರ ಸರ್ಕಾರ ಅನುದಾನ ಕಡಿತ ಮಾಡಿರುವ ಆಘಾತ, ಆರ್ಥಿಕ ಹಿಂಜರಿತ, ಸಾಲದ ಹೊರೆ ಹಾಗೂ ಸಂಪನ್ಮೂಲ ಸಂಗ್ರಹದಿಂದ ಆಗಿರುವ ಸಮಸ್ಯೆಗಳನ್ನು ಬಜೆಟ್ ನಲ್ಲಿ ಮುಖ್ಯಮಂತ್ರಿ ಅವರು ಅನಾವರಣಗೊಳಿಸಿದ್ದಾರೆ.



ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ಸಮುದಾಯ, ಕಾರ್ಮಿಕರು- ಹೀಗೆ ಎಲ್ಲ ಸಮುದಾಯಗಳನ್ನು ಗುರುತಿಸಿ ಅನುದಾನ ನೀಡುವ ಪ್ರಯತ್ನ ಮಾಡಿದ್ದಾರೆ. ಉಪ್ಪಾರ, ಅಂಬಿಗ, ಕುಂಬಾರ, ವಿಶ್ವಕರ್ಮ, ಗೊಲ್ಲರಂತಹ ತಳ ಸಮುದಾಯಗಳ ಅಭಿವೃದ್ಧಿಗೂ ಅನುದಾನ ಕೊಟ್ಟಿದ್ದಾರೆ. ಬಸವಣ್ಣ, ಕೆಂಪೇಗೌಡರಂತಹ ಇತಿಹಾಸ ಪುರುಷರ ಪ್ರತಿಮೆಗಳ ಸ್ಥಾಪನೆಗೂ ಧನಸಹಾಯ ನೀಡಲಾಗಿದೆ. ಉತ್ತರ ಕರ್ನಾಟಕದ ಮಹತ್ವಾಕಾಂಕ್ಷೆಯ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಈ ಬಜೆಟ್‌ನಲ್ಲಿ ಪ್ರಸ್ತಾಪವಾಗಿರಲಿಲ್ಲ. ಬಳಿಕ ಆ ಭಾಗದ ಶಾಸಕರ ಆಶಯದಂತೆ ಎರಡು



Downloaded From: www.kpscvaani.com

ದಿನ ತಡವಾಗಿ ಸದನದಲ್ಲಿ ಯುಕೆಪಿ ಮೂರನೇ ಹಂತದ ಯೋಜನೆಗೆ ಹಾಗೂ ಯೋಜನೆ ಪರಿಣಾಮ 30 ಹಳ್ಳಿಗಳ ಪುನರ್ ವಸತಿ, ಪುನರ್ ನಿರ್ಮಾಣಕ್ಕೆ 10 ಸಾವಿರ ಕೋಟಿ ರೂ ಅನುದಾನವನ್ನು ಮುಖ್ಯಮಂತ್ರಿ ಅವರು ಪ್ರಕಟಿಸಿರುವುದು ವಿಶೇಷ.

ಮಹಾದಾಯಿ ನ್ಯಾಯಮಂಡಳಿಯ ತೀರ್ಪಿನ ಅನ್ವಯ ಕಳಸಾ-ಬಂಡೂರಿ ನಾಲಾ ತಿರುವು ಯೋಜನೆಗಳ ನೀರಿನ ಬಳಕೆಗೆ ರೂ 1,677 ಕೋಟಿ ರೂ, ಭದ್ರಾ ಮೇಲ್ದಂಡೆ ಯೋಜನೆ ಕೇಂದ್ರದ ನೆರವಿನೊಂದಿಗೆ ಜಾರಿ, ಕೃಷ್ಣಾ ಜಲಭಾಗ್ಯ ನಿಗಮಕ್ಕೆ 5,600 ಕೋಟಿ ರೂ, ಏತ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ 5,627 ಕೋಟಿ, ಎತ್ತಿನಹೊಳೆ ಕುಡಿಯುವ ನೀರು ಯೋಜನೆಗೆ 1,500 ಕೋಟಿ ರೂ ಸೇರಿ ವಿವಿಧ ನೀರಾವರಿ ಯೋಜನೆಗಳಿಗೆ 31,280 ಕೋಟಿ ರೂ ಅನುದಾನ ಹಂಚಿಕೆ ಮಾಡಿದ್ದಾರೆ.

ಕೃಷಿ ಮತ್ತು ತೋಟಗಾರಿಕಾ ವಲಯಕ್ಕೆ ಶೇ 12ರಷ್ಟು ಅನುದಾನ ಹೆಚ್ಚಳ, ರೈತರ ಕಲ್ಯಾಣಕ್ಕಾಗಿ 32,295 ಕೋಟಿ ಮೀಸಲಿಟ್ಟು ಸಂಕಷ್ಟಕ್ಕೀಡಾಗಿರುವ ರೈತರ ನೋವು ನಿವಾರಿಸುವಲ್ಲಿ ರಾಜಕೀಯ ಜಾಣ್ಮೆ ಮೆರಿದಿದ್ದಾರೆ. ಕೃಷಿಕರ ಆದಾಯ ದ್ವಿಗುಣಗೊಳಿಸುವ ಕೇಂದ್ರದ ಆಶಯಕ್ಕೆ ಬಜೆಟ್ ನೀರೆರೆದಿದೆ. ಕೃಷಿ ಉತ್ಪನ್ನಗಳ ಲಾಭದಾಯಕತೆ ಹೆಚ್ಚಿಸಲು ಹೊಸ ಹೈಬ್ರೀಡ್ ಬೀಜ ನೀತಿ ಜಾರಿ, ಅಡಿಕೆ ಬೆಳೆಯ ಹಳದಿ ರೋಗ ನಿಯಂತ್ರಣದ ಸಂಶೋಧನೆ ತೀವ್ರಗೊಳಿಸಲು ಮತ್ತು ಪರ್ಯಾಯ ಬೆಳೆ ಪ್ರೋತ್ಸಾಹಿಸಲು 25 ಕೋಟಿ ವೆಚ್ಚದ ವಿಶೇಷ ಕಾರ್ಯಕ್ರಮಗಳು, ಸಿರಿಧಾನ್ಯಗಳಿಗೆ ಗರಿಷ್ಠ ಬೆಲೆ ದೊರಕಿಸಲು ಆನ್‌ಲೈನ್ ಮಾರುಕಟ್ಟೆ, ಬರ ನಿರೋಧಕ ಬೆಳೆಗಳು ಮತ್ತು ತೋಟಗಾರಿಕೆ ಬೆಳೆಗೆ ನೆರವು ನೀಡಲು ಪ್ರತಿ ಹೆಕ್ಟೇರ್‌ಗೆ 20 ಸಾವಿರ ಪ್ರೋತ್ಸಾಹ ಧನ ನೀಡುವ ಪ್ರಸ್ತಾಪವೂ ಇದೆ.

ನಗರ ಪ್ರದೇಶದಲ್ಲಿ ದುಡಿಯುವ ಕಟ್ಟಡ ಕಾರ್ಮಿಕರು ಮತ್ತು ಅವರ ಕುಟುಂಬದವರ ಆರೋಗ್ಯ ರಕ್ಷಣೆಗೆ 10 ಮೊಬೈಲ್ ಕ್ಲಿನಿಕ್ ಆರಂಭ, ಹಾಗೆಯೇ ಗಾರ್ಮೆಂಟ್ಸ್ ಉದ್ಯಮದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ಬಿಎಂಟಿಸಿ ಬಸ್‌ನಲ್ಲಿ ಸಂಚರಿಸಲು ಉಚಿತ ಬಸ್ ಪಾಸ್ ವಿತರಣೆಗೆ 25 ಕೋಟಿ ರೂ







**ಕೋವಿಡ್‌ನಿಂದ ಬಾಧಿತವಾಗಿದ್ದ ಕಿರು, ಸಣ್ಣ, ಮಧ್ಯಮ ಉದ್ಯಮ ವಲಯಕ್ಕೆ ನಿಗದಿತ ವಿದ್ಯುತ್ ಶುಲ್ಕ ವಿನಾಯಿತಿ ಸೇರಿ ಹಲವು ರಿಯಾಯಿತಿಗಳ ಪರಿಹಾರ.**

ಅನುದಾನ ಒದಗಿಸಿದ್ದಾರೆ.

ಕೋವಿಡ್ ಮೊದಲ ಅಲೆ ನಂತರ ಆರೋಗ್ಯ ಕ್ಷೇತ್ರವನ್ನು ಬಲಪಡಿಸುವ ಕುರಿತು ಯಡಿಯೂರಪ್ಪ ಅವರು ವಿಶೇಷವಾಗಿ ಗಮನಹರಿಸಿದ್ದು, ಮುಂದಿನ ಆರೋಗ್ಯ ಸವಾಲುಗಳನ್ನು ಎದುರಿಸಲು ಇಲಾಖೆಯನ್ನು ಸಜ್ಜುಗೊಳಿಸುತ್ತಿದ್ದಾರೆ. 250 ಆರೋಗ್ಯ ಕೇಂದ್ರಗಳನ್ನು ಮಾದರಿ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸುವ, 100 ತಾಲ್ಲೂಕುಗಳಲ್ಲಿ 6 ಹಾಸಿಗೆಗಳ ತೀವ್ರ ನಿಗಾ ಘಟಕಗಳನ್ನು ಸ್ಥಾಪನೆ ಮಾಡಲಾಗುತ್ತಿದೆ. ಯಾವುದೇ ಅಭಿವೃದ್ಧಿಯನ್ನು ಅಳೆಯಲು ತಾಯಿ - ಶಿಶು ಮರಣವನ್ನು ಅಳತೆಗೋಲಾಗಿ ಪರಿಗಣಿಸಲಾಗುತ್ತದೆ. ಹೀಗಾಗಿ ಸುಸ್ಥಿರ ಅಭಿವೃದ್ಧಿ ಗುರಿ 2030 ರ ಅನ್ವಯ ತಾಯಿ ಮತ್ತು ಶಿಶುಗಳ ಮರಣ ಪ್ರಮಾಣ ಶೇ 30 ರಿಂದ ಶೇ 10ಕ್ಕೆ ಇಳಿಸಲು ಕಾರ್ಯ ಯೋಜನೆಯನ್ನು ಮುಖ್ಯಮಂತ್ರಿಗಳು ರೂಪಿಸಿದ್ದಾರೆ. ಶಿಶುಗಳಿಗೆ ತಾಯಿ ಹಾಲು ಕೊರತೆ ದೂರ ಮಾಡಲು ನಾಲ್ಕು ಕಂದಾಯ ವಿಭಾಗಗಳಲ್ಲಿ ತಾಯಂದಿರ ಎದೆ ಹಾಲಿನ ಬ್ಯಾಂಕ್ ಸ್ಥಾಪನೆಗೂ ಮುಂದಾಗಿದ್ದಾರೆ.


ಕೋವಿಡ್ ಸಂದರ್ಭದಲ್ಲಿ ತೀವ್ರ ತೊಂದರೆಗೆ ಸಿಲುಕಿರುವ ಶಿಕ್ಷಣ ಕ್ಷೇತ್ರಕ್ಕೆ ಟಾನಿಕ್ ನೀಡಿದ್ದಾರೆ. ಖಾಸಗಿ ಶಾಲೆಗಳಿಗೆ ಸರಿ ಸಮವಾಗಿ 50 ಪಬ್ಲಿಕ್ ಶಾಲೆಗಳ ಅಭಿವೃದ್ಧಿಗೆ 100 ಕೋಟಿ ನಿಗದಿ, ಎಂಟು ಮಂದಿ ಜ್ಞಾನಪೀಠ ಪುರಸ್ಕೃತರು ಓದಿರುವ ಶಾಲೆಗಳ ಅಭಿವೃದ್ಧಿ, ಕೇಂದ್ರ ಸರ್ಕಾರದ ನೇಮಕಾತಿಗಳಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಿಸಲು 'ಸಾಮರ್ಥ್ಯ-ಸಾರಥ್ಯ' ಕಾರ್ಯಕ್ರಮದಡಿ 5 ಲಕ್ಷ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ. ಕೊರೊನಾ ಹಾವಳಿಯ ನಡುವೆಯೂ ಕಳೆದ ವರ್ಷ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳನ್ನು ಮಾತ್ರವಲ್ಲದೆ, ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ) ಯನ್ನೂ ಯಶಸ್ವಿಯಾಗಿ ನಡೆಸಲಾಗಿತ್ತು. ಈ ಬಾರಿಯೂ ಹೊಸ ಮಾದರಿಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದ್ದು, ಸಿಇಟಿ ಪರೀಕ್ಷೆಗೆ ಸಿದ್ಧತೆ ಕೈಗೊಳ್ಳಲಾಗಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೂ ಆನ್‌ಲೈನ್ ಶಿಕ್ಷಣ ಲಭ್ಯವಾಗಿಸಲು ಕ್ರಮ,



Downloaded From: www.kpscvaani.com



**ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಿಸಿ ಸಮಗ್ರ ಕರ್ನಾಟಕದ ಅಭಿವೃದ್ಧಿ ನಿಟ್ಟಿನಲ್ಲಿ ಸಂವಿಧಾನದ ಪರಿಚ್ಛೇದ 371 (ಜೆ) ಅನ್ವಯ ವಿಶೇಷ ಸ್ಥಾನಮಾನ ಪಡೆದಿರುವ ಹೈದರಾಬಾದ್–ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಗಿದೆ. ಕೇವಲ ಹೆಸರು ಬದಲಾವಣೆ ಮಾತ್ರವಲ್ಲ; ಈ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘವನ್ನು ಆರಂಭಿಸಲಾಗಿದೆ.**



ವಿದ್ಯಾಗಮದ ಮೂಲಕ ವಿದ್ಯಾರ್ಥಿಗಳ ಮನೆಯಂಗಳಕ್ಕೆ ಶಿಕ್ಷಕರು ಆಗಮಿಸಿ ಕಲಿಕೆಗೆ ತೊಂದರೆಯಾಗದಂತೆ ಶ್ರಮವಹಿಸುತ್ತಿರುವುದು ಸಹ ವಿಶೇಷವೇ.

ಕೋವಿಡ್ ಪರಿಸ್ಥಿತಿಯಲ್ಲಿ ಡಿಜಿಟಲ್ ಕಲಿಕೆಗೆ ಉನ್ನತ ಶಿಕ್ಷಣ ವಲಯದ ಕಾಲೇಜುಗಳಲ್ಲಿ ಹೆಚ್ಚಿನ ಮಹತ್ವ ಕೊಡಲಾಗಿದೆ. ಈಗಾಗಲೇ ಆನ್‌ಲೈನ್ ತರಗತಿಗಳ ಮೂಲಕ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ದೊರೆಯುತ್ತಿದೆ. ವೆಬ್‌ಎಕ್ಸ್, ಸ್ಕೈಪ್ ಹಾಗೂ ಇತರೆ ಆನ್‌ಲೈನ್ ಪ್ಲಾಟ್ ಫಾರಂ ಮೂಲಕ ಸಹಸ್ರಾರು ಆನ್‌ಲೈನ್ ತರಗತಿಗಳನ್ನು ನಡೆಸಲಾಗಿದೆ. ವಾಟ್ಸ್ ಆ್ಯಪ್ ಮತ್ತು ಟೆಲಿಗ್ರಾಂ ಮೂಲಕ ಶೇಕಡಾ 85 ರಷ್ಟು ವಿದ್ಯಾರ್ಥಿಗಳಿಗೆ ಇ–ನೋಟ್ಸ್, ಪಿ.ಪಿ.ಟಿ ಹಾಗೂ ಹಳೆಯ ಪ್ರಶ್ನೆ ಪತ್ರಿಕೆಗಳ ವಿತರಣೆ ಮಾಡಲಾಗಿದೆ. ಜ್ಞಾನವಿಧಿ ಯು–ಟ್ಯೂಬ್ ಚಾನೆಲ್ ಮೂಲಕ ಶಿಕ್ಷಣ ದೊರೆಯುತ್ತಿದೆ.

ಅಭಿವೃದ್ಧಿಯೇ ಆಡಳಿತ ಮಂತ್ರ ಎಂಬ ಧ್ಯೇಯದೊಂದಿಗೆ "ಕಲ್ಯಾಣ ರಾಜ್ಯ"ವನ್ನು ಕಟ್ಟುವ ಗುರಿಯೊಂದಿಗೆ ಮುನ್ನಡೆದಿದ್ದಾರೆ. ಸರ್ವರಿಗೂ ಸಮಪಾಲು – ಸಮಬಾಳು ಅವರ ಧ್ಯೇಯವಾಗಿದೆ.

ದೇಶಾದ್ಯಂತ "ಆಜಾದಿ ಕಿ ಅಮೃತ ಮಹೋತ್ಸವ್'ಅಭಿಯಾನದಡಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚಿಸುವ, ಜತೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದ ಮಹನೀಯರನ್ನು ವರ್ಷ ಪೂರ್ತಿ ಸ್ಮರಿಸುವ ಕಾರ್ಯಕ್ರಮಗಳು ನಡೆಯುತ್ತಿವೆ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾವಲಂಬಿ ಭಾರತ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯವನ್ನು "ಸ್ವಾವಲಂಬಿ ಕರ್ನಾಟಕ" ಮತ್ತು " ಸಮೃದ್ಧ ಕರ್ನಾಟಕ"ನಿರ್ಮಾಣ ಮಾಡುವ ನಿಟ್ಟಿನಲ್ಲಿ ಯಡಿಯೂರಪ್ಪ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಮೊದಲಿನಿಂದಲೂ ಪ್ರಗತಿಪರ ಆಲೋಚನೆಗಳನ್ನೇ ಮಾಡುತ್ತ ಬಂದಿರುವ ರಾಜ್ಯವಾಗಿದ್ದು, ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿ ಹಲವಾರು ಪ್ರಥಮಗಳನ್ನು ದಾಖಲಿಸಿದೆ. ಈ ಪ್ರಕ್ರಿಯೆಗೆ ರಾಜ್ಯ ಸರ್ಕಾರ ನೀಡಿರುವ ಕೊಡುಗೆ ಅಪಾರ. ಈ ಹಿನ್ನೆಲೆಯಲ್ಲಿಯೇ ರಾಷ್ಟ್ರದ ಹಲವು ರಾಜ್ಯಗಳು ಇಂದು ಕರ್ನಾಟಕದತ್ತ ನೋಡುತ್ತಿವೆ. ಇಲ್ಲಿನ ವಿನೂತನ ಹಾಗೂ ದಿಟ್ಟ ಕ್ರಮಗಳಿಂದಾಗಿ ಹಲವು ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲಾಗಿದೆ. ಕರ್ನಾಟಕ ತಾಂತ್ರಿಕ ರಾಜಧಾನಿ, ನವೋದ್ಯಮಗಳ ರಾಜಧಾನಿ, ಐಟಿ ರಾಜಧಾನಿ, ವೈಮಾನಿಕ ಕ್ಷೇತ್ರದಲ್ಲಿ ಮಂಚೂಣಿಯಲ್ಲಿರುವ, ವಿಜ್ಞಾನ, ಸಂಶೋಧನೆ, ನಾವೀನ್ಯತೆಯಲ್ಲಿ ವಿಶ್ವ ದರ್ಜೆಯ ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಈ ಖ್ಯಾತಿಯನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ಯುವ ರಥವನ್ನು ಯಡಿಯೂರಪ್ಪ ಅವರು ಎಳೆಯುತ್ತಿದ್ದಾರೆ.

ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಿಸಿ ಸಮಗ್ರ ಕರ್ನಾಟಕದ ಅಭಿವೃದ್ಧಿ ನಿಟ್ಟಿನಲ್ಲಿ ಸಂವಿಧಾನದ ಪರಿಚ್ಛೇದ 371 (ಜೆ) ಅನ್ವಯ ವಿಶೇಷ ಸ್ಥಾನಮಾನ ಪಡೆದಿರುವ ಹೈದರಾಬಾದ್–ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಗಿದೆ. ಕೇವಲ ಹೆಸರು ಬದಲಾವಣೆ ಮಾತ್ರವಲ್ಲ; ಈ ಭಾಗದ ಸಮಗ್ರ ಅಭಿವೃದ್ಧಿಗಾಗಿ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘವನ್ನು ಆರಂಭಿಸಲಾಗಿದೆ. ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿ ಕಲಬುರಗಿ, ಬೀದರ್ ವಿಮಾನ



Downloaded From: www.kpscvaani.com




ನಿಲ್ದಾಣಗಳು ಕಾರ್ಯಾರಂಭ ಮಾಡಿವೆ. ಶಿವಮೊಗ್ಗ ಕಿರು ವಿಮಾನ ನಿಲ್ದಾಣ ಕಾಮಗಾರಿ ವೇಗ ಪಡೆದಿದ್ದು, ಕಾರವಾರ ಹಾಗೂ ವಿಜಯಪುರ ವಿಮಾನ ನಿಲ್ದಾಣಗಳ ಕಾಮಗಾರಿ ಆರಂಭಿಸಲು ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಉದ್ಯೋಗ ಸೃಷ್ಟಿ ಮಾಡುವ ಪ್ರಮುಖ ವಲಯ ಪ್ರವಾಸೋದ್ಯಮವನ್ನು ಬಲಪಡಿಸಲು ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆ ರಚಿಸಲಾಗಿದೆ. ಕೋವಿಡ್‌ನಿಂದ ರಾಜ್ಯದ ಪ್ರವಾಸೊದ್ಯಮ ನೆಲ ಕಚ್ಚಿದ್ದು, ಇದೀಗ ಈ ವಲಯಕ್ಕೆ ಪುನಶ್ಚೇತನ ನೀಡಲಾಗುತ್ತಿದೆ. ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಗೆ ಹಲವು ವಿನೂತನ ಯೋಜನೆಗಳನ್ನು ರೂಪಿಸಲಾಗಿದೆ.



ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾವಲಂಬಿ ರಾಷ್ಟ್ರ ನಿರ್ಮಾಣದ 'ವೋಕಲ್ ಫಾರ್ ಲೋಕಲ್' ಪರಿಕಲ್ಪನೆಗೆ ಅನುಗುಣವಾಗಿ, ರಾಜ್ಯ ಸರ್ಕಾರ ಆಟಿಕೆ ತಯಾರಿಕೆ ಮೂಲಕ ಆರ್ಥಿಕತೆಗೆ ಬಲ ಮತ್ತು ಉದ್ಯೋಗ ಸೃಷ್ಟಿಗಾಗಿ ಕೊಪ್ಪಳ ಜಿಲ್ಲೆಯಲ್ಲಿ ದೇಶದ ಮೊದಲ ಬೃಹತ್ ಆಟಿಕೆ ಉತ್ಪಾದನಾ ಕ್ಲಸ್ಟರ್ ನಿರ್ಮಾಣಕ್ಕೆ ಚಾಲನೆ ನೀಡಿದೆ. ಇದು ಕಲ್ಯಾಣ ಕರ್ನಾಟಕದ ಆರ್ಥಿಕಾಭಿವೃದ್ಧಿಯಲ್ಲಿ ಮಹತ್ವದ ಪಾತ್ರದ ವಹಿಸಲಿದೆ. ಕೇಂದ್ರ ಸರ್ಕಾರದ 'ಆತ್ಮನಿರ್ಭರಭಾರತ' ಪರಿಲ್ಪನೆಯಡಿ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸುವುದು, ದೇಸಿ ವಸ್ತುಗಳಿಗೆ ಜಾಗತಿಕ ಮಟ್ಟದ ಮಾರುಕಟ್ಟೆ ಸೌಲಭ್ಯ ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ. ಹಾಗಾಗಿ ಕೊಪ್ಪಳದಲ್ಲಿ ಇದೀಗ ಅಟಿಕೆಗಳ ಸಾಮ್ರಾಜ್ಯ ತಲೆ ಎತ್ತುತ್ತಿದೆ. ಕುಕನೂರು ತಾಲೂಕಿನ ಭಾನಾಪುರ–ತಳಬಾಳದಲ್ಲಿ 400 ಎಕರೆ ಜಮೀನಿನ ವಿಶೇಷ ಆರ್ಥಿಕ ವಲಯದಲ್ಲಿ ರಾಜ್ಯ ಸರ್ಕಾರ, 5 ಸಾವಿರ ಕೋಟಿ ರೂ ಹೂಡಿಕೆ ಆಕರ್ಷಿಸಲು ಯೋಜನೆಗೆ ಚಾಲನೆ ನೀಡಿದೆ. ಟಾಯ್ ಕ್ಲಸ್ಟರ್‌ಗೆ 2021ರ ಜನವರಿ 9 ರಂದು ಮುಖ್ಯಮಂತ್ರಿಭೂಮಿ ಪೂಜೆ ನೆರವೇರಿಸಿದರು. ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಚೀನಾ ಪ್ರಬಲ ಹಿಡಿತ ಹೊಂದಿದ್ದು, ಈ ಏಕಸ್ವಾಮ್ಯ ತಡೆದು ದೇಶೀಯ ಅಟಿಕೆಗಳಿಗೆ ಆದ್ಯತೆ ನೀಡುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದ್ದೇಶವಾಗಿದೆ. ಕರ್ನಾಟಕದವರೇ ಆದ ಏಕಸ್ ಸಂಸ್ಥೆಯ ಅಧ್ಯಕ್ಷ ಅರವಿಂದ ಮೆಳ್ಳಗೇರಿ ಅವರು ಆಟಿಕೆ ಕ್ಲಸ್ಟರ್ ನಿರ್ಮಾಣ ಜವಾಬ್ದಾರಿ ಹೊತ್ತಿದ್ದು, ಈ ವರ್ಷದ ಡಿಸೆಂಬರ್ ಒಳಗೆ ಕಾರ್ಯಾರಂಭ ಮಾಡುವ ಸಾಧ್ಯತೆಗಳಿದೆ.



ರಾಜ್ಯದ ಕೈಗಾರಿಕಾ ನೀತಿ 2020–25 ಜಾರಿಯಲ್ಲಿದ್ದು, ರಾಜಧಾನಿ ಬೆಂಗಳೂರಿಗೆ ಸೀಮಿತವಾಗಿದ್ದ ಕೈಗಾರಿಕೆಗಳನ್ನು ರಾಜ್ಯದ 2 ಮತ್ತು 3ನೇ ಹಂತದ ನಗರಗಳಲ್ಲಿಯೂ ಸ್ಥಾಪನೆ ಮಾಡಲು ಇದು ಅವಕಾಶ ಕಲ್ಪಿಸಿದೆ. ಸ್ಥಳೀಯ ಮಟ್ಟದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಯುವಜನತೆಗೆ ಉದ್ಯೋಗ ಸೃಷ್ಟಿಸಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಿಸುವ ಗುರಿ ಹೊಂದಲಾಗಿದೆ. ಸ್ಥಳೀಯವಾಗಿ ಸ್ಥಾಪಿಸುವ ಯಾವುದೇ ಕೈಗಾರಿಕೆಯಲ್ಲೂ ಸ್ಥಳೀಯರಿಗೇ ಮೊದಲು ಉದ್ಯೋಗ ಕಲ್ಪಿಸಲು ಆದ್ಯತೆ ನೀಡುವುದು ಸರ್ಕಾರದ ದೂರದೃಷ್ಟಿ ಮತ್ತು ಮೂಲ ಉದ್ದೇಶವಾಗಿದೆ. ಜಾಗತಿಕ ಮಟ್ಟದಲ್ಲಿ ಬೆಂಗಳೂರು ಹೂಡಿಕೆದಾರರ ಆಸಕ್ತಿಯ ಕೇಂದ್ರವಾಗಿದೆ. ಬರುವ ವರ್ಷದ ಫೆಬ್ರವರಿಯಿಂದ ಇನ್ವೆಸ್ಟ್ ಕರ್ನಾಟಕದಡಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸಲಾಗುತ್ತಿದೆ. ಇದಕ್ಕೂ ಪೂರ್ವಭಾವಿಯಾಗಿ ವಿಶ್ವಮಟ್ಟದ 23 ಕಂಪೆನಿಗಳು ಸುಮಾರು 28 ಸಾವಿರ ಕೋಟಿ ರೂಪಾಯಿ ಬಂಡವಾಳ ತೊಡಗಿಸುವ ಒಪ್ಪಂದಗಳಿಗೆ ಜುಲೈ 15 ರಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರ ಸಮ್ಮುಖದಲ್ಲಿ ಸಹಿ ಹಾಕಲಾಗಿದ್ದು, ಇದರಿಂದಲೂ ವ್ಯಾಪಕ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದೆ. 2020 ರ ಮಾರ್ಚ್‌ನಿಂದ 77 ಸಾವಿರ ಕೋಟಿ ರೂ ಹೂಡಿಕೆಯ 520 ಕ್ಕೂ ಹೆಚ್ಚು ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಹೆಚ್ಚುವರಿ ಪ್ರಸ್ತಾವಗಳಡಿ 23 ಸಾವಿರ ಕೋಟಿ ರೂ ಮೊತ್ತದ ಒಪ್ಪಂದ ಸೇರಿ 1 ಲಕ್ಷ ಕೋಟಿ ರೂ ಹೂಡಿಕೆಯಾಗಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಿಳಿಸಿದ್ದಾರೆ.








Downloaded From: www.kpscvaani.com



**ಕೋವಿಡ್ ಸಮರದಲ್ಲಿ ವೈದ್ಯರ ಕೊರತೆ ನೀಗಿಸಲು ಅಲ್ಪಾವಧಿಯಲ್ಲಿ ಇದೇ ಮೊದಲ ಬಾರಿಗೆ ನೇರ ನೇಮಕಾತಿ ಮೂಲಕ 1,763 ವೈದ್ಯರನ್ನು ನೇಮಿಸಿಕೊಂಡು ಸರ್ಕಾರವು ಐತಿಹಾಸಿಕ ಸಾಧನೆ ಮಾಡಿತು.**




ಹುಬ್ಬಳ್ಳಿ-ಧಾರಾವಾಡದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್, ಯಾದಗಿರಿ ಜಿಲ್ಲೆಯಲ್ಲಿ ಫಾರ್ಮಾ ಕ್ಲಸ್ಟರ್ ಅಭಿವೃದ್ಧಿ ಪಡಿಸಲಾಗುತ್ತಿದೆ. ಕರ್ನಾಟಕವನ್ನು ಜಾಗತಿಕ ಮಟ್ಟದಲ್ಲಿ ಔದ್ಯಮಿಕ ಜಾಲವಾಗಿ ಅಭಿವೃದ್ಧಿ ಪಡಿಸಲು ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್ ಭಾಗವಾಗಿ ತುಮಕೂರಿನಲ್ಲಿ ಕೈಗಾರಿಕಾ ನೋಡ್ ನಿರ್ಮಾಣವಾಗಲಿದೆ. ಇದರಿಂದ ಸುಮಾರು 1 ಲಕ್ಷ ಜನರಿಗೆ ಉದ್ಯೋಗ ಲಭಿಸುವ ಸಾಧ್ಯತೆಗಳಿವೆ. ಬಂಡವಾಳ ಆಕರ್ಷಣೆ ಮಾಡುವಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿಯೇ ಮುಂದುವರೆದಿದೆ. ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ 2020ನೇ ಫೆಬ್ರವರಿ 14ರಂದು ಮೊಟ್ಟ ಮೊದಲ ಇನ್ವೆಸ್ಟ್ ಕರ್ನಾಟಕ-2020 ಸಮಾವೇಶ ಹಮ್ಮಿಕೊಂಡಿದ್ದು, ಇದು ಹೊಸ ಇತಿಹಾಸ ನಿರ್ಮಿಸಿದೆ.

ರಾಜ್ಯದ ಎಲ್ಲಾ ಪ್ರಯತ್ನಗಳಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸಹಕಾರ, ಸಹಾಯ, ಬೆಂಬಲ ಹಾಗೂ ಪ್ರೋತ್ಸಾಹ ಎಂದಿನಂತೆ ಮುಂದುವರೆದಿದೆ ಎಂದು ಮುಖ್ಯಮಂತ್ರಿಗಳು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ. ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ್ ಯೋಜನೆ ಭರವಸೆಯ ಹೊಂಗಿರಣವಾಗಿದೆ. ಪ್ರಧಾನಿ ಹೇಳಿದಂತೆ ಸವಾಲುಗಳನ್ನು ಅವಕಾಶವನ್ನಾಗಿ ಪರಿವರ್ತಿಸಲು ಕರ್ನಾಟಕ ದಿಟ್ಟ ಹೆಜ್ಜೆ ಇಟ್ಟಿದೆ. ಪಿಪಿಇ ಕಿಟ್‌ಗಳ ಉತ್ಪಾದನೆಯಿಂದ ಹಿಡಿದು ಸ್ಥಳೀಯ ಉದ್ಯಮಗಳಿಗೆ ಉತ್ತೇಜನ ನೀಡುವುದು, ಸೌರ ವಿದ್ಯುತ್. ಆಟೋ ಮೊಬೈಲ್ ಹೀಗೆ ವಿವಿಧವಲಯಗಳಲ್ಲಿ ಸ್ವಾವಲಂಬಿಯಾಗುವ ಗುರಿ ಸಾಧಿಸುವುದು ಸರ್ಕಾರದ ಮುಖ್ಯ ಉದ್ದೇಶ ಎನ್ನುವುದು ಯಡಿಯೂರಪ್ಪ ಅವರ ಅಚಲ ನಂಬಿಕೆಯಾಗಿದೆ.

> **ಉದ್ಯೋಗ ಸೃಷ್ಟಿ ಮಾಡುವ ಪ್ರಮುಖ ವಲಯವಾದ ಪ್ರವಾಸೋದ್ಯಮವನ್ನು ಬಲಪಡಿಸಲು ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆ ರಚಿಸಲಾಗಿದ್ದು, ಸುಸ್ಥಿರ ಅಭಿವೃದ್ಧಿಗೆ ಹಲವು ವಿನೂತನ ಯೋಜನೆಗಳನ್ನು ರೂಪಿಸಲಾಗಿದೆ.**

ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಿಸುವ ನಿಟ್ಟಿನಲ್ಲಿ ಬೆಂಗಳೂರು ಸಬ್-ಅರ್ಬನ್ ರೈಲ್ವೆ, ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2 ಕಾಮಗಾರಿಯನ್ನು 30,695 ಕೋಟಿ ರೂ. ವೆಚ್ಚದಲ್ಲಿ 2024ರ ಜೂನ್ ವೇಳೆಗೆ ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಇಷ್ಟರಲ್ಲೇ ಮೈಸೂರು ರಸ್ತೆಯ ನಾಯಂಡಹಳ್ಳಿಯಿಂದ ಕೆಂಗೇರಿವರೆಗೆ ಮೆಟ್ರೋ ರೈಲು ಸಂಚಾರ ಕೂಡ ಆರಂಭವಾಗುತ್ತಿದೆ.

ಉತ್ತರ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡುವ ಮೂಲಕ ಅಲ್ಲಿನ ಜನರ ಸಮಗ್ರ ಕಲ್ಯಾಣ ಮಾಡುವ ಸಂಕಲ್ಪವನ್ನು ಹೊಂದಿದ್ದ ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ ಒಂದೂವರೆ ತಿಂಗಳಿನಲ್ಲಿ




Downloaded From: www.kpscvaani.com

## ಕೊರೊನಾದಿಂದ ಹೆತ್ತರವರನ್ನು ಕಳೆದುಕೊಂಡು ಅನಾಥರಾದ ಮಕ್ಕಳ ಭವಿಷ್ಯವನ್ನು ರೂಪಿಸುವ ದೃಷ್ಟಿಯಿಂದ "ಮುಖ್ಯಮಂತ್ರಿಗಳ ಬಾಲಸೇವಾ ಯೋಜನೆ"ಯನ್ನು ಜಾರಿಗೆ ತರುವ ಮೂಲಕ ಸರ್ಕಾರ ಮಾನವೀಯತೆಯನ್ನು ಮೆರೆದಿದೆ.



ಅಂದರೆ ಸೆಪ್ಟೆಂಬರ್ 17 ರಂದು ಹೈದ್ರಾಬಾದ್ ಕರ್ನಾಟಕವನ್ನು "ಕಲ್ಯಾಣ ಕರ್ನಾಟಕ" ಎಂದು ಮರು ನಾಮಕರಣ ಮಾಡಿದರು.

ಸಂವಿಧಾನ ಬದ್ಧವಾಗಿ ಪರಿಶಿಷ್ಟ ಜಾತಿ, ಪಂಗಡವರಿಗೆ ಅನುದಾನ ನಿಗದಿ ಮಾಡುತ್ತಿದ್ದು, ಇದರಿಂದ ಈ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಬೆಳವಣಿಗೆಗೂ ಸಹಕಾರಿಯಾಗಿದೆ. ಎಲ್ಲಾ ವಲಯಗಳಲ್ಲೂ ಶೋಷಿತ ಸಮುದಾಯ ಪ್ರಗತಿ ಕಾಣುತ್ತಿದೆ. ಕೋವಿಡ್ ಕಾರಣದಿಂದ 2020-21 ನೇ ಸಾಲಿನಲ್ಲಿ ಎರಡೂ ಸಮುದಾಯಗಳಿಗೆ 27,699.52 ಕೋಟಿ ರೂ ಅನುದಾನ ಒದಗಿಸಲಾಗಿತ್ತು. ಆದರೆ ಕಳೆದ ವರ್ಷ ಸುಮಾರು ಒಂದೂವರೆ ಸಾವಿರ ಕೋಟಿ ಅನುದಾನ ವೆಚ್ಚವಾಗಿಲ್ಲ. ಹಾಗೆಂದು ಈ ಹಣ ವ್ಯರ್ಥವಾಗಿಲ್ಲ. ಈ ಹಣಕಾಸು ವರ್ಷಕ್ಕೆ ಸೇರ್ಪಡೆಯಾಗಿದ್ದು, ಶೋಷಿತ ಸಮುದಾಯದ ಶ್ರೇಯೋಭಿವೃದ್ಧಿಗೆ ವೆಚ್ಚ ಮಾಡಲು ಅಧಿಕಾರಿ ವರ್ಗಕ್ಕೆ ಯಡಿಯೂರಪ್ಪ ಅವರು ಈಗಾಗಲೇ ಸೂಚನೆ ನೀಡಿದ್ದಾರೆ.



ರಾಜ್ಯ ಪೊಲೀಸರು ಯುದ್ಧ, ಶಾಂತಿ ಕಾಲದಲ್ಲೂ ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದು, ಎರಡು ವರ್ಷಗಳ ಅವರ ಕಾರ್ಯನಿರ್ವಹಣೆ ಇದಕ್ಕೆ ಸಾಕ್ಷಿಯಾಗಿದೆ. ಕೋವಿಡ್ ಸಂದರ್ಭದಲ್ಲಿ ಪೊಲೀಸರು ಹಗಲಿರುಳು ಸೋಂಕು ನಿಯಂತ್ರಣ ಕ್ರಮಗಳು, ಕಠಿಣ ಲಾಕ್‌ಡೌನ್ ನಿಯಮಗಳನ್ನು ಜಾರಿಗೆ ತಂದ ಮಂಚೂಣಿ ಕಾರ್ಯಕರ್ತರಾಗಿದ್ದಾರೆ. ಹಸಿದವರಿಗೆ ಅನ್ನ ನೀರು ನೀಡಿ ಮಾನವೀಯತೆಯನ್ನೂ ಮರೆದಿದ್ದಾರೆ. ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದ ಮೂರು ಸಾವಿರಕ್ಕೂ ಹೆಚ್ಚು ಹೋಂ ಗಾರ್ಡ್‌ಗಳನ್ನು ಸೇವೆಯಲ್ಲಿ ಮುಂದುವರಿಸಿ ವಿವಿಧ ಇಲಾಖೆಗಳಿಗೆ ನಿಯೋಜಿಸುವಂತೆ ಯಡಿಯೂರಪ್ಪ ಅವರು ಸೂಚಿಸಿರುವುದು ಉನ್ನತ ಬೆಳವಣಿಗೆ. ಮುಂದಿನ ದಿನಗಳಲ್ಲಿ ಖಾಸಗಿ ಸಂಸ್ಥೆಗಳಿಗೆ ಹೋಂಗಾರ್ಡ್‌ಗಳ ಸೇವೆಯನ್ನು ಒದಗಿಸುವ ಕುರಿತು ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡುವ ಜತೆಗೆ ಪೊಲೀಸರು ಡ್ರಗ್ ಮಾಫೀಯವನ್ನು ಅತ್ಯಂತ ವ್ಯವಸ್ಥಿತವಾಗಿ ಮಟ್ಟ ಹಾಕುತ್ತಿದ್ದಾರೆ.



ಕರ್ನಾಟಕ ಶಾಂತಿಯ ತೋಟ, ಕಾನೂನು ಸುವ್ಯವಸ್ಥೆ ನಿಯಂತ್ರಣದಲ್ಲಿರುವ ಕಾರಣ ಎಲ್ಲಾ ವಲಯಗಳಲ್ಲೂ ಹೆಚ್ಚಿನ ಅವಕಾಶಗಳು ದೊರೆಯುತ್ತಿವೆ. ಇಲ್ಲಿನ ಭೌಗೋಳಿಕ ವೈವಿಧ್ಯತೆ, ನೈಸರ್ಗಿಕ ಸಂಪನ್ಮೂಲ, ಸಂಶೋಧನೆ,ನಾವೀನ್ಯತೆ ಖ್ಯಾತಿ ಪಡೆದಿದೆ. ವಿವಿಧತೆಯಲ್ಲಿ ಏಕತೆಗೆ ಹೆಸರಾಗಿರುವ ಕರ್ನಾಟಕವನ್ನು ಸಮೃದ್ಧ ಕರ್ನಾಟಕವನ್ನಾಗಿ ರೂಪಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮುಂದೆ ಬೆಟ್ಟದಷ್ಟು ಸವಾಲುಗಳಿವೆ. ಸವಾಲುಗಳನ್ನು ಅವಕಾಶಗಳನ್ನಾಗಿ ಮಾಡಿಕೊಂಡು ಮುನ್ನಡೆಯುವ ಛಲವೂ ಅವರಲ್ಲಿದೆ. ರಾಜ್ಯದ ಜನತೆಗೆ ಅವರ ಮೇಲೆ ನಂಬಿಕೆ ಇದೆ. ಮುಂಬರುವ ದಿನಗಳಲ್ಲಿ ಕೋವಿಡ್ ನಿಂದ ಆಗಿರುವ ಹಾನಿಯನ್ನು ಸರಿಪಡಿಸಿ ಕರ್ನಾಟಕವನ್ನು ಮತ್ತೆ ಹೇಗೆ ಪುನರ್ ನಿರ್ಮಾಣ ಮಾಡಬಲ್ಲರು, ಪರಿವರ್ತನೆ ತರಬಲ್ಲರು ಎನ್ನುವ ಕುತೂಹಲವೂ ಜನರಲ್ಲಿದೆ. ■





Downloaded From: www.kpscvaani.com

# ಸರ್ಕಾರದ ಸಾಫಲ್ಯದ ಕುರಿತು ವಿವಿಧ ಕ್ಷೇತ್ರಗಳ ಪ್ರಮುಖರ ಅಭಿಮತ

**ಸಂಕಷ್ಟದ ಸವಾಲಿನ ನಡುವೆಯೂ ಸರ್ಕಾರವು ಜನಸಾಮಾನ್ಯರಿಗೆ ಹಾಗೂ ವಿವಿಧ ವಲಯದ ವರ್ಗದವರಿಗೆ ನೀಡಿದ ಸಹಕಾರದ ಕುರಿತು ವಿವಿಧ ಕ್ಷೇತ್ರಗಳ ಪ್ರಮುಖರು ವ್ಯಕ್ತಪಡಿಸಿರುವ ಅಭಿಮತ.**

**ಕಂ.ಕ. ಮೂರ್ತಿ**



ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರ ನೇತೃತ್ವದ ಸರ್ಕಾರ ಜುಲೈ 26ರಂದು ಎರಡು ವರ್ಷ ಪೂರೈಸುತ್ತಿದೆ. ಜಾಗತಿಕವಾಗಿ ಕಾಡಿದ ಕೋವಿಡ್-19ರ ಎರಡು ಅಲೆಗಳಿಗೆ ಸಿಲುಕಿ ಇಡೀ ವ್ಯವಸ್ಥೆ ತತ್ತರಿಸಿತು. ಜನಸಾಮಾನ್ಯರನ್ನು ಆರ್ಥಿಕ ಸಂಕಷ್ಟ ಕಾಡಿತು. ಈ ಬಿಕ್ಕಟ್ಟಿನ ನಡುವೆಯೂ ಸರ್ಕಾರ ಜನರ ಜೀವನ ಮಟ್ಟ ಸುಧಾರಿಸಲು ಸಾಕಷ್ಟು ಕ್ರಮಗಳನ್ನು ಕೈಗೊಂಡು ಸವಾಲನ್ನು ಗೆದ್ದಿತ್ತು, ಕೋವಿಡ್ ಸಾಂಕ್ರಾಮಿಕದ ಬಿರುಗಾಳಿಗೆ ಸಿಲುಕಿದ ಸಾರ್ವಜನಿಕ ಬದುಕನ್ನು ಹಳಿಗೆ ತರುವಲ್ಲಿ ಯಶಸ್ವಿ ಆಯಿತು. ಸರ್ಕಾರದ ಸಾಫಲ್ಯದ ಕುರಿತು ವಿವಿಧ ಕ್ಷೇತ್ರಗಳ ಪ್ರಮುಖರು ಇಲ್ಲಿ ತಮ್ಮ ಸಂತಸ, ಸಮಾಧಾನ ಹಂಚಿಕೊಂಡಿದ್ದಾರೆ.

ಕೋವಿಡ್ ರೈತರ ಬದುಕನ್ನು ಕಾಡಿದೆ. ಆದರೆ ರಾಜ್ಯ ಸರ್ಕಾರ ರೈತರು ಬದುಕು ಸುಧಾರಿಸಲು ತನ್ನ ಇತಿಮಿತಿಯಲ್ಲಿ ಹಲವು ಕ್ರಮ ಕೈಗೊಂಡಿದೆ. ಸರ್ಕಾರ ಪ್ರಕಟಿಸಿದ ಪ್ಯಾಕೇಜ್ ಸ್ವಲ್ಪಮಟ್ಟಿಗೆ ಸಮಾಧಾನ ತಂದಿದೆ ಎನ್ನುತ್ತಾರೆ ರೈತ ಮುಖಂಡ ಕುರುಬೂರು ಶಾಂತಕುಮಾರ್. ಕೋವಿಡ್ ನಿಯಂತ್ರಿಸಲು ಸರ್ಕಾರ ಅನಿವಾರ್ಯವಾಗಿ ಕೈಗೊಂಡ ಲಾಕ್‌ಡೌನ್ ಕ್ರಮ ಆರ್ಥಿಕ ಕ್ಷೇತ್ರದ ಮೇಲೆ ಪರಿಣಾಮ ಬೀರಿತು. ಕೃಷಿ ಕ್ಷೇತ್ರವೂ ತತ್ತರಿಸುವಂತಾಯಿತು. ಈ ನಿರಾಶಾದಾಯಕ ಬೆಳವಣಿಗೆ ನಡುವೆಯೂ ಆಹಾರೋತ್ಪಾದನೆ ಹೆಚ್ಚಿರುವುದು ಸಂತಸದ ಸಂಗತಿ ಎನ್ನುತ್ತಾರೆ ಅವರು. ಸರ್ಕಾರ ರೈತರಿಗೆ ಪ್ರೋತ್ಸಾಹಧನ ಕೊಡುವ ಬದಲಾಗಿ ಬೆಳೆ ವಿಮೆ ಮಾಡಿಸಬೇಕು. ಬೆಳೆ ನಷ್ಟ ಆದಾಗ ವಿಮೆ ಹಣ ರೈತನ ಕೈ ಹಿಡಿಯುವಂತೆ ಆಗಬೇಕು. ವಿಮಾ ಕಂತನ್ನು ಸರ್ಕಾರವೇ ಪಾವತಿಸುವಂತೆ ಆಗಬೇಕು ಎನ್ನುವುದು ಅವರ ಸಲಹೆ.

ಲಾಕ್ ಡೌನ್ ಅವಧಿಯದಲ್ಲಿ ರೈತರಿಗೆ ಅನಾನುಕೂಲ ಆಗಬಾರದು ಎಂಬ ಉದ್ದೇಶದಿಂದ ಸರ್ಕಾರ ರೈತರಿಗೆ ಗ್ರೀನ್ ಪಾಸ್ ವಿತರಣೆ ಮಾಡುವ ಮೂಲಕ ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಅವಕಾಶ ಕಲ್ಪಿಸಿಕೊಟ್ಟು ಅನುಕೂಲ ಮಾಡಿಕೊಟ್ಟಿತು. ಹಾಗೆಯೇ ಸರ್ಕಾರ ಬೆಳೆ ನಷ್ಟ ಅನುಭವಿಸಿದ ಹೂವು, ಹಣ್ಣು, ತರಕಾರಿ ಬೆಳೆಗಾರರಿಗೆ ಪರಿಹಾರಧನ ನೀಡಿತಲ್ಲದೆ, ನರೇಗಾ ಯೋಜನೆ ಅಡಿ ರೈತರಿಗೆ ಕೆಲಸವನ್ನು ಒದಗಿಸಿಕೊಟ್ಟಿತು. ಆದಾಗ್ಯೂ ಕೂಡ ಕೋವಿಡ್ ಸಂಕಷ್ಟಕ್ಕೆ ಸಿಲುಕಿರುವ ರೈತನ ಬದುಕು ಮತ್ತಷ್ಟು ಸುಧಾರಿಸಲು ಇನ್ನಷ್ಟು ಕ್ರಮಗಳು ಬೇಕು ಎನ್ನುವುದು ಅವರ ಅಭಿಮತ.

**-ಕುರುಬೂರು ಶಾಂತಕುಮಾರ್,** ರೈತ ಮುಖಂಡರು



ರಾಜ್ಯ ಸರ್ಕಾರಿ ನೌಕರರು ಆಡಳಿತ ಯಂತ್ರದ ಒಂದು ಭಾಗ, ಅವರ ಬದುಕು ನೆಮ್ಮದಿಯಾಗಿದ್ದರೆ ಅವರ ಕಾರ್ಯನಿರ್ವಹಣೆಯೂ ಚೆನ್ನಾಗಿರುತ್ತದೆ. ಸರ್ಕಾರ ಕಳೆದೆರಡು ವರ್ಷಗಳಲ್ಲಿ ನೌಕರರ ಭಾವನೆಗೆ ಸ್ಪಂದಿಸಿ ಕೆಲಸ ಮಾಡಿದೆ, ನೌಕರರ ಸಂಘದ ಬೇಡಿಕೆಗಳನ್ನು ಬಹುತೇಕವಾಗಿ ಈಡೇರಿಸಿದೆ, ಈ ಬಗ್ಗೆ ನಮಗೆ ಸಮಾಧಾನವಿದೆ ಎನ್ನುತ್ತಾರೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಿ.ಎಸ್.ಷಡಾಕ್ಷರಿ.

ಈ ಹಿಂದೆ ಸರ್ಕಾರಿ ನೌಕರರ ವಿರುದ್ಧ ಬರುತ್ತಿದ್ದ ಅನಾಮಧೇಯ ದೂರುಗಳ ಬಗ್ಗೆ ತನಿಖೆ ನಡೆಸುವ ನೆಪದಲ್ಲಿ ನೌಕರರಿಗೆ ಕಿರುಕುಳ ಆಗುತಿತ್ತು, ಇದು ಅವರ ಕಾರ್ಯಶೈಲಿ ಮೇಲೆ ನಕಾರಾತ್ಮಕ ಪರಿಣಾಮ ಬೀರುತಿತ್ತು, ಅಂತಹ ದೂರುಗಳ ಬಗ್ಗೆ ತನಿಖೆ ಅಗತ್ಯವಲ್ಲ ಎಂದು ಸರ್ಕಾರ ಆದೇಶ ಹೊರಡಿಸಿರುವುದರಿಂದ ನೌಕರರು ನೆಮ್ಮದಿಯಿಂದ ಕೆಲಸ ಮಾಡುವ ವಾತಾವರಣ ಸೃಷ್ಟಿಯಾಗಿದೆ, ಇದು ಸರ್ಕಾರ ಸ್ಪಂದಿಸಿದ ಪರಿ ಎನ್ನುತ್ತಾರೆ, ಮರಣ ಹೊಂದಿದ ನೌಕರರ ಶವಸಂಸ್ಕಾರಕ್ಕೆ ಈ ಹಿಂದೆ 5 ಸಾವಿರ ರೂ. ನೀಡಲಾಗುತಿತ್ತು, ಅದನ್ನು ಈ ಅವಧಿಯಲ್ಲಿ ಹದಿನೈದು ಸಾವಿರ ರೂ.ಗೆ ಹೆಚ್ಚಿಸಲಾಗಿದೆ. ಡಯಾಲಿಸಿಸ್ ಚಿಕಿತ್ಸೆಗಾಗಿ ವಿಶೇಷ ರಜೆ ನೀಡುವ ತೀರ್ಮಾನವೂ ಮಹತ್ವದ್ದು. ಕ್ಯಾನ್ಸರ್ ಪೀಡಿತ ನೌಕರರಿಗೆ ಆರು ತಿಂಗಳ ಸಾಂದರ್ಭಿಕ ರಜೆ ಮಂಜೂರು ಮಾಡಿರುವುದು ಸರ್ಕಾರದ ಮಾನವೀಯ ಮುಖವನ್ನು ಅನಾವರಣಗೊಳಿಸಿದೆ ಎನ್ನುತ್ತಾರೆ ಅವರು.

ಹತ್ತು ದಿನಗಳ ಸಿಎಲ್ ಅನ್ನು ಹದಿನೈದು ದಿನಕ್ಕೆ ಏರಿಸಿರುವುದು, ಮಹಿಳಾ ನೌಕರರಿಗೆ ಆರು ತಿಂಗಳ ಶಿಶುಪಾಲನಾ ರಜೆ ಮಂಜೂರು, ಕೆಜಿಐಡಿ ಕಚೇರಿ, ಪಾಲಿಸಿಗಳ ಗಣಕೀಕರಣ ಹಾಗೂ ಬೋನಸ್ ಮಂಜೂರು. ನೌಕರರ ಕುಂದು ಕೊರತೆ ಆಲಿಸಲು ಜೆಸಿಎಂ ಸಮಿತಿಗಳ ರಚನೆ, ನೌಕರರ ಸಂಘದ ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರುಗಳಿಗೆ ಸರ್ಕಾರದ ಅಧಿಕೃತ ಸಭೆಗಳಲ್ಲಿ ಅವಕಾಶ ನೀಡಿರುವುದು ಮುಂತಾದವು ಸರ್ಕಾರ ನೌಕರ ವೃಂದಕ್ಕೆ ನೀಡಿದ ಕೊಡುಗೆ ಎಂದು ಪಟ್ಟಿ ಮಾಡುತ್ತಾರೆ. ಸರ್ಕಾರಿ ನೌಕರರು ಮತ್ತು ಅವಲಂಭಿತರಿಗೆ ಸಂಪೂರ್ಣ ನಗದು ರಹಿತ ಚಿಕಿತ್ಸಾ ಯೋಜನೆಯನ್ನು ಸರ್ಕಾರ ಶೀಘ್ರವೇ ಜಾರಿಗೆ ತರಲಿದೆ, ಇದು ಅತ್ಯಂತ ಹರ್ಷದಾಯಕ ಸಂಗತಿ ಎಂದು ಸ್ಮರಿಸುತ್ತಾರೆ.

**-ಸಿ. ಎಸ್. ಷಡಾಕ್ಷರಿ**
ಅಧ್ಯಕ್ಷರು ಕರ್ನಾಟಕ ರಾಜ್ಯ
ಸರ್ಕಾರಿ ನೌಕರರ ಸಂಘ



Downloaded From: www.kpscvaani.com



ಕಳೆದೆರಡು ವರ್ಷಗಳಲ್ಲಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ಕೈಗೊಂಡ ಸಕಾಲಿಕ ಕ್ರಮಗಳಿಂದ ಸಣ್ಣ ಉದ್ದಿಮೆಗಳಿಗೆ ನವಚೈತನ್ಯ ದೊರೆತಿದೆ. ಕೋವಿಡ್-19ರ ಎರಡೂ ಅಲೆಗಳು ತಂದೊಡ್ಡಿದ ಸವಾಲನ್ನು ಸಮರ್ಥವಾಗಿ ಎದುರಿಸಲು ಉದ್ದಿಮೆದಾರರಿಗೆ ಈ ಉಪಕ್ರಮಗಳು ಆತ್ಮವಿಶ್ವಾಸ ತುಂಬಿವೆ ಎಂದು ಕರ್ನಾಟಕ ಸಣ್ಣ ಕೈಗಾರಿಕಾ ಒಕ್ಕೂಟ (ಕಾಸಿಯಾ) ಹರ್ಷ ವ್ಯಕ್ತಪಡಿಸಿದೆ.

ಕಳೆದ ವರ್ಷದ ಮೇ ತಿಂಗಳಲ್ಲಿ ಸರ್ಕಾರ ಪ್ರಕಟಿಸಿದ 1610 ಕೋಟಿ ರೂ.ಗಳ ಪ್ಯಾಕೇಜ್ ಈ ಕ್ಷೇತ್ರದ ಚೇತರಿಕೆಗೆ ಕಾರಣವಾಯಿತು, ಇದು ಹಾಲಿ ಅಸ್ತಿತ್ವದಲ್ಲಿರುವ ಕೈಗಾರಿಕೆಗಳಿಗೆ ನೆರವು ನೀಡಿದ್ದಲ್ಲದೇ, ಹೊಸದಾಗಿ ಉದ್ದಿಮೆ ಆರಂಭಿಸುವವರಿಗೆ ಅನುಕೂಲವಾಯಿತು. ಕಾಸಿಯಾ ಮನವಿ ಪುರಸ್ಕರಿಸಿದ ಸರ್ಕಾರ ಸಣ್ಣ ಕೈಗಾರಿಕೆಗಳ ವಿದ್ಯುತ್ ಬಿಲ್‌ಗಳ ಮಾಸಿಕ ನಿಗದಿತ ಶುಲ್ಕವನ್ನು ಎರಡು ತಿಂಗಳವರೆಗೆ ಮನ್ನಾ ಮಾಡಿದ್ದು ಮತ್ತೊಂದು ಮಹತ್ವದ ಉಪಕ್ರಮ. ವಿಳಂಬ ಪಾವತಿಗೆ ಬಡ್ಡಿಕಡಿತ, ಮುಂಚಿತವಾಗಿ ಬಿಲ್ ಪಾವತಿಸುವವರಿಗೆ ಪ್ರೋತ್ಸಾಹ ಮತ್ತು ಕಂತುಗಳಲ್ಲಿ ವಿದ್ಯುತ್ ಬಿಲ್ ಪಾವತಿಸುವ ಆಯ್ಕೆ ಸೇರಿದಂತೆ ಎಲ್ಲಾ ವರ್ಗಗಳ ವಿದ್ಯುತ್ ಗ್ರಾಹಕರಿಗೆ ಪ್ರೋತ್ಸಾಹ ನೀಡಿದ್ದು ಮರೆಯುವಂತಿಲ್ಲ ಎಂದು ಕಾಸಿಯಾ ಅಧ್ಯಕ್ಷರಾದ ಕೆ.ಬಿ.ಅರಸಪ್ಪ ಅವರು ಸಂತಸ ಹಂಚಿಕೊಂಡಿದ್ದಾರೆ.

ಸರ್ಕಾರ ಘೋಷಿಸಿದ ಹೊಸ ಜವಳಿ-ಸಿದ್ಧ ಉಡುಪು ನೀತಿ ಹಾಗೂ 2020-25 ರ ನೂತನ ಕೈಗಾರಿಕಾ ನೀತಿಯಿಂದ ಸುಧಾರಿತ ಉತ್ಪಾದನೆ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ಇನ್ನೋವೇಶನ್ ನಂತಹ ಆದ್ಯತಾ ಕ್ಷೇತ್ರಗಳಲ್ಲಿ ಕರ್ನಾಟಕ ಜಾಗತಿಕ ಉದ್ಯಮದ ಮುಂಚೂಣಿ ಸ್ಥಾನದಲ್ಲಿದೆ ಎಂದು ಹೇಳಲು ಹೆಮ್ಮೆ ಆಗುತ್ತದೆ. ಸರ್ಕಾರ ವಿವಿಧ ರೀತಿಯ ಉತ್ತೇಜನಗಳನ್ನು ನೀಡುವ ಮೂಲಕ ಮೂಲಸೌಕರ್ಯ, ಸಾಲ ಸೌಲಭ್ಯ, ಕೌಶಲ್ಯ ಅಭಿವೃದ್ಧಿ ತರಬೇತಿ ಚಟುವಟಿಕೆ ಹೆಚ್ಚಿಸಿದೆ. ಈ ಕ್ಷೇತ್ರದಲ್ಲಿ ಐದು ಲಕ್ಷ ಕೋಟಿ ರೂ.ಮೊತ್ತದ ಹೂಡಿಕೆಯನ್ನು ಆಕರ್ಷಿಸಲು ಮತ್ತು ಇಪ್ಪತ್ತು ಲಕ್ಷ ಜನರಿಗೆ ಉದ್ಯೋಗ ಸೃಷ್ಟಿಸಲು ಮುಂದಿನ ದಿನಗಳಲ್ಲಿ ಅನುವು ಮಾಡಲಿದೆ ಎಂಬ ವಿಶ್ವಾಸ ಅವರದು.

ಮೂಲಸೌಕರ್ಯ ಬೆಂಬಲ ಒದಗಿಸುವ ಸಲುವಾಗಿ ಕೆಐಎಡಿಬಿ ತನ್ನೆಲ್ಲ ಕೈಗಾರಿಕಾ ಪ್ರದೇಶಗಳಲ್ಲಿ ಕನಿಷ್ಠ ಶೇ.30 ರಷ್ಟು ಭೂಮಿಯನ್ನು ಸಣ್ಣ ಕೈಗಾರಿಕೆಗಳಿಗೆ ಮೀಸಲಿಟ್ಟಿರುವುದು ಸ್ವಾಗತಾರ್ಹ ಬೆಳವಣಿಗೆ ಎನ್ನುತ್ತಾರೆ ಅರಸಪ್ಪ.

**– ಕೆ. ಬಿ. ಅರಸಪ್ಪ**
ಅಧ್ಯಕ್ಷರು, ಕಾಸಿಯಾ



ರಾಜ್ಯ ಸರ್ಕಾರದ ಸರಳ ಕೈಗಾರಿಕಾ ನೀತಿ ಮತ್ತು ಕೃಷಿ ಭೂಮಿ ಖರೀದಿ ಕಾಯ್ದೆಗೆ ತಿದ್ದುಪಡಿ ತಂದಿರುವ ಕ್ರಮ ರಾಜ್ಯದಲ್ಲಿ ಕೋವಿಡ್ ಸಂಕಷ್ಟದ ನಡುವೆಯೂ ಕೈಗಾರಿಕಾ ಕ್ಷೇತ್ರವನ್ನು ಉಳಿಸುತ್ತಾ, ಬೆಳೆಸುತ್ತಿದೆ ಎನ್ನುತ್ತಾರೆ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯ ಒಕ್ಕೂಟದ (ಎಫ್‌ಕೆಸಿಸಿಐ) ಅಧ್ಯಕ್ಷರಾದ ಪೆರಿಕಲ್ ಸುಂದರ್ ಅವರು. ಈ ಸರ್ಕಾರ ಜಾರಿಗೆ ತಂದಿರುವ 2020-25 ರ ನೂತನ ಕೈಗಾರಿಕಾ ನೀತಿ ಇಡೀ ದೇಶಕ್ಕೆ ಮಾದರಿಯಾಗಿದೆ. ನಮ್ಮ ಸಂಸ್ಥೆ ಜತೆ ಸುದೀರ್ಘ ಸಮಾಲೋಚನೆ ನಂತರ ಈ ನೀತಿಯನ್ನು ಸರ್ಕಾರ ಅಂಗೀಕರಿಸಿದೆ. ಇದು ಕೈಗಾರಿಕೆಗಳ ಸ್ಥಾಪನೆಗೆ ಇದ್ದ ಹತ್ತಾರು ಅಡೆತಡೆಗಳನ್ನು ನಿವಾರಿಸಿ ಸರಳೀಕರಿಸಿದೆ. ಕೈಗಾರಿಕೆಗಳನ್ನು ಆರಂಭಿಸಲು ಪ್ರಮಾಣ ಪತ್ರ (ಆಫಿಡೆವಿಟ್) ಆಧಾರಿತ ಅನುಮತಿ ನೀಡುವ ಈ ಹೊಸ ಪದ್ಧತಿಯಿಂದ ಒಬ್ಬ ಉದ್ಯಮಿ ಎಲ್ಲಾ ಕ್ಲಿಯರೆನ್ಸ್‌ಗಳಿಗಾಗಿ ವರ್ಷಗಟ್ಟಲೆ ಕಾಯುವ ಅಗತ್ಯವಿಲ್ಲ. ಕಟ್ಟಡ ಸ್ಥಾಪನೆ ನಂತರ ನೇರವಾಗಿ ಕೈಗಾರಿಕೆ ಆರಂಭಿಸಬಹುದು. ಮುಂದಿನ ವರ್ಷಗಳಲ್ಲಿ ಉಳಿದ ವಿಷಯಗಳ ಪರವಾನಗಿ ಪಡೆದುಕೊಳ್ಳಬಹುದು. ಈ ನೀತಿ ಜಾರಿಗೆ ಬಂದ ನಂತರ ರಾಜ್ಯದಲ್ಲಿ ಕೈಗಾರಿಕೆಗಳ ಬರುವಿಕೆ ಹೆಚ್ಚುತ್ತಿದೆ, ನೆರೆ ರಾಜ್ಯದ ಉದ್ಯಮಿಗಳು ಆಸಕ್ತಿ ತೋರುತ್ತಿದ್ದಾರೆ ಎಂದು ಹೇಳುತ್ತಾರೆ.

ಕೃಷಿ ಭೂಮಿಯನ್ನು ಖರೀದಿಸಲು ಇದ್ದ ನಿರ್ಬಂಧಗಳನ್ನು ರದ್ದು ಮಾಡಿ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದಿರುವುದು ಈ ಸರ್ಕಾರದ ಮತ್ತೊಂದು ಕ್ರಾಂತಿಕಾರಕ ತೀರ್ಮಾನ. ಕೃಷಿ ಭೂಮಿ ಖರೀದಿ ಮಾಡುವವರಿಗೆ 25 ಲಕ್ಷ ರೂ. ವಾರ್ಷಿಕ ಆದಾಯ ಇರಬೇಕು ಎಂಬ ಷರತ್ತನ್ನು ತೆಗೆದು ಹಾಕಿರುವುದರಿಂದ ಅಷ್ಟು ಆದಾಯ ಇಲ್ಲದ ಆಸಕ್ತರು ಕೃಷಿ ಭೂಮಿ ಖರೀದಿಗೆ ಮುಂದಾಗುತ್ತಿದ್ದಾರೆ. ಬಂಜರು ಭೂಮಿ ಖರೀದಿಸಲು ಅವಕಾಶ ಇರುವುದರಿಂದ ಕೈಗಾರಿಕಾ ಬೆಳವಣಿಗೆ ಹೆಚ್ಚುತ್ತಿದೆ. ಇದಲ್ಲದೇ ಕೆಐಎಡಿಬಿ ಕೈಗಾರಿಕೆಗಳಿಗೆ ವಶಪಡಿಸಿಕೊಂಡ ಭೂಮಿಯಲ್ಲಿ ಶೇ.20ರಷ್ಟನ್ನು ಟೌನ್‌ಶಿಪ್‌ಗಾಗಿ ಮೀಸಲಿಡಬೇಕು ಎಂಬ ನಮ್ಮ ಸಂಸ್ಥೆಯ ಬೇಡಿಕೆಯನ್ನು ಮನ್ನಿಸಿ ಸರ್ಕಾರ ಆದೇಶ ಹೊರಡಿಸಿರುವುದು ಮತ್ತೊಂದು ಆಶಾದಾಯಕ ಬೆಳವಣಿಗೆ ಎನ್ನುತ್ತಾರೆ.

ಕೆಲವು ಜಿಲ್ಲೆಗಳಲ್ಲಿ ನಿರ್ದಿಷ್ಟ ಉತ್ಪಾದನೆಗೆ ಆದ್ಯತೆ ನೀಡಿರುವ ಸರ್ಕಾರದ ನೀತಿ ಸ್ವಾಗತಾರ್ಹ. ಉದಾಹರಣೆಗೆ ಕೊಪ್ಪಳದಲ್ಲಿ ಆಟಿಕೆಗಳ ಉತ್ಪಾದನೆಗೆ ಆದ್ಯತೆ ನೀಡಲಾಗಿದೆ. ಇದರಿಂದ ಆ ಜಿಲ್ಲೆಗಳ ಪರಿಸ್ಥಿತಿಗೆ ಅನುಗುಣವಾಗಿ ಕೈಗಾರಿಕಾ ಅಭಿವೃದ್ಧಿ ಸಾಧ್ಯವಾಗುತ್ತದೆ. ಇದಕ್ಕೆ ಪೂರಕವಾಗುವ ಹಾಗೆ ಪ್ರತಿ ಜಿಲ್ಲೆಯಲ್ಲಿಯೂ ಏರ್‌ಬೇಸ್ ಸ್ಥಾಪನೆ ಮಾಡಿ, ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕು ಎಂಬ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದೇವೆ. ಸರ್ಕಾರ ಅದಕ್ಕೆ ಸ್ಪಂದಿಸುವ ಆಶಾಭಾವ ಇದೆ ಎನ್ನುತ್ತಾರೆ ಪೆರಿಕಲ್ ಸುಂದರ್.

**– ಪೆರಿಕಲ್ ಸುಂದರ್**
ಅಧ್ಯಕ್ಷರು, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯ ಒಕ್ಕೂಟ



Downloaded From: www.kpscvaani.com



## ಹದಿನಾಲ್ಕು ಸಾವಿರ ಕೋಟಿ ನಗದು ಪರಿಹಾರ

# ನೇರವಾಗಿ ಫಲಾನುಭವಿಗಳ ಖಾತೆಗೆ

ಕೆ. ರೋಹಿಣಿ

**ವಿವಿಧ ಯೋಜನೆಗಳ ಪರಿಹಾರದ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾಯಿಸುವ ಮೂಲಕ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿದ ಸರ್ಕಾರ**

ಯಾವುದೇ ಮಧ್ಯವರ್ತಿಗಳ ಹಂಗಿಲ್ಲದೆ ಅರ್ಹ ಫಲಾನುಭವಿಗಳ ಖಾತೆಗೆ ಪರಿಹಾರ ಹಣವನ್ನು ಪಾವತಿ ಮಾಡುವಂತೆ ರೂಪಿಸಲಾದ ಯೋಜನೆಯೇ ಡಿಟಿಪಿ. ಇದು ಸರ್ಕಾರದ ಪಾರದರ್ಶಕ ಆಡಳಿತಕ್ಕೊಂದು ಗರಿಮೆ ಎಂದರೆ ತಪ್ಪಾಗಲಾರದು.

ಸಂತ್ರಸ್ತ ಫಲಾನುಭವಿಗಳು ಸರ್ಕಾರಿ ಕಚೇರಿಗಳನ್ನು ಅಲೆಯುವುದನ್ನು ತಪ್ಪಿಸಲು ಪರಿಹಾರ ಯೋಜನೆಗಳ ನಗದು ಸವಲತ್ತು ನೇರವಾಗಿ ಮತ್ತು ಕ್ಷಿಪ್ರವಾಗಿ ಸಂಬಂಧಿತ ವ್ಯಕ್ತಿಯ ಖಾತೆಗೆ ಜಮಾ ಮಾಡುವ ಉದ್ದೇಶದಿಂದ ರೂಪಿಸಲಾದ ಯೋಜನೆಯೇ ಡಿಬಿಟಿ (ಡೈರೆಕ್ಟ್ ಬೆನಿಫಿಷಿಯರಿ ಟ್ರಾನ್ಸ್‌ಫಾರ್ಮ್).

ಇಲ್ಲಿ ಫಲಾನುಭವಿಯ ಆಧಾರ್ ಕಾರ್ಡ್ ನಂಬರ್ ಬ್ಯಾಂಕ್ ಅಕೌಂಟ್ ತರಹ ಕೆಲಸ ಮಾಡುತ್ತದೆ. ಆಧಾರ್ ನಂಬರ್ ಮತ್ತು ಇ ನಂಬರ್‌ಗೆ ಲಿಂಕ್ ಮಾಡಿದ ಖಾತೆಗೆ ಇಲೆಕ್ಟ್ರಾನಿಕ್ ಪ್ರೊಸಿಜರ್ ಮುಖಾಂತರ ತಲುಪುತ್ತದೆ. ಹಾಗಾಗಿ ಫಲಾನುಭವಿಯ ಖಾತೆಗೆ ನಗದು ಪರಿಹಾರ ಅತಿ ಕಡಿಮೆ ಅವಧಿಯಲ್ಲಿ ವರ್ಗಾಯಿಸಲ್ಪಡುವುದರಿಂದ ಪಾರದರ್ಶಕ ವ್ಯವಸ್ಥೆ ನಿರ್ಮಾಣ ಸಾಧ್ಯ. ರಾಜ್ಯದ ಇ-ಗವರ್‌ನೆನ್ಸ್ ಉಪಯೋಗಿಯಾದ ತಂತ್ರಜ್ಞಾನವನ್ನು ಬಳಸಿಕೊಂಡು ಅರ್ಹ ಫಲಾನುಭವಿಗಳಿಗೆ ನೇರನಗದು ಪರಿಹಾರ ವಿತರಣೆಯಲ್ಲಿ ಯಶಸ್ವಿಯಾಗಿದೆ. ಇದರಿಂದ ರೈತರು, ಕಾರ್ಮಿಕರು ತಮ್ಮೆಲ್ಲ ಕೆಲಸಗಳನ್ನು ಬದಿಗಿರಿಸಿ, ಪಂಚಾಯಿತಿ, ತಾಲೂಕು ಕಚೇರಿ ಅಲೆಯುವಿಕೆಯಿಂದ ಬಿಡುಗಡೆ ದೊರೆತಿದೆ.

ಈ ವ್ಯವಸ್ಥೆಯಿಂದಾಗಿ ವಿಳಂಬ ನೀತಿ ಹಾಗೂ ಪರಿಹಾರ ವಿತರಣೆಯಲ್ಲಿ ಲೋಪ ಸಂಭವಿಸುವುದನ್ನು ತಡೆಯಲು ಸಾಧ್ಯವಾಗಿದೆ. ಪ್ರಪ್ರಥಮವಾಗಿ ಡಿಬಿಟಿ ವ್ಯವಸ್ಥೆಯನ್ನು ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಸಂಬಂಧ



Downloaded From: www.kpscvaani.com

ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲಾಗಿದ್ದು, ಅರ್ಹ ರೈತರ ಖಾತೆಗೆ ವಾರ್ಷಿಕ 10,000 ರೂ ವರ್ಗಾವಣೆಯಾಗುತ್ತಿದೆ.

ಇದಲ್ಲದೆ ಕಳೆದ ಎರಡು ವರ್ಷಗಳಿಂದ ಕೋವಿಡ್–19 ಪರಿಹಾರ ವಿತರಣಾ ಯೋಜನೆಯಲ್ಲೂ ಡಿಬಿಟಿಯಿಂದಾಗಿ 15 ಲಕ್ಷಕ್ಕೂ ಅಧಿಕ ಸಂಘಟಿತ ಕಾರ್ಮಿಕ ವಲಯಕ್ಕೆ ನೇರ ನಗದು ಪರಿಹಾರ ವರ್ಗಾವಣೆಯಾಗಿದೆ.

ಇದೇ ಮಾದರಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಪಿಎಂ ಸ್ವಾನಿಧಿ ಯೋಜನೆಯಡಿ 1,90,000 ಫಲಾನುಭವಿಗಳಿಗೆ ಎರಡೇ ದಿನಗಳೊಳಗೆ ನಗದು ಪರಿಹಾರ ವಿತರಿಸಲಾಗಿದೆ. ಡಿಬಿಟಿ ಯಿಂದಾಗಿರುವ ಬಹುಮುಖ್ಯ ಲಾಭಗಳೆಂದರೆ ಕ್ಷಿಪ್ರ ಹಾಗೂ ನಿಗದಿತ ವ್ಯಕ್ತಿಗೆ ನೇರವಾಗಿ ಪರಿಹಾರ ಲಭ್ಯವಾಗುವುದು.

ಸುಮಾರು 115 ಯೋಜನೆಗಳಡಿ ಕಳೆದ ಮೂರು ವರ್ಷಗಳಲ್ಲಿ 13,000 ಕೋಟಿ ನಗದು ಪರಿಹಾರವನ್ನು ಆಧಾರ್ ಲಿಂಕ್ ಮೂಲಕ ವಿತರಿಸಲಾಗಿದೆ. ಇದರಲ್ಲಿ ಹಲವು ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯ ಮಾಹಿತಿಯೇ ಲಭ್ಯವಿರುವುದಿಲ್ಲ ಎಂಬ ಅಸಮಧಾನಕ್ಕೆ ಪರಿಹಾರ ಎಂಬಂತೆ ಪರಿಹಾರ ಪಾವತಿಯ ಮಾಹಿತಿಯನ್ನು ನೀಡುವ ಉದ್ದೇಶದಿಂದಲೇ ಡಿಬಿಟಿ ಮೊಬೈಲ್ ಆ್ಯಪ್ ರಚಿಸಲಾಗಿದೆ. ಈ ಆ್ಯಪ್ ಪಾಸ್ ಬುಕ್‌ನಲ್ಲಿ ಹಣ ವರ್ಗಾವಣೆ ಮಾಹಿತಿ ನೀಡುವಂತೆ ರೈತರಿಗೆ ಮಾಹಿತಿಯನ್ನು ನೀಡುತ್ತದೆ.

ಕಳೆದ ಎರಡು ವರ್ಷಗಳಿಂದ ಜನ ಜೀವನವನ್ನು ಬಾಧಿಸಿದ ಕೊರೊನಾ ಪರಿಹಾರಕ್ಕೆ ಡಿಬಿಟಿ ಮೂಲಕ ಪಾರದರ್ಶಕ ಮತ್ತು ಯಾವುದೇ ಗೊಂದಲಗಳಿಗೆ ಅವಕಾಶ ನೀಡದೆ ಡೈರೆಕ್ಟ್ ಬೆನಿಫಿಷಿಯರಿ ಟ್ರಾನ್ಸ್‌ಫಾರ್ಮ್ ಯೋಜನೆ ಪರಿಹಾರ ವಿತರಣೆಯಲ್ಲಿ ಯಶಸ್ವಿಯತ್ತ ಸಾಗಿದೆ.

2017–18 ರಲ್ಲಿ ಎರಡು ಯೋಜನೆಗಳನ್ನು ಡಿಬಿಟಿ ಯೋಜನೆಯಡಿ ತರಲಾಗಿ 4.35 ಕೋಟಿ ರೂ ಆರ್ಥಿಕ ನೆರವನ್ನು 58,859 ಫಲಾನುಭವಿಗಳು ಪಡೆದರು. ಯೋಜನೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಅನುಕೂಲತೆಗಳನ್ನು ಅರಿತ ಬಳಿಕ 2018–19 ರಲ್ಲಿ 14 ಸ್ಕೀಂಗಳಡಿ 41,93843 ಫಲಾನುಭವಿಗಳಿಗೆ




562.83 ಕೋಟಿ ರೂ ವಿತರಿಸಲಾಗಿದೆ. 2019–20 ರಲ್ಲಿ 37 ಯೋಜನೆಗಳ ಆರ್ಥಿಕ ಪರಿಹಾರವನ್ನು 2,0186,324 ಫಲಾನುಭವಿಗಳಿಗೆ 4,27.05 ಕೋಟಿ ರೂ ನೇರವಾಗಿ ಅವರ ಖಾತೆಗಳಿಗೆ ಜಮಾ ಮಾಡಲಾಗಿದೆ.

2020–21 ರಲ್ಲಿ 57 ಯೋಜನೆಗಳಡಿ 1,88,37,746 ಫಲಾನುಭವಿಗಳಿಗೆ 7,961.68 ಕೋಟಿ ರೂ ಪರಿಹಾರ ಪಾವತಿಯಾಗಿದೆ. 2021–22 ರಲ್ಲಿ 25 ಯೋಜನೆಗಳಡಿ 55,84,349 ಫಲಾನುಭವಿಗಳಿಗೆ 1,511.95 ಕೋಟಿ ಪಾವತಿಯಾಗಿದೆ.

ಡಿಬಿಟಿ ಅನುಷ್ಠಾನದಿಂದ 'ತಬರನಕಥೆ'ಗೆ ಒಂದು ತಾರ್ಕಿಕ ಅಂತ್ಯ ಹಾಡಲಾಗಿದೆ. ಸಮಯ ಎಂಬುದು ಹಣ, ಸಮಯದ ಸದುಪಯೋಗವನ್ನು ತಿಳಿದವರು ತಮ್ಮೆಲ್ಲ ಕೆಲಸ ಬಿಟ್ಟು, ದಿನವೆಲ್ಲಾ ತಹಸಿಲ್ದಾರ್ ಕಚೇರಿಯಲ್ಲಿ, ಜಿಲ್ಲಾಧಿಕಾರಿ ಕಚೇರಿಯಲ್ಲಿ ಕಳೆಯಲು ಇಷ್ಟಪಡುವುದಿಲ್ಲ. ಕೃಷಿಕನಿಗೆ ಮಾತ್ರವಲ್ಲದೆ ಪ್ರತಿಯೊಬ್ಬ ಕಾಯಕ ನಿರತರಿಗೂ ಪರಿಹಾರಕ್ಕೆ ಕಚೇರಿ ಅಲೆದಾಟ ಪೂರ್ವಜನ್ಮದ ಶಾಪದಂತೆ ಅನಿಸಿದರೆ ಅತಿಶಯೋಕ್ತಿಯಲ್ಲ. ದಕ್ಷಣ ಕನ್ನಡ, ಉಡುಪಿಯಂತಹ ಜಿಲ್ಲೆಗಳಲ್ಲಿ ವ್ಯವಸ್ಥೆಗೆ ರೋಸಿಹೋಗಿ, ಮಧ್ಯವರ್ತಿಗೆ ಈ ಪರಿಹಾರ ಪಡೆಯುವ ಕೆಲಸವನ್ನು ಒಪ್ಪಿಸಿ, ತಾವುಗಳು ತಮ್ಮ ಕಾಯಕದಲ್ಲಿ ನಿರತವಾಗುತಿದ್ದ ದೃಷ್ಟಾಂತಗಳು ಕಣ್ಣ ಮುಂದಿದೆ.

ಪರಿಹಾರಕ್ಕೋಸ್ಕರ ಕಚೇರಿಯಿಂದ ಕಚೇರಿಗೆ ಅಲೆಯುವುದು ನಿಜವಾಗಿಯೂ ಕ್ಲಿಷ್ಟಕರ ವಿಷಯ. ಅದಕ್ಕಾಗಿ ವಿವಿಧ ಮಾರ್ಗಗಳನ್ನು ಅನಿವಾರ್ಯವಾಗಿ ಅರ್ಹ ಫಲಾನುಭವಿಗಳು ಕಂಡುಕೊಂಡಿದ್ದರು. ಈ ವ್ಯವಸ್ಥೆಯನ್ನು ಮಧ್ಯವರ್ತಿಗಳು ಸದುಪಯೋಗ ಪಡಿಸಿಕೊಂಡಿದ್ದರು. ಇದರಿಂದ ವ್ಯವಸ್ಥೆಯ ಬಗ್ಗೆ, ಸರ್ಕಾರಗಳ ಬಗ್ಗೆ ಜನರಲ್ಲಿ ಅಸಹ್ಯ ಮೂಡಿದ್ದು ಸುಳ್ಳಲ್ಲ.

ಈ ಎಲ್ಲಾ ವಿಷಯಗಳನ್ನು ಗಮನದಲ್ಲಿರಿಸಿ ಸರ್ಕಾರದ ಯೋಜನೆಗಳ ಸದ್ಬಳಕೆ, ಮಧ್ಯವರ್ತಿ ಮುಕ್ತ ವ್ಯವಸ್ಥೆಗೆ ಡಿಬಿಟಿ ಉತ್ತರವಾಗಿ ಹೊರಹೊಮ್ಮಿದೆ. ಯೋಜನೆ ಅನುಷ್ಠಾನ ಸಮಯದಲ್ಲಿ ಫಲಾನುಭವಿಗಳಿಗೆ ಖಾತೆ ನಿರ್ವಹಣೆ ಮತ್ತು ಪ್ರೊಸೀಜರ್ಸ್ ಸ್ವಲ್ಪ ಕ್ಲಿಷ್ಟಕರವಾಗಿ ಕಂಡು ಬಂದರೂ ಡಿಬಿಟಿ ಅನುಷ್ಠಾನದಿಂದ ಅರ್ಹ ಫಲಾನುಭವಿಗಳು ಸಮಾಧಾನದ ಮುಗುಳ್ನಗೆ ಬೀರಿದ್ದು ಸತ್ಯ.

ಯೋಜನೆಯ ಪ್ರಗತಿ ಹಾಗೂ ಪಾರದರ್ಶಕತೆಯನ್ನು ಗಮನದಲ್ಲಿರಿಸಿ ಫಲಾನುಭವಿಗಳಿಗೆ ನೀಡುವ ಎಲ್ಲ ಆರ್ಥಿಕ ನೆರವು ಡಿಬಿಟಿ ವೇದಿಕೆಗೆ ಸರ್ಕಾರ ಅಳವಡಿಸಲು 2021–22ರ ಆಯವ್ಯಯದಲ್ಲಿ ಘೋಷಿಸಿರುವುದು ಅತ್ಯುತ್ತಮ ಪ್ರಯತ್ನವಾಗಿದೆ.

ಸರ್ಕಾರದ ಕೆಲಸದಲ್ಲಿ ಡಿಬಿಟಿ ಯೋಜನೆ ಒಂದು ಹೊಸ ಮೈಲುಗಲ್ಲನ್ನು ಸೃಷ್ಟಿಸಿದೆ. ಅರ್ಹ ಫಲಾನುಭವಿಗಳಿಗೆ ಯೋಜನೆಯ ಫಲಸಿಗಲಿ. ■



Downloaded From: www.kpscvaani.com



# ರಾಜ್ಯದಲ್ಲಿ ಕಿಸಾನ್ ರೈಲು ಸೌಲಭ್ಯಕ್ಕೆ ಚಾಲನೆ

**ರಾಜ್ಯದಲ್ಲಿ ಉತ್ಪಾದನೆಯಾಗುವ ಹಣ್ಣು, ತರಕಾರಿ ಮತ್ತು ಡೈರಿ ಉತ್ಪನ್ನಗಳನ್ನು ಸುರಕ್ಷಿತವಾಗಿ ಹಾಗೂ ತ್ವರಿತವಾಗಿ ಬೇಡಿಕೆ ಇರುವ ಮಾರುಕಟ್ಟೆಗಳಿಗೆ ತಲುಪಿಸುವ ಉದ್ದೇಶದಿಂದ ಪ್ರಾರಂಭಿಸಲಾಗಿರುವ ಕಿಸಾನ್ ರೈಲಿಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ.**

ಬಿ.ಜಿ.ಪೂರ್ಣಿಮ

ರೈತರು ಬೆಳೆದ ಬೆಳೆಗಳನ್ನು ಉತ್ಪಾದನೆಯ ಸ್ಥಳದಿಂದ ದೇಶದ ವಿವಿಧ ಭಾಗಗಳಿಗೆ ಸಾಗಾಣಿಕೆ ಮಾಡಲು ಅನುಕೂಲ ಕಲ್ಪಿಸುವ ಉದ್ದೇಶದಿಂದ "ಕಿಸಾನ್ ರೈಲ್" ಹೆಸರಿನಲ್ಲಿ ರೈಲು ಸೇವೆಯನ್ನು ಪ್ರಾರಂಭಿಸುವುದಾಗಿ ಕೇಂದ್ರ ಸರ್ಕಾರವು 2020-21 ರ ಬಜೆಟ್‌ನಲ್ಲಿ ಘೋಷಣೆ ಮಾಡಿತ್ತು. ಅದರಂತೆ ಈ ಸೌಲಭ್ಯವನ್ನು ಆಗಸ್ಟ್ 2020 ರಿಂದ ಪ್ರಾರಂಭಿಸಲಾಯಿತು.

ರೈತರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ಸಿಗಬೇಕಾದರೆ ಅವರಿಗೆ ಹೆಚ್ಚು ಬೆಲೆ ಸಿಗುವಂತಹ ಮಾರುಕಟ್ಟೆಯನ್ನು ಒದಗಿಸಿಕೊಡಬೇಕು. ದೇಶದ ವಿವಿಧ ಭಾಗಗಳ ಮಾರುಕಟ್ಟೆಯಲ್ಲಿ ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಿದಾಗ ಅವರಿಗೆ ಆದಾಯವಾಗಲಿದೆ. ಆದರೆ ದೇಶದ ವಿವಿಧ ಭಾಗಗಳಿಗೆ ತಮ್ಮ ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಹೆಚ್ಚು ವೆಚ್ಚವಾಗುತ್ತದೆ ಎಂದು ಹಿಂಜರಿಯುತ್ತಾರೆ. ಇದನ್ನು ಮನಗಂಡ ಸರ್ಕಾರವು ಶೀಘ್ರವಾಗಿ ಕೆಟ್ಟುಹೋಗುವ ಕೃಷಿ ಉತ್ಪನ್ನಗಳಾದ ಹಾಲು, ಮಾಂಸ, ಮೀನು, ಹಣ್ಣುಗಳು ಮತ್ತು ತರಕಾರಿಗಳು,



Downloaded From: www.kpscvaani.com

ಇವೇ ಮುಂತಾದವುಗಳನ್ನು ರಿಯಾಯಿತಿ ದರಗಳಲ್ಲಿ ಸಾಗಣೆ ಮಾಡಲು ಮತ್ತು ದೇಶದಲ್ಲಿ ಇದುವರೆಗೆ ಸಂಪರ್ಕರಹಿತವಾಗಿದ್ದ ಮಾರುಕಟ್ಟೆಗಳಿಗೆ ತಲುಪಿಸಲು ಅನುಕೂಲವಾಗುವಂತೆ 'ಕಿಸಾನ್ ರೈಲ್' ಅನ್ನು ಪ್ರಾರಂಭಿಸಿದೆ.

ಕಿಸಾನ್ ರೈಲ್ ಯೋಜನೆಯಡಿ ಸಾಗಾಣಿಕೆ ಮಾಡಿದ ರೈತರು, ರೈತ ಉತ್ಪಾದಕ ಸಂಸ್ಥೆ ಮತ್ತು ರೈತರ ಗುಂಪು, ವರ್ತಕರು, ಲೈಸನ್ಸ್ ಹೊಂದಿರುವ ಕಮಿಷನ್ ಏಜೆಂಟ್ಸ್, ರಫ್ತುದಾರರು ಹಾಗೂ ಇನ್ನಿತರೆ ಭಾಗಿದಾರರಿಗೆ ನಿಯಮಾನುಸಾರ ರೈಲ್ವೆ ಸಾಗಾಣಿಕೆ ದರದಲ್ಲಿ ನೇರವಾಗಿ ಶೇಕಡಾ 50 ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಚಿಂತಾಮಣಿಯಿಂದ 250 ಟನ್ ಮಾವಿನಹಣ್ಣನ್ನು ದೆಹಲಿಗೆ ಹೊತ್ತು ಸಾಗಿದ 'ಕಿಸಾನ್ ರೈಲಿಗೆ' ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಜೂನ್ 29 ರಂದು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಚಿವರಾದ ಬಸವರಾಜ ಬೊಮ್ಮಾಯಿ, ಆರ್. ಅಶೋಕ್, ಎಸ್.ಟಿ.ಸೋಮಶೇಖರ್, ಆರ್. ಶಂಕರ್, ಶಾಸಕ ಎಸ್.ಆರ್.ವಿಶ್ವನಾಥ್, ಬೆಂಗಳೂರು ರೈಲ್ವೆ ವಿಭಾಗದ ವ್ಯವಸ್ಥಾಪಕರಾದ ಅಶೋಕ್ ಕುಮಾರ್ ವರ್ಮಾ ಸೇರಿದಂತೆ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ರೈತರು ತಮ್ಮ ಉತ್ಪನ್ನಗಳನ್ನು ದೂರದ ದೊಡ್ಡ ಮತ್ತು ಪ್ರಮುಖ ಮಾರುಕಟ್ಟೆಗಳಿಗೆ ಕಡಿಮೆ ಅವಧಿಯಲ್ಲಿ, ಕಡಿಮೆ ವೆಚ್ಚದಲ್ಲಿ ಹಾಗೂ ಕನಿಷ್ಠ ಪ್ರಮಾಣದ ಹಾನಿಯೊಂದಿಗೆ ಗುಣಮಟ್ಟದ ಉತ್ಪನ್ನಗಳನ್ನು ಸಾಗಾಣಿಕೆ ಮಾಡಿ ಮಾರಾಟ ಮಾಡಬಹುದು.
ಮಾವಿನಹಣ್ಣನ್ನು ಕಿಸಾನ್ ರೈಲ್ ಮೂಲಕ ಬೆಂಗಳೂರಿನಿಂದ ನವದೆಹಲಿಗೆ ಸಾಗಾಣಿಕೆ ಮಾಡಿದಲ್ಲಿ ಪ್ರತಿ ಕೆ.ಜಿಗೆ ರೂ 2.80 ವೆಚ್ಚವಾಗುತ್ತಿದ್ದು, 38–40 ಗಂಟೆ ತೆಗೆದುಕೊಳ್ಳುತ್ತದೆ. ಅದೇ ರಸ್ತೆ ಮೂಲಕ ಸಾಗಾಣಿಕೆ ಮಾಡಿದಲ್ಲಿ ಪ್ರತಿ ಕೆ.ಜಿ ಗೆ ರೂ 6–7 ಖರ್ಚಾಗುತ್ತಿದ್ದು, 70 ಗಂಟೆ ತೆಗೆದುಕೊಳ್ಳುತ್ತದೆ.

ಹಣ್ಣು, ತರಕಾರಿ ಮತ್ತು ಡೈರಿ ಉತ್ಪನ್ನಗಳನ್ನು ಸುರಕ್ಷಿತವಾಗಿ, ಹಾಗೂ ತ್ವರಿತವಾಗಿ ಬೇಡಿಕೆ ಇರುವ ಮಾರುಕಟ್ಟೆಗಳಿಗೆ ತಲುಪಿಸುವಲ್ಲಿ ಕಿಸಾನ್ ರೈಲು ಸಹಕಾರಿಯಾಗಿದೆ. ಅಲ್ಲದೆ ಯಾವುದೇ ಮಧ್ಯವರ್ತಿಗಳ ಭಾಗವಹಿಸುವಿಕೆ ಇಲ್ಲದೆ ದೇಶಾದ್ಯಂತ ಹೆಚ್ಚಿನ ಧಾರಣೆ ಇರುವ ಮಾರುಕಟ್ಟೆಗಳಿಗೆ ಈ ಸೌಲಭ್ಯದ ಮೂಲಕ ಮಾರಾಟ ಮಾಡಬಹುದಾಗಿರುವುದರಿಂದ ರೈತರಿಗೆ ಪ್ರತಿ ಕೆ.ಜಿ.ಗೆ 10 ರೂ ದೊರಕುತ್ತಿದೆ.



## ಕಿಸಾನ್ ರೈಲಿನ ಪ್ರಯೋಜನಗಳು

- ರೈತರು ತಮ್ಮ ಉತ್ಪನ್ನಗಳನ್ನು ದೂರದ, ದೊಡ್ಡ ಮತ್ತು ಪ್ರಮುಖ ಮಾರುಕಟ್ಟೆಗಳಿಗೆ ಕಡಿಮೆ ಅವಧಿಯಲ್ಲಿ ಹಾಗೂ ಕನಿಷ್ಠ ಪ್ರಮಾಣದ ಹಾನಿಯೊಂದಿಗೆ ಗುಣಮಟ್ಟದ ಉತ್ಪನ್ನಗಳನ್ನು ಸಾಗಾಣಿಕೆ ಮತ್ತು ಮಾರಾಟ ಮಾಡಬಹುದು.
- ಯಾವುದೇ ಮಧ್ಯವರ್ತಿಗಳ ಭಾಗವಹಿಸುವಿಕೆ ಇಲ್ಲದೇ ದೇಶಾದ್ಯಂತ ಹೆಚ್ಚಿನ ಧಾರಣೆ ಇರುವ ಮಾರುಕಟ್ಟೆಗಳಿಗೆ ಮಾರಾಟ ಮಾಡಬಹುದು.
- ವಿವಿಧ ಉತ್ಪನ್ನಗಳನ್ನು ಒಂದೇ ರವಾನೆಯಲ್ಲಿ ವಿವಿಧ ಸ್ಥಳಗಳಿಗೆ ಮಾರುಕಟ್ಟೆ ಮಾಡಲು ಅವಕಾಶವಿರುತ್ತದೆ.
- ಕಡಿಮೆ ಅವಧಿಯಲ್ಲಿ ಉತ್ಪನ್ನಗಳ ಸಾಗಾಣಿಕೆಯಾಗುವುದರಿಂದ ತಾಜಾ ಗುಣಮಟ್ಟದ ಉತ್ಪನ್ನಗಳು ಗ್ರಾಹಕರಿಗೆ ಕಡಿಮೆ ಬೆಲೆಗೆ ದೊರಕುವ ಜೊತೆಗೆ ರೈತರಿಗೆ ಉತ್ತಮ ಬೆಲೆ ದೊರಕುತ್ತದೆ.
- ದೆಹಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದರಿಂದ ಪ್ರತಿ ಕೆ.ಜಿ ಮಾವಿಗೆ 10 ರೂ ಹೆಚ್ಚುವರಿ ದರ ಸಿಗುತ್ತದೆ.

ಮಾವಿನ ಹಣ್ಣನ್ನು ಕೋಲಾರ ಜಿಲ್ಲೆಯಲ್ಲಿ 46,774 ಹೆಕ್ಟೇರ್ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 10709.31 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಅಂದರೆ ಒಟ್ಟು ವಿಸ್ತೀರ್ಣದ ಶೇಕಡಾ 36 ರಷ್ಟು ಅಂದರೆ 57483.97 ಹೆಕ್ಟೇರ್ ವಿಸ್ತೀರ್ಣದಲ್ಲಿ ಮಾವು ಬೆಳೆಯಲಾಗುತ್ತಿದೆ. ಬೇಡಿಕೆಗೆ ಅನುಗುಣವಾಗಿ ಸದರಿ ಜಿಲ್ಲೆಗಳಿಂದ ವಾರದಲ್ಲಿ 2–3 ಬಾರಿ ಮಾವು ಉತ್ಪನ್ನಗಳನ್ನು ದೆಹಲಿಗೆ ಕಿಸಾನ್ ರೈಲ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಇದೇ ಜೂನ್ 29 ರಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಂದ 5 ಕಿಸಾನ್ ರೈಲು ಸೇವೆಗಳ ಮೂಲಕ 1,250 ಮೆಟ್ರಿಕ್ ಟನ್ ಮಾವನ್ನು ದೆಹಲಿಗೆ ಸಾಗಾಣಿಕೆ ಮಾಡಲಾಗಿದೆ.

ಒಟ್ಟಿನಲ್ಲಿ ರಾಜ್ಯದ ರೈತರು ಬೆಳೆದ ಬೆಳೆಗಳನ್ನು ಅಂತರ ರಾಜ್ಯಗಳ ಮಾರುಕಟ್ಟೆಗಳಿಗೆ ಸುಲಭವಾಗಿ ಸಾಗಿಸಲು ಕಿಸಾನ್ ರೈಲು ಸಹಕಾರಿಯಾಗಿರುವುದರಿಂದ ರೈತರ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ದೊರಕುವ ಜೊತೆಗೆ ಉತ್ತಮ ಬೆಲೆ ಕೂಡ ಸಿಗಲಿದೆ.



Downloaded From: www.kpscvaani.com




**ಡಿಜಿಟಲ್ ಕಲಿಕಾ ಯೋಜನೆಯಡಿ**

# ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್

**ಗ್ರಾಮೀಣ ಪ್ರದೇಶದ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ ರಾಜ್ಯ ಸರ್ಕಾರವು ಡಿಜಿಟಲ್ ಕಲಿಕಾ ಯೋಜನೆಯಡಿ ಉಚಿತವಾಗಿ ಟ್ಯಾಬ್‌ಗಳನ್ನು ಒದಗಿಸಿಕೊಟ್ಟಿದೆ.**

ಎನ್. ನಾಗರತ್ನಮ್ಮ

ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಕಳೆದ ಒಂದು ವರ್ಷದಿಂದ ಶಾಲಾ ಕಾಲೇಜುಗಳನ್ನು ಮುಚ್ಚಲಾಗಿದ್ದು, ಆನ್‌ಲೈನ್‌ನಲ್ಲಿ ತರಗತಿಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಕಲಿಕೆ ನಿರಂತರವಾಗಿ ಮುಂದುವರಿಯಬೇಕು. ಯುವಜನತೆ ಶ್ರೇಷ್ಠ ಮಟ್ಟದ ಉನ್ನತ ಶಿಕ್ಷಣ ಪಡೆದು ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎನ್ನುವ ದೂರದೃಷ್ಟಿಯಿಂದ ಸರ್ಕಾರವು ಪ್ರಪ್ರಥಮ ಬಾರಿಗೆ ರಾಜ್ಯದಲ್ಲಿ ಡಿಜಿಟಲ್ ಕಲಿಕಾ ಯೋಜನೆಯನ್ನು 2020–21ರ ಶೈಕ್ಷಣಿಕ ಸಾಲಿನಲ್ಲಿ ಜಾರಿಗೆ ತಂದಿದೆ.

ಗ್ರಾಮೀಣ ವಿದ್ಯಾರ್ಥಿಗಳ ಕಲಿಕೆಯಲ್ಲಿ ತಾರತಮ್ಯ ನಿವಾರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಡಿ ಪ್ರಥಮ ಹಂತದಲ್ಲಿ 163 ಕೋಟಿ ರೂ. ವೆಚ್ಚದಲ್ಲಿ 1.55 ಲಕ್ಷ ಸರ್ಕಾರಿ ವಿದ್ಯಾರ್ಥಿಗಳಿಗೆ ಉಚಿತವಾಗಿ "ಟ್ಯಾಬ್" ವಿತರಿಸಲಾಗಿದ್ದು, 27.77 ಕೋಟಿ ರೂ. ವೆಚ್ಚದಲ್ಲಿ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜು, 87 ಸರ್ಕಾರಿ ಪಾಲಿಟೆಕ್ನಿಕ್ ಹಾಗೂ 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 2500 ಸ್ಮಾರ್ಟ್ ತರಗತಿಗಳನ್ನು ಸ್ಥಾಪಿಸಿದೆ. ಪ್ರತಿ ಸ್ಮಾರ್ಟ್ ತರಗತಿಯಲ್ಲಿ ಮಲ್ಟಿ ಮೀಡಿಯಾ ಪ್ರೊಜೆಕ್ಟರ್, ಯುಪಿಎಸ್, ಆಂಡ್ರಾಯ್ಡ್ ಬಾಕ್ಸ್, ವೈ-ಫೈ ಅಳವಡಿಸುವುದರ ಜೊತೆಗೆ



Downloaded From: www.kpscvaani.com

"Chalk & Talk" Video, Audio, Animations Images, Text ನಂತಹ ಬಹುಮಾಧ್ಯಮಗಳ ಬಳಕೆ ಮಾಡಲಾಗಿದ್ದು, ಆಧುನಿಕ ಬೋಧನೆಯ ಕಲಿಕೆಗೆ ಪೂರಕವಾಗಿದೆ.

ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಮಗ್ರ ಚಿತ್ರಣ ಬದಲಿಸಿರುವ ಡಿಜಿಟಲ್ ಕಲಿಕಾ ಯೋಜನೆಯನ್ನು ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸಾಧಾರಣ ತರಗತಿ ಕೊಠಡಿಗಳನ್ನು ಐಸಿಟಿಯುಕ್ತ ಸ್ಮಾರ್ಟ್ ತರಗತಿಗಳಾಗಿ ಉನ್ನತೀಕರಿಸಲಾಗುತ್ತಿದೆ.

ಸುಮಾರು 4.7 ಕೋಟಿ ರೂ.ವೆಚ್ಚದಲ್ಲಿ ಆನ್‌ಲೈನ್-ಆಫ್‌ಲೈನ್ ಎರಡೂ ಪದ್ಧತಿಗಳ ಕಲಿಕೆಗೆ ಪೂರಕವಾದ ಕರ್ನಾಟಕ ಎಲ್‌ಎಂಎಸ್ ಎಂಬ ಸಮಗ್ರ ಕಲಿಕಾ ನಿರ್ವಹಣಾ ವೇದಿಕೆಯ ಮೂಲಕ ಪರಿಷ್ಕೃತ ಮತ್ತು ಆಧುನಿಕ ರೀತಿಯ ಬೋಧನೆ-ಕಲಿಕೆಗಳನ್ನು ರೂಢಿಗೆ ತರಲಾಗುತ್ತಿದೆ.

ಈಗಾಗಲೇ ಸರ್ಕಾರಿ ಕಾಲೇಜುಗಳ 2,500 ತರಗತಿಗಳನ್ನು ಸ್ಮಾರ್ಟ್ ತರಗತಿಗಳ ಕೊಠಡಿಗಳನ್ನಾಗಿ ಉನ್ನತೀಕರಿಸಿದ್ದು, ಪ್ರಸಕ್ತ ಸಾಲಿನಲ್ಲಿ 6,500 ತರಗತಿಗಳ ಕೊಠಡಿಗಳನ್ನು ಸ್ಮಾರ್ಟ್ ತರಗತಿಗಳಾಗಿ ಪರಿವರ್ತಿಸಲಾಗುತ್ತಿದೆ.

21ನೇ ಶತಮಾನದಲ್ಲಿ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ಸವಾಲುಗಳನ್ನು ಆತ್ಮ ವಿಶ್ವಾಸದಿಂದ ಎದುರಿಸಲು ಈ ಯೋಜನೆಯ ಮೂಲಕ ಸಿದ್ಧಗೊಳಿಸಲಾಗುತ್ತಿದೆ. ಉನ್ನತ ಶಿಕ್ಷಣ ವಲಯವನ್ನು ಪೋಷಿಸುವುದರಿಂದ ನಾಡಿನ ಸರ್ವಾಂಗೀಣ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ಅಡಗಿರುವುದನ್ನು ಮನಗಂಡಿರುವ ಸರ್ಕಾರ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದೆ.

**ಉನ್ನತ ಶಿಕ್ಷಣ ಇಲಾಖೆಯ ಜೊತೆಗೆ ಹಿಂದುಳಿದ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳು ಈ ಯೋಜನೆಗೆ ಕೈಜೋಡಿಸಿದ್ದು, ಆನ್‌ಲೈನ್ ಕಲಿಕೆಗಾಗಿ ಸರ್ಕಾರಿ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ ವಿತರಿಸಿರುವ ಕ್ರಮವು ದೇಶದಲ್ಲೇ ಮೊದಲು.**

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕಲಿಕೆಯಿಂದ ವಂಚಿತರಾಗಬಾರದು. ಕೋವಿಡ್‌ನಿಂದಾಗಿ ಆನ್‌ಲೈನ್ ತರಗತಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ಸರ್ಕಾರ ಪ್ರಾರಂಭಿಸಿರುವ ಡಿಜಿಟಲ್ ಕಲಿಕಾ ಯೋಜನೆಯಿಂದ ಪ್ರಸ್ತುತ 1.55 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಮುಂದಿನ ದಿನಗಳಲ್ಲಿ ಈ ಯೋಜನೆಯಿಂದ ಉನ್ನತ ಶಿಕ್ಷಣದ ಚಿತ್ರಣವೇ ಬದಲಾಗಲಿದೆ.

**ಬಿ.ಎಸ್.ಯಡಿಯೂರಪ್ಪ,**
ಮುಖ್ಯಮಂತ್ರಿಗಳು

ಉನ್ನತ ಶಿಕ್ಷಣದಲ್ಲಿ ಮುಂಚೂಣಿಯಲ್ಲಿರುವ ತಂತ್ರಜ್ಞಾನದ ಆವಿಷ್ಕಾರ ಎಲ್ಲಾ ವಿದ್ಯಾರ್ಥಿಗಳಿಗೆ ಉಪಯೋಗವಾಗಬೇಕು. ಈಗಿನ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಕಸಿದುಕೊಂಡಂತೆ ಆಗಬಾರದು ಎನ್ನುವ ದೃಷ್ಟಿಯಿಂದ ಆಧುನಿಕ ಉಪಕರಣಗಳನ್ನು ಅಳವಡಿಸಿಕೊಂಡು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಮುಂದಾಗಿದೆ.

**ಸ್ಮಾರ್ಟ್ ಕ್ಲಾಸ್ ರೂಂ ಲೋಕಾರ್ಪಣೆ:** ಇದೇ ಸಂದರ್ಭದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸ್ಥಾಪಿಸಲಾಗಿದ್ದ ಮಾದರಿ ಸ್ಮಾರ್ಟ್‌ಕ್ಲಾಸ್ ಕೊಠಡಿಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಉದ್ಘಾಟಿಸಿದರಲ್ಲದೆ, ಸಾಂಕೇತಿಕವಾಗಿ ಹತ್ತು ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿಗಳನ್ನು ವಿತರಿಸಿ, ತಾಂತ್ರಿಕ ನೈಪುಣ್ಯತೆ ಹಾಗೂ ಬೋಧನೆ-ಕಲಿಕೆ ವಿಧಾನವನ್ನು ವೀಕ್ಷಿಸಿದರು.

ಕೋವಿಡ್ ಸಂದಿಗ್ಧ ಪರಿಸ್ಥಿತಿಯಲ್ಲಿ ಆನ್‌ಲೈನ್ ಪಾಠ ನಡೆಯುತ್ತಿದ್ದು, ಈ ಸಂದರ್ಭದಲ್ಲಿ ತಮ್ಮ ನೆರವಿಗೆ ಬಂದ ಕಲಿಕಾ ನಿರ್ವಹಣಾ ವ್ಯವಸ್ಥೆ, ಉಚಿತ ಟ್ಯಾಬ್‌ಗಳ ವಿತರಣೆ ಹಾಗೂ ಸ್ಮಾರ್ಟ್ ತರಗತಿಗಳು ನಮ್ಮಂತ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುವುದು ಎಂದು ಟ್ಯಾಬ್ ಪಡೆದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಯನ್ನು ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಹಂಚಿಕೊಂಡರು. ನಗರ ಮತ್ತು ಗ್ರಾಮೀಣ ವಿದ್ಯಾರ್ಥಿಗಳ ಕಲಿಕೆಯಲ್ಲಿ ತಾರತಮ್ಯ ನಿವಾರಣೆ ಹಾಗೂ ಡಿಜಿಟಲ್ ಅಂತರವನ್ನು ಅಳಿಸುವುದು ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ಸರ್ಕಾರದ ಈ ಯೋಜನೆಯಿಂದ ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣದ ಚಿತ್ರಣ ಬದಲಾಗಲಿದೆ.





Downloaded From: www.kpscvaani.com



Downloaded From: www.kpscvaani.com








# ನೂತನ ರಾಜ್ಯಪಾಲರಾಗಿ ಥಾವರಚಂದ್ ಗೆಹ್ಲೋಟ್

ರಾಜ್ಯದ 19 ನೇ ರಾಜ್ಯಪಾಲರಾಗಿ ಥಾವರಚಂದ್ ಗೆಹ್ಲೋಟ್ ಅವರು ಜುಲೈ 11 ರಂದು ಪ್ರಮಾಣವಚನ ಸ್ವೀಕರಿಸಿದರು. ಅಂದು ರಾಜಭವನದ ಗಾಜಿನ ಮನೆಯಲ್ಲಿ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಅಭಯ್ ಶ್ರೀನಿವಾಸ್ ಓಕಾ ಅವರು ನೂತ ರಾಜ್ಯಪಾಲರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನೂತನ ರಾಜ್ಯಪಾಲರನ್ನು ಸ್ವಾಗತಿಸಿದರಲ್ಲದೆ, ನಿರ್ಗಮಿತ ರಾಜ್ಯಪಾಲರಾದ ವಜುಭಾಯಿ ವಾಲ ಅವರನ್ನು ಗೌರವಯುತವಾಗಿ ಬೀಳ್ಕೊಟ್ಟರು.

ಮಧ್ಯಪ್ರದೇಶದವರಾದ ನೂತ ರಾಜ್ಯಪಾಲರು ಮೂರು ಬಾರಿ ವಿಧಾನಸಭೆಗೆ ಮತ್ತು ನಾಲ್ಕು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದಾರಲ್ಲದೆ, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಉಪಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ, ಡಾ.ಸಿ.ಎನ್ ಅಶ್ವಥನಾರಾಯಣ, ವಿಧಾನಸಭೆ ಅಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭೆ ವಿರೋಧಪಕ್ಷದ ನಾಯಕರಾದ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು, ಸಂಸದರು, ಅಧಿಕಾರಿಗಳು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಪ್ರಮಾಣವಚನ ಸಂದರ್ಭದಲ್ಲಿ ಸೆರೆಹಿಡಿಯಲಾದ ಕೆಲವು ಛಾಯಾಚಿತ್ರಗಳ ಸಂಗಮ.





Downloaded From: www.kpscvaani.com



# ದೇಶದಲ್ಲೇ ಮೊಟ್ಟಮೊದಲ ಜಾನುವಾರು ಸಹಾಯವಾಣಿ ಕೇಂದ್ರ

**ದೇಶದಲ್ಲೇ ಮೊದಲ ಬಾರಿಗೆ ಜಾನುವಾರುಗಳ ಆರೋಗ್ಯದ ಕುರಿತು ಮಾರ್ಗದರ್ಶನ ನೀಡುವ ಸಲುವಾಗಿ ಉಚಿತ ಸಹಾಯವಾಣಿ ಕೇಂದ್ರವನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿದೆ.**

ಶಿವಕುಮಾರ ಕಟ್ಟೆ

ಕರ್ನಾಟಕ ಸರಕಾರದ ಪಶು ಸಂಗೋಪನಾ ಸಚಿವರಾದ ಪ್ರಭು ಚವ್ಹಾಣ ಅವರ ಕಲ್ಪನೆಯ ಕೂಸಾದ ಭಾರತದ ಮೊಟ್ಟ ಮೊದಲ ಪಶು ಸಂಗೋಪನಾ ಸಹಾಯವಾಣಿ ಕೇಂದ್ರ (ವಾರ್ ರೂಮ್)ವನ್ನು ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಅವರು ಬೆಂಗಳೂರಿನ ಪಶುಪಾಲನಾ ಭವನದಲ್ಲಿ ಇತ್ತೀಚೆಗೆ ಲೋಕಾರ್ಪಣೆಗೊಳಿಸುವ ಮೂಲಕ ಐತಿಹಾಸಿಕ ದಾಖಲೆ ಬರೆದರು. ಪಶು ಸಂಗೋಪನಾ ಖಾತೆಗೆ ಹಲವು ವಿಶೇಷತೆಗಳನ್ನು ತಂದು ಕೊಡುವ ಮೂಲಕ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಹೆಚ್ಚಿಸುವ ಕೆಲಸವನ್ನು ಸಚಿರು ಮಾಡುತ್ತಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಲ್ಲಿ ಇದೇ ಮೊದಲ ಬಾರಿಗೆ ಜಾನುವಾರು ಸಾಕಾಣಿಕೆಯಲ್ಲಿ ತೊಡಗಿದವರಿಗೆ ಮಾರ್ಗದರ್ಶನ ನೀಡಲು ಸುಸಜ್ಜಿತವಾದ ವಾರ್ ರೂಮ್ ಅನುಷ್ಠಾನಗೊಂಡಿರುವುದು ಹಲವರ ಹುಬ್ಬೇರುವಂತೆ ಮಾಡಿದೆ. ಮನುಷ್ಯ ಸಣ್ಣ ಕೆಮ್ಮು, ನೆಗಡಿಗೂ ವೈದ್ಯರನ್ನು ಅವಲಂಬಿಸುವ ಈ ಸ್ಥಿತಿಯಲ್ಲಿ ಮಾತು ಬಾರದ ಮೂಕ ಪ್ರಾಣಿಗಳು ತಮ್ಮ ನೋವನ್ನು ಯಾರಿಗೆ ಹೇಳಿಕೊಳ್ಳಬೇಕು ಎನ್ನುವ ಮಾನವೀಯ ತುಡಿತ ಹೊಂದಿರುವ ಸಚಿವ ಪ್ರಭು ಚವ್ಹಾಣ ಅವರು ಇಂತಹ ಒಂದು ವಿನೂತನ ಪ್ರಯೋಗಕ್ಕೆ ಕೈ ಹಾಕಿ ಸೈ ಎನಿಸಿಕೊಂಡಿದ್ದಾರೆ. ಆ ಮೂಲಕ ಅಷ್ಟೇನೂ ಪ್ರಭಾವಿಯಲ್ಲದ ಪಶು ಸಂಗೋಪನಾ ಖಾತೆಯಲ್ಲೂ ಕೆಲಸ ಮಾಡಲು ಅವಕಾಶಗಳಿವೆ ಎನ್ನುವುದನ್ನು ಸಾಬೀತು ಮಾಡಿದ್ದಾರೆ.

2021ರ ಫೆಬ್ರವರಿಯಲ್ಲಿ ಐತಿಹಾಸಿಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ ಕಾಯ್ದೆ (ಗೋ ಹತ್ಯೆ ನಿಷೇಧ ಕಾಯ್ದೆ) – 2021ನ್ನು ಜಾರಿಗೊಳಿಸಿ ದೇಶಾದ್ಯಂತ ಗೋರಕ್ಷಕರ ಪ್ರೀತಿಗೆ ಪಾತ್ರವಾದ ಸರ್ಕಾರ ಇದೀಗ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಜಾನುವಾರುಗಳಿಗೆ



Downloaded From: www.kpscvaani.com

ತೊಂದರೆಯಾದಾಗ ತಕ್ಷಣ ಸ್ಪಂದಿಸುವ ವಾರ್ ರೂಮ್ ಸಿದ್ಧಪಡಿಸಿದೆ. ಪಶು ಪ್ರಾಣಿಗಳಿಗೆ ತೊಂದರೆಯಾದಾಗ ತಕ್ಷಣವೇ ಅವುಗಳನ್ನು ಚಿಕಿತ್ಸೆಗೆ ತರಲು ರೈತರಿಗೆ ಸಾಧ್ಯವಾಗುವುದಿಲ್ಲವೆಂಬುದನ್ನು ಅರಿತು ಪಶು ಸಂಜೀವಿನಿ ಎನ್ನುವ ಅಂಬ್ಯುಲೆನ್ಸ್‌ಗಳನ್ನು ಕೂಡ ಜಿಲ್ಲಾವಾರು ಹಂಚಿಕೆ ಮಾಡಿದ್ದು, ರಾಜ್ಯದ ಯಾವುದೇ ಮೂಲೆಯಲ್ಲಿರುವ ರೈತ ತಮ್ಮ ಪಶುಗಳಿಗೆ ಆಗಿರುವ ತೊಂದರೆಯನ್ನು ತಿಳಿಸಿದರೆ ಅಂಬ್ಯುಲೆನ್ಸ್ ನುರಿತ ವೈದ್ಯರೊಂದಿಗೆ ಅಲ್ಲಿಗೆ ತೆರಳಿ ಚಿಕಿತ್ಸೆ ನೀಡಲಿದೆ. ಹೀಗೆ ಒಂದಿಲ್ಲೊಂದು ಹೊಸ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಪ್ರಾಣಿಗಳ ಮೂಕರೋಧನಕ್ಕೆ ಸಚಿವರು ಸ್ಪಂದಿಸುತ್ತಿದ್ದಾರೆ. ಇಲಾಖೆಯಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ ಅಲ್ಲದೆ, ಬೇರೆ ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ತೆರಳಿದ್ದ ಅಧಿಕಾರಿ ಮತ್ತು ನೌಕರರು ಸಚಿವರ ಕಾರ್ಯವೈಖರಿಯನ್ನು ಮೆಚ್ಚಿ ತಮ್ಮ ಮಾತೃ ಇಲಾಖೆಗೆ ವಾಪಸ್ಸಾಗುತ್ತಿದ್ದಾರೆ.



### ವಾರ್ ರೂಮ್ ಅವಶ್ಯಕತೆ

ಜಾನುವಾರುಗಳ ಕುರಿತಂತೆ ಸಮಗ್ರ ಮಾಹಿತಿಯನ್ನು ರೈತರಿಗೆ ಒದಗಿಸುವ ಯಾವುದೇ ವೇದಿಕೆಗಳು ಲಭ್ಯವಿರಲಿಲ್ಲ. ಹೀಗಾಗಿ ಜಾನುವಾರು ಸಾಕಣೆಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ನೀಡಲು ಈ ವಾರ್‌ರೂಮ್ ಕಾರ್ಯಾರಂಭಗೊಳಿಸಲಾಗಿದೆ. ಈಗ ರೈತರು, ಜಾನುವಾರು ಸಾಕಣೆದಾರರು, ಪ್ರಾಣಿಪ್ರಿಯರು ಇದರ ಅನುಕೂಲ ಪಡೆಯುತ್ತಿದ್ದಾರೆ. ಜಾನುವಾರುಗಳ ಆರೋಗ್ಯ ಕಾಪಾಡುವಿಕೆ, ಸಾಕುವ ವಿಧಾನ, ಆರೋಗ್ಯ ಸಮಸ್ಯೆ, ತಕ್ಷಣಕ್ಕೆ ನೀಡಬಹುದಾದ ಚಿಕಿತ್ಸೆ, ಔಷಧೋಪಚಾರ ಇತ್ಯಾದಿಗಳ ಬಗ್ಗೆ ವಿಷಯ ತಜ್ಞರು ಈ ವಾರ್‌ರೂಮ್ ಮೂಲಕ ಮಾಹಿತಿ ಪಡೆಯಬಹುದಾಗಿದೆ.

> **ಈ ವಾರ್ ರೂಮ್ ಸೌಲಭ್ಯ ಇದೀಗ ರಾಜ್ಯದ ಒಂದುವರೆ ಕೋಟಿ ದನಕರುಗಳಿಗೆ, ಒಂದುವರೆ ಕೋಟಿ ಕುರಿ–ಮೇಕೆಗಳು, ಮೂವತ್ತು ಸಾವಿರದಷ್ಟು ಕುದುರೆ–ಕತ್ತೆಗಳು, 15 ಲಕ್ಷದಷ್ಟು ಹಂದಿ, ನಾಯಿಗಳು ಸೇರಿದಂತೆ ಒಟ್ಟು 3 ಕೋಟಿಗೂ ಹೆಚ್ಚು ಜಾನುವಾರುಗಳಿಗೆ ಮತ್ತು 5 ಕೋಟಿಗೂ ಹೆಚ್ಚು ಕುಕ್ಕಟಗಳಿಗೂ ಸಹಕಾರಿಯಾಗಲಿದೆ.**



ಈ ವಾರ್‌ರೂಮ್ ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿದ್ದು, Disaster Management Control Centre (DMCC) (ವಿಪತ್ತು ನಿರ್ವಹಣಾ ಕೇಂದ್ರವು) ವಾರ್ ರೂಮ್ ಸಿದ್ಧಪಡಿಸಿದ್ದು, ಪಶು ಸಂಗೋಪನಾ ಇಲಾಖೆಯ ಒಟ್ಟು 4212 ಸಂಸ್ಥೆಗಳು, 2900 ಪಶು ವೈದ್ಯರು, 2200 ಪಶು ವೈದ್ಯಕೀಯ ಸಿಬ್ಬಂದಿಗಳನ್ನೊಳಗೊಂಡ ಬೃಹತ್ ತಂಡವನ್ನೇ ಸಚಿವರು ಈ ಕಾರ್ಯಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಇನ್ನೂ ಒಂದಿಷ್ಟು ಸಿಬ್ಬಂದಿಗಳ ಕೊರತೆ ಉಂಟಾದ ಹಿನ್ನೆಲೆಯಲ್ಲಿ ಇಲಾಖೆಯಿಂದ ಬೇರೆ ಇಲಾಖೆಗಳಿಗೆ ವಿವಿಧ ಕಾರ್ಯಗಳ ಮೇಲೆ ನಿಯೋಜನೆಗೊಂಡ ಸಿಬ್ಬಂದಿಗಳನ್ನು ಮಾತೃ ಇಲಾಖೆಗೆ ವಾಪಸ್ಸು ಕರೆಯಿಸಿಕೊಳ್ಳುತ್ತಿದ್ದಾರೆ. ಆ ಮೂಲಕ ತಮ್ಮ ಇಲಾಖೆ ಎಷ್ಟೊಂದು ಜವಾಬ್ದಾರಿಯುತವಾಗಿದೆ ಎನ್ನುವುದನ್ನು ತೋರಿಸಿಕೊಡುತ್ತಿದ್ದಾರೆ.



Downloaded From: www.kpscvaani.com

## ವಾರ್ ರೂಮ್ ವೈಶಿಷ್ಟ್ಯತೆಗಳು :

- ದಿನದ 24 ಗಂಟೆ ಸೇವೆ ಲಭ್ಯ.
- ಟೋಲ್ ಫ್ರೀ ನಂಬರ್ ವ್ಯವಸ್ಥೆ. **(Tollfree No. 8277100200, 8023417100)**
- ಪಶು ಸಂಗೋಪನಾ ಕ್ಷೇತ್ರದಲ್ಲಿನ ಆಧುನಿಕ ವಿಧಾನಗಳ ಬಗ್ಗೆ ಈ ಮೇಲ್, ಹತ್ತಿರದ ಪಶು ವೈದ್ಯ ಸಂಸ್ಥೆ, ಮುದ್ರಿತ ಪ್ರತಿ, ಆಡಿಯೋ, ವಿಡಿಯೋ, ವಾಟ್ಸಾಪ್ ಇತ್ಯಾದಿ ಸಾಮಾಜಿಕ ಜಾಲತಾಣದ ಮೂಲಕ ರೈತರಿಗೆ ಮಾಹಿತಿ ರವಾನೆ ಮಾಡುವುದು.
- ಇಲಾಖೆಯಲ್ಲಿ ಮೊಬೈಲ್ ಸಂಖ್ಯೆ ನೋಂದಾಯಿಸಿಕೊಳ್ಳುವ ರೈತರ ಮೊಬೈಲ್‌ಗೆ ಪಶುಗಳಿಗೆ ಕಾಲಕಾಲಕ್ಕೆ ನೀಡಲಾಗುವ ಲಸಿಕೆ, ಚಿಕಿತ್ಸೆಯ ಬಗ್ಗೆ ಸಂದೇಶಗಳನ್ನು ರವಾನೆ ಮಾಡುವುದು.
- ಇಲಾಖೆಯಲ್ಲಿ ಮೊಬೈಲ್ ಸಂಖ್ಯೆ ನೋಂದಾಯಿಸಿಕೊಳ್ಳುವ ರೈತರ ಮೊಬೈಲ್‌ಗೆ ಪಶುಗಳಿಗೆ ನೀಡಲಾಗುವ ಲಸಿಕೆ, ರೋಗ ಹರಡುವಿಕೆ ಸಾಧ್ಯತೆ ಬಗ್ಗೆ ಮಾಹಿತಿ ನೀಡುವುದು.
- ಜಾನುವಾರುಗಳಿಗೆ ಚಿಕಿತ್ಸೆ ಅವಶ್ಯಕತೆ ಇದ್ದ ರೈತ ವಾರ್‌ರೂಮ್ ಸಂಪರ್ಕಿಸಿದಾಗ ಹತ್ತಿರದ ಪಶುವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡಿ ಚಿಕಿತ್ಸೆಯ ವ್ಯವಸ್ಥೆ ಕಲ್ಪಿಸುವುದು.
- ಬೀಡಾಡಿ ದನ ಹಾಗೂ ಇತರೆ ಪ್ರಾಣಿಗಳ ಬಗ್ಗೆ ಸಾರ್ವಜನಿಕರು ನೀಡುವ ದೂರನ್ನು ಆಧರಿಸಿ ಹತ್ತಿರದ ಪಶುವೈದ್ಯರು ಚಿಕಿತ್ಸೆ ನೀಡುವಂತೆ ನೋಡಿಕೊಳ್ಳುವುದು.
- ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ವಿವರ, ಅವುಗಳನ್ನು ಪಡೆಯಲು ಬಳಸಬೇಕಾದ ಪ್ರಕ್ರಿಯೆ, ಡೈರಿ, ಹಂದಿ ಸಾಕಾಣಿಕೆ, ಮೇಕೆ, ಕೋಳಿ ಇತ್ಯಾದಿಗಳ ಸಾಕಾಣಿಕೆ ವಿವರ ನೀಡುವುದು.
- ಪ್ರಕೃತಿ ವಿಕೋಪದ ಸಂದರ್ಭದಲ್ಲಿ ನೋಂದಾಯಿತ ರೈತರ ಮೊಬೈಲ್‌ಗೆ ಎಸ್.ಎಮ್.ಎಸ್ ಎಚ್ಚರಿಕೆ ನೀಡುವುದು.
- ವಿವಿಧ ಜಾನುವಾರುಗಳ ಮಾರುಕಟ್ಟೆ ಲಭ್ಯತೆ, ದರಗಳ ಕುರಿತು ಮಾಹಿತಿ ನೀಡುವುದು.
- ಸ್ಥಳಿಯ ಹಾಗೂ ವಿದೇಶಿ ಪಶು ತಳಿಗಳ ಬಗ್ಗೆ ಮಾಹಿತಿ ನೀಡುವುದು.
- ಬ್ಯಾಂಕುಗಳಿಂದ ಸಾಲ ಸೌಲಭ್ಯದ ಮಾಹಿತಿ ನೀಡುವುದು.
- ಮೇವಿನ ಉತ್ಪಾದನೆ, ಮೇವಿನ ಬೀಜಗಳ ಕಿಟ್ ಕುರಿತು ಮಾಹಿತಿ ನೀಡುವುದು.
- ತಂತ್ರಜ್ಞಾನ ಬಳಸಿ ಗೋಶಾಲೆಗಳ ನಿರ್ವಹಣೆ ಮತ್ತು ಮಾಹಿತಿ ನೀಡುವುದು.
- ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣಾ ಕಾಯ್ದೆ ಅನುಷ್ಠಾನದ ಕುರಿತಾಗಿ ಸಾರ್ವಜನಿಕರಿಂದ ಬರುವ ದೂರುಗಳನ್ನು ಆಯಾ ಕ್ಷೇತ್ರದ ವ್ಯಾಪ್ತಿಗೆ ಬರುವ ಪೊಲೀಸ್ ಠಾಣೆಗೆ ಮಾಹಿತಿ ನೀಡುವುದು.
- ಪಶುಸಂಜೀವಿನಿ, ಅಂಬ್ಯುಲೆನ್ಸ್ ಕ್ಲಿನಿಕ್‌ಗಳನ್ನು ತಜ್ಞ ವೈದ್ಯರೊಂದಿಗೆ ಚಿಕಿತ್ಸೆಗೆ ವ್ಯವಸ್ಥೆ ಮಾಡುವುದು.
- ತಜ್ಞರೊಂದಿಗೆ ಜಾನುವಾರುಗಳ ಆರೋಗ್ಯ, ಆಹಾರ, ಔಷಧಿಗಳ ಕುರಿತು ಸಂವಹನ ನಡೆಸುವ ವ್ಯವಸ್ಥೆ.
- ಚಿಕಿತ್ಸಾಲಯಗಳಲ್ಲಿ ವೈದ್ಯರ ಲಭ್ಯತೆಯನ್ನು ತಂತ್ರಜ್ಞಾನ ಆಧಾರಿತವಾಗಿ ತಿಳಿಸುವ ವ್ಯವಸ್ಥೆ.
- ಲಭ್ಯ ತಂತ್ರಜ್ಞಾನವನ್ನು ಬಳಸಿ ವಿವಿಧ ಮಾಧ್ಯಮಗಳ ಮೂಲಕ ರೈತರಿಗೆ ಮಾಹಿತಿ ತಲುಪಿಸುವುದು ಹಾಗೂ ರೈತರಿಗೆ ಅವರ ಕುಂದುಕೊರತೆಗಳ ಬಗ್ಗೆ ದೂರವಾಣಿ ಮೂಲಕ ನೀಡುವ ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ರವಾನಿಸಿ ಸೂಕ್ತ ಪರಿಹಾರವನ್ನು ಒದಗಿಸುವುದು.




ಇಲಾಖೆಯ ಸಿಬ್ಬಂದಿಗಳು ವಾರ್‌ರೂಮ್ ಕರೆಗಳನ್ನಾಧರಿಸಿ ರಾಜ್ಯದ ಮೂಲೆ ಮೂಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಾರ್‌ರೂಮ್ ಆರಂಭಕ್ಕೆ ಮುನ್ನವೇ ಸಚಿವರ ಮತ್ತೊಂದು ಕಾರ್ಯಸೂಚಿಯಾದ ಪಶು ಸಂಜೀವಿನಿ ಆಂಬುಲೆನ್ಸ್ ಕೂಡ ಕಾರ್ಯಾರಂಭ ಮಾಡಿದ್ದು, ಸಕಲ ವೈದ್ಯಕೀಯ ಪರಿಕರಗಳೊಂದಿಗೆ ಕರೆ ಬಂದ ತಕ್ಷಣವೇ ಕಾರ್ಯೋನ್ಮುಖವಾಗುತ್ತದೆ. ಕರೆ ಬಂದ ತಕ್ಷಣ ಅಲ್ಲಿಗೆ ದೌಡಾಯಿಸಿ, ಪಶುಗಳಿಗೆ ಚಿಕಿತ್ಸೆ ನೀಡಿ ಮತ್ತೆ ವಾರ್ ರೂಮ್‌ಗೆ ಮಾಹಿತಿ ರವಾನಿಸುತ್ತದೆ.

ಈ ವಾರ್ ರೂಮ್ ಸೌಲಭ್ಯ ಇದೀಗ ರಾಜ್ಯದ ಒಂದುವರೆ ಕೋಟಿ ದನಕರುಗಳಿಗೆ, ಒಂದುವರೆ ಕೋಟಿ ಕುರಿ–ಮೇಕೆಗಳು, ಮೂವತ್ತು ಸಾವಿರದಷ್ಟು ಕುದುರೆ–ಕತ್ತೆಗಳು, 15 ಲಕ್ಷದಷ್ಟು ಹಂದಿ, ನಾಯಿಗಳು ಸೇರಿದಂತೆ ಒಟ್ಟು 3 ಕೋಟಿಗೂ ಹೆಚ್ಚು ಜಾನುವಾರುಗಳಿಗೆ ಮತ್ತು 5 ಕೋಟಿಗೂ ಹೆಚ್ಚು ಕುಕ್ಕುಟಗಳಿಗೂ ಸಹಕಾರಿಯಾಗಲಿದೆ.

ಸಹಾಯವಾಣಿಗೆ ಕರೆ ಮಾಡಿದರೆ ಮೊದಲು ಸಚಿವ ಪ್ರಭು ಚವ್ಹಾಣ ಅವರ ಧ್ವನಿ ಕೇಳಿಸುತ್ತದೆ, ನಂತರ ಅವರ ಪ್ರತಿನಿಧಿಗಳು ಮಾತನಾಡುತ್ತಾರೆ. ಕರ್ನಾಟಕದ ಜನತೆ ಈ ಸಹಾಯವಾಣಿಯ ಸದುಪಯೋಗ ಪಡೆಯುತ್ತಿದ್ದು, ತಮಗೆ ಬೇಕಾದ ಮಾಹಿತಿಯನ್ನು ತಕ್ಷಣವೇ ಸಹಾಯವಾಣಿ ಕೇಂದ್ರದಿಂದ ಪಡೆಯುತ್ತಿದ್ದಾರೆ. 18ನೇ ಜುಲೈ 2021ರವರೆಗೆ 4,576 ಕರೆಗಳು ಸೇರಿದಂತೆ ಒಟ್ಟು 7,222 ಕರೆಗಳನ್ನು ವಾರ್‌ರೂಮ್ ಸ್ವೀಕರಿಸಿ ರೈತರಿಗೆ ಅಗತ್ಯ ಮಾಹಿತಿ ಒದಗಿಸಿರುವುದು ಸಹಾಯವಾಣಿಯ ಕಾರ್ಯಕ್ಷಮತೆಗೆ ಕಾರಣವಾಗಿದೆ.



Downloaded From: www.kpscvaani.com

## ಡಿಜಿಟಲೀಕರಣದತ್ತ

# ಬೆಂಗಳೂರು ನಗರ ಸಂಚಾರ ಪೊಲೀಸ್

ಡಾ. ಅನಿಲ್ ಕುಮಾರ್ ಪಿ.ಜಿ.

**ಟೆಕ್ನಾಲಜಿ ಬೆಳೆಯುತ್ತಿರುವಂತೆ ಆಡಳಿತದಲ್ಲಿ ಕೂಡ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅದೇ ನಿಟ್ಟಿನಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸ್‌ನವರು ವಾಹನ ಸವಾರರಿಗೆ ಅನುಕೂಲವಾಗುವಂತಹ ಕ್ರಮಗಳನ್ನು ಜಾರಿಗೆ ತರುವ ಮೂಲಕ ಡಿಜಿಟಲೀಕರಣದತ್ತ ಹೆಜ್ಜೆ ಇರಿಸಿದ್ದಾರೆ.**




ಡಿಜಿಟಲ್ ಕ್ರಾಂತಿ ಎಲ್ಲೆಡೆ ಕಾಣಿಸಿಕೊಂಡಿದ್ದು, ಈಗ ಬೆಂಗಳೂರು ನಗರ ಸಂಚಾರ ಪೊಲೀಸ್ ವಿಭಾಗವು ಡಿಜಿಟಲೀಕರಣದ ಮುಂಚೂಣಿಯಲ್ಲಿದೆ. ವಾಹನ ಸವಾರರಿಗೆ ಎಲ್ಲಾ ಸಮಯದಲ್ಲಿಯೂ ವಾಹನ ಚಾಲನೆಯ ವೇಳೆ ಬೇಕಾದ ಅಗತ್ಯ ದಾಖಲಾತಿಗಳನ್ನು ಭೌತಿಕವಾಗಿ ತೆಗೆದುಕೊಂಡು ಹೋಗಲು ಕಿರಿಕಿರಿಯಾಗುತ್ತಿರುವ ಹಿನ್ನೆಲೆಯಲ್ಲಿ ಅವುಗಳ ಡಿಜಿಟಲ್ ರೂಪವನ್ನು ವಾಹನ ಚಾಲಕರು ತಮ್ಮೊಡನೆ ಕೊಂಡೊಯ್ಯಲು ಡಿಜಿಲಾಕರ್ ಮತ್ತು ಎಂಪರಿವಾಹನ್ ಆ್ಯಪ್ ಮೂಲಕ ಅವಕಾಶ ಮಾಡಿಕೊಡಲಾಗಿದೆ.

ಕೇಂದ್ರ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವಾಲಯ ಹೊರಡಿಸಿರುವ ಅಧಿಸೂಚನೆಯಂತೆ ನೊಂದಣಿ ಪ್ರಮಾಣ ಪತ್ರ (ಆರ್.ಸಿ), ಚಾಲನಾ ಪರವಾನಗಿ (ಡಿಎಲ್), ವಿಮೆ (ಇನ್ಶೂರೆನ್ಸ್), ಫಿಟ್ನೆಸ್ ಪ್ರಮಾಣಪತ್ರ (ಎಫ್.ಸಿ), ಪರ್ಮಿಟ್, ವಾಯುಮಾಲಿನ್ಯ ಪ್ರಮಾಣಪತ್ರ ಸೇರಿ ವಾಹನಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಡಿಜಿಟಲ್ (ಎಲೆಕ್ಟ್ರಾನಿಕ್) ಮಾದರಿಯಲ್ಲಿ ಸಲ್ಲಿಸಬಹುದು.

ಡಿಜಿಟಲ್ ದಾಖಲೆ ಸಮಾನ ಸ್ಮಾರ್ಟ್‌ಕಾರ್ಡ್ ಅಥವಾ ಕಾಗದ ರೂಪದ ದಾಖಲೆಗಳಿಗೆ ಡಿಜಿಟಲ್ ದಾಖಲೆ ಸಮಾನವಾಗಿದ್ದು, ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಅನ್ವಯವೂ ಡಿಜಿಟಲ್ ದಾಖಲೆಗಳು ಅಧಿಕೃತವಾಗಿವೆ.

ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ಡಿಜಿಲಾಕರ್ ಮತ್ತು ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವಾಲಯದ ಎಂಪರಿವಾಹನ್ ಎಂಬ ಎರಡು ಆ್ಯಪ್‌ಗಳಲ್ಲಿ ಇರುವ ಎಲ್ಲ ಡಿಜಿಟಲ್ ದಾಖಲೆಗಳು ಅಧಿಕೃತ ಎಂದು ತಿಳಿಸಿದೆ. ವಾಹನ ಚಾಲಕರು ಫೋನ್‌ನಲ್ಲಿ ಯಾವುದಾದರೂ ಒಂದು ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಡಿಜಿಟಲ್ ದಾಖಲೆ ಪಡೆಯಬಹುದಾಗಿದೆ. ಈ ಎರಡು ಆ್ಯಪ್‌ಗಳ ಮೂಲಕ ಡಿಜಿಟಲ್ ದಾಖಲೆಗಳನ್ನು ಬಳಕೆ ಮಾಡಬಹುದಾಗಿದೆ.



Downloaded From: www.kpscvaani.com

ಇದನ್ನು ನಿಯಮ ಜಾರಿ ಅಧಿಕಾರಿಗಳು ಸ್ಕ್ಯಾನ್ ಮಾಡುವ ಮೂಲಕ ಅಧಿಕೃತ ದಾಖಲೆಗಳೇ ಎಂಬುದನ್ನು ಪರಿಶೀಲಿಸುತ್ತಾರೆ.

ವಾಹನದ ಮತ್ತು ಚಾಲನೆಯ ದಾಖಲೆಗಳು ಮತ್ತು ಪ್ರಮಾಣಪತ್ರಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವ ಆ್ಯಪ್‌ಗಳು ಇವಾಗಿದ್ದು ಸ್ಮಾರ್ಟ್‌ಫೋನ್‌ಗಳಲ್ಲಿ ಇದನ್ನು ಬಳಕೆ ಮಾಡಿಕೊಂಡರೆ ಅಸಲು ದಾಖಲೆಗಳನ್ನು ತಮ್ಮೊಂದಿಗೆ ಇಟ್ಟುಕೊಳ್ಳುವ ಅಗತ್ಯತೆ ಇರುವುದಿಲ್ಲ. ಮೊಬೈಲ್‌ನಲ್ಲಿಯೇ ಎಲ್ಲಾ ದಾಖಲೆಗಳನ್ನು ಸ್ಟೋರ್ ಮಾಡಿಕೊಳ್ಳಬಹುದಾಗಿದೆ. ಪೊಲೀಸರು ಅಥವಾ ಇನ್ಯಾವುದೇ ಪ್ರಾಧಿಕಾರ ಕೇಳಿದ ಸಂದರ್ಭದಲ್ಲಿ ಪ್ರದರ್ಶಿಸಬಹುದಾಗಿದೆ.

ವಾಹನ ಚಾಲಕ/ಸವಾರರು ತೋರಿಸುವ ಡಿಜಿಟಲ್ ದಾಖಲೆಗಳನ್ನು ಅಧಿಕಾರಿಗಳು ಸಾಮಾನ್ಯ ಆಂಡ್ರಾಯ್ಡ್ ಮೊಬೈಲ್ ಮೂಲಕ ಇ-ಚಲನ್ ಆ್ಯಪ್ ಹಾಕಿಕೊಂಡು ದಾಖಲೆಗಳನ್ನು ಚೆಕ್ ಮಾಡುತ್ತಾರೆ. ಈ ಆ್ಯಪ್‌ಗಳ ಮೂಲಕ ಡಿಜಿಲಾಕರ್ ಮತ್ತು ಎಂಪರಿವಾಹನ್ ಆ್ಯಪ್‌ನಲ್ಲಿರುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ದಾಖಲೆಗಳನ್ನು ಪರಿಶೀಲಿಸಬಹುದು. ನಕಲಿ ದಾಖಲೆಗಳನ್ನು ಈ ಮೂಲಕ ಸಂಪೂರ್ಣವಾಗಿ ತಡೆಗಟ್ಟಬಹುದು.

ವಾಹನ ಸವಾರರು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸ್ಮಾರ್ಟ್‌ಫೋನ್ ಇರುವವರು ಇದನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ. ಪ್ಲೇಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡ ನಂತರ ಸ್ಮಾರ್ಟ್‌ಫೋನಿನಲ್ಲಿ ಇನ್‌ಸ್ಟಾಲ್ ಮಾಡಬೇಕಾಗಿದೆ. ನಂತರ ಆ್ಯಪ್ ತೆರೆದು ಮೊಬೈಲ್ ಸಂಖ್ಯೆ ಬಳಸಿ ಲಾಗ್ ಇನ್ ಆಗಬೇಕು. ನಂತರ ಆಧಾರ್ ಸಂಖ್ಯೆಯನ್ನು ನಮೂದಿಸಬೇಕು. ತದನಂತರ ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯನ್ನು ಆಯ್ಕೆ ಮಾಡಿಕೊಂಡು ಅಲ್ಲಿ ನಿರ್ದಿಷ್ಟ ಹೆಸರಿನಲ್ಲಿ ದಾಖಲೆಗಳನ್ನು ಸೇವ್ ಮಾಡಬಹುದಾಗಿದೆ.

ಮಾಲೀಕರಲ್ಲದವರು ವಾಹನ ಚಾಲನೆ ಮಾಡುತ್ತಿದ್ದರೂ ಆ ವಾಹನದ ಮಾಲೀಕ ಈ ಆ್ಯಪ್‌ಗಳನ್ನು ಬಳಕೆ ಮಾಡುತ್ತಿದ್ದರೆ, ವಾಹನದ ಚಾಲಕನು ಈ ಆ್ಯಪ್‌ಗಳ ಮೂಲಕ ಈ ದಾಖಲಾತಿಗಳನ್ನು ತನ್ನ ಮೊಬೈಲ್‌ಗೆ ವರ್ಗಾಯಿಸಿಕೊಂಡು ದಾಖಲೆಗಳನ್ನು ಪರಿಶೀಲನೆ ವೇಳೆ ನೀಡಬಹುದಾಗಿರುತ್ತದೆ.

ಈ ಆ್ಯಪ್‌ಗಳ ಬಳಕೆಯಿಂದ ಡಿಜಿಟಲ್ ಮಾದರಿಯಲ್ಲಿ ದಾಖಲೆಗಳು ಸುಲಭವಾಗಿ ಲಭ್ಯವಾಗಲಿದ್ದು, ದಾಖಲೆ ಕಳೆದುಹೋಗುವ ಭಯವಿಲ್ಲ. ಇದಲ್ಲದೆ ಇ-ಆಧಾರ್ ಡಿಜಿಲಾಕರ್‌ನಲ್ಲೇ ಸಿಗಲಿದೆ. ಹೀಗಾಗಿ ಈ ಆ್ಯಪ್ ಬಳಕೆಯೂ ಸಾಕಷ್ಟು ಸಹಾಯವನ್ನು ಮಾಡುತ್ತದೆ.

ಸ್ಮಾರ್ಟ್ ಫೋನ್ ಇರುವವರೆಲ್ಲರೂ ಈ ಆ್ಯಪ್‌ಗಳನ್ನು ಬಳಸಬಹುದಾಗಿರುತ್ತದೆ. ಕೊರೊನಾ ಸಮಯದಲ್ಲಿ ಈ ಡಿಜಿಟಲ್ ದಾಖಲೀಕರಣ ಪರಿಶೀಲನೆ ಚಾಲಕರು ಮತ್ತು ಸಂಚಾರ ಪೊಲೀಸರಿಗೆ ಅತ್ಯಂತ ಸೂಕ್ತವಾಗಿದ್ದು, ಸಂಚಾರ ಪೊಲೀಸರು ಡಿಜಿಟಲ್ ದಾಖಲೀಕರಣವನ್ನು ಪ್ರೋತ್ಸಾಹಿಸಲು ನಿರ್ಧರಿಸಿದ್ದು, ಇದರಿಂದ

**‘ ಈ ಆ್ಯಪ್‌ಗಳ ಬಳಕೆಯಿಂದ ಡಿಜಿಟಲ್ ಮಾದರಿಯಲ್ಲಿ ದಾಖಲೆಗಳು ಸುಲಭವಾಗಿ ಲಭ್ಯವಾಗಲಿದ್ದು, ದಾಖಲೆ ಕಳೆದುಹೋಗುವ ಭಯವಿಲ್ಲ. ಇದಲ್ಲದೆ ಇ-ಆಧಾರ್ ಡಿಜಿಲಾಕರ್‌ನಲ್ಲೇ ಸಿಗಲಿದೆ. ಹೀಗಾಗಿ ಈ ಆ್ಯಪ್ ಬಳಕೆಯೂ ಸಾಕಷ್ಟು ಸಹಾಯವನ್ನು ಮಾಡುತ್ತದೆ. ’**




## ಡೌನ್‌ಲೋಡ್ ಮಾಡಿಕೊಳ್ಳುವ ವಿಧಾನ

- ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಈ ಆ್ಯಪ್ ಲಭ್ಯವಿದ್ದು, ಡಿಜಿ ಲಾಕರ್ ಎಂದು ಟೈಪ್ ಮಾಡಿದ ನಂತರದಲ್ಲಿ ನೀಲಿ ಬಣ್ಣದಲ್ಲಿ ಕಾಣಸಿಗುವ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿ.
- ಆ್ಯಪ್ ಅನ್ನು ಡೌನ್‌ಲೋಡ್ ಮಾಡಿದ ನಂತರದಲ್ಲಿ ಅದನ್ನು ಸ್ಮಾರ್ಟ್‌ಫೋನಿನಲ್ಲಿ ಇನ್‌ಸ್ಟಾಲ್ ಮಾಡಿರಿ. ನಂತರ ಆ್ಯಪ್‌ನಲ್ಲಿ ಕಾಣಿಸಿಕೊಳ್ಳುವ ಸೈನ್ ಅಪ್ ಆಯ್ಕೆ ಒತ್ತಿ, ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಹಾಕಿದ ನಂತರದಲ್ಲಿ ಆಧಾರ್ ಸಂಖ್ಯೆ ನಮೂದಿಸಿ.
- ನಂತರ ಆ್ಯಪ್‌ನಲ್ಲಿರುವ ಸರ್ಚ್ ಬಾರಿನಲ್ಲಿ ರಾಜ್ಯ ಸರ್ಕಾರದ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಆಯ್ಕೆ ಮಾಡಿಕೊಳ್ಳಿ.
- ನಂತರ ನಿಮ್ಮ ಡಿಜಿಟಲ್ ಡಿಎಲ್ ಪಡೆಯುವ ಸಲುವಾಗಿ ಡಿ.ಎಲ್ ಸಂಖ್ಯೆ ನಮೂದಿಸಿ, ಡಿಜಿಟಲ್ ಆರ್‌ಸಿ ಪಡೆಯಲು ನಿಮ್ಮ ವಾಹನದ ನೋಂದಣಿ ಸಂಖ್ಯೆ, ಆರ್‌ಸಿ ಸಂಖ್ಯೆ ನಮೂದಿಸಿ. ನಂತರ ಡಿಜಿಟಲ್ ದಾಖಲೆ ದೊರೆಯಲಿದೆ.
- ವಾಯು ಮಾಲಿನ್ಯ ಪ್ರಮಾಣಪತ್ರ ಪಡೆಯಲು ಕೇವಲ ಗಾಡಿ ಸಂಖ್ಯೆ ನಮೂದಿಸಿ ಸಾಕು, ಅದು ಸಹ ನಿಮ್ಮ ಡಿಜಿ ಲಾಕರ್ ಆ್ಯಪ್‌ನಲ್ಲಿ ಸೇವ್ ಆಗಲಿದೆ.



Downloaded From: www.kpscvaani.com




ನಕಲಿ ದಾಖಲೆಗಳನ್ನು ಸಂಪೂರ್ಣವಾಗಿ ತಡೆಗಟ್ಟಬಹುದು ಮತ್ತು ದಾಖಲೆಗಳು ಕಳೆದುಹೋಗುವ ಸಂಭವವಿರುವುದಿಲ್ಲ. ಎಲ್ಲಾ ವಾಹನ ಮಾಲೀಕರು ಮತ್ತು ಚಾಲಕರು ಎಂಪರಿವಾಹನ್ ಮತ್ತು ಡಿಜಿಲಾಕರ್ ಆ್ಯಪ್‌ಗಳನ್ನು ಉಪಯೋಗಿಸಲು ಕೋರಿದೆ.

**ಪೇಟಿಎಂ ಮೂಲಕ ಸಂಚಾರ ನಿಯಮ ಉಲ್ಲಂಘನೆಗಳ ದಂಡ ಪಾವತಿಗೆ ಅವಕಾಶ**

ಬೆಂಗಳೂರು ಸಂಚಾರ ಪೊಲೀಸರು ಅನೇಕ ಸಂಪರ್ಕರಹಿತ ವಿಧಾನಗಳಿಂದ ಸಂಚಾರ ನಿಯಮ ಉಲ್ಲಂಘನೆಗಳನ್ನು ದಾಖಲಿಸಿಕೊಳ್ಳುತ್ತಿದ್ದು, ಈ ಬಗ್ಗೆ ಸಂಬಂಧಿಸಿದ ಉಲ್ಲಂಘನೆದಾರರಿಗೆ ಪತ್ರದ ಮೂಲಕ ಚಲನ್‌ಗಳನ್ನು ಕಳುಹಿಸಲಾಗುತ್ತಿದೆ. ಆದರೆ ಡಿಜಿಟಲ್ ಮಾಧ್ಯಮದ ಮೂಲಕ ಚಲನ್‌ಗಳನ್ನು ಕಳುಹಿಸುತ್ತಿರುವುದಿಲ್ಲ. ದಂಡವನ್ನು ಡಿಜಿಟಲ್ ರೂಪದಲ್ಲಿ ಪಾವತಿ ಮಾಡಲು ಬೆಂಗಳೂರು ಒನ್, ವೆಬ್‌ಸೈಟ್, ಪಿಡಿಎ ಮೆಷಿನ್‌ಗಳಲ್ಲಿ ಸೌಲಭ್ಯವಿದೆ. ಆದರೆ ಬಹುವಾಗಿ ಬಳಕೆಯಾಗುತ್ತಿರುವ ಪೇಟಿಎಂನಲ್ಲಿ ಪಾವತಿ ಮಾಡಲು ಅವಕಾಶವಿರಲಿಲ್ಲ. ಈ ಹಿನ್ನೆಲೆಯಲ್ಲಿ ಪೇಟಿಎಂ ರವರು ಬಿಟಿಪಿಯ ಜೊತೆ ಡಿಜಿಟಲ್ ಪಾವತಿ ಮತ್ತು ತಮ್ಮ ಗ್ರಾಹಕರಲ್ಲಿ ಉಲ್ಲಂಘನೆದಾರರಿಗೆ ಉಲ್ಲಂಘನೆ ನೋಟಿಫಿಕೇಷನ್‌ಗಳನ್ನು ಕಳುಹಿಸಿ ಡಿಜಿಟಲ್ ಪಾವತಿಗೆ ಸೌಲಭ್ಯ ಕಲ್ಪಿಸಲು ಮುಂದೆ ಬಂದಿರುತ್ತಾರೆ. ಈಗಾಗಲೇ ಇತರೆ ರಾಜ್ಯಗಳ ಪೊಲೀಸರು ಈ ಸೌಲಭ್ಯವನ್ನು ಉಪಯೋಗಿಸುತ್ತಿದ್ದು ಜನಪ್ರಿಯವಾಗಿದೆ. ರಸ್ತೆ ಸುರಕ್ಷತೆಯ ಬಗ್ಗೆ ಸಾಮಾಜಿಕ ಜವಾಬ್ದಾರಿ ಹೊಂದಿರುವ ಸಾಂಸ್ಥಿಕ ಸಂಸ್ಥೆಗಳಲ್ಲಿ ಒಂದಾದ ಪೇಟಿಯಂ ಕಂಪನಿಯು ಡಿಜಿಟಲ್ ನೋಟಿಫಿಕೇಷನ್‌ಗಳನ್ನು ಉಲ್ಲಂಘನೆದಾರರಿಗೆ ಕಳುಹಿಸಲು ಮತ್ತು ಡಿಜಿಟಲ್ ಪಾವತಿಗೆ ಗ್ರಾಹಕರಿಂದಾಗಲಿ ಈ ಸೌಲಭ್ಯಕ್ಕೆ ಯಾವುದೇ ಶುಲ್ಕವನ್ನು ವಸೂಲಿ ಮಾಡದ ನಿಬಂಧನೆಗಳೊಪಟ್ಟು ಪೇಟಿಎಂ ಜೊತೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಪೇಟಿಎಂ ಸಂಸ್ಥೆಯು ರಸ್ತೆ ಸುರಕ್ಷತೆಗೆ ತಮ್ಮ ಬದ್ಧತೆಗೆ ಅನುಗುಣವಾಗಿ ಶುಲ್ಕರಹಿತ ಸೇವೆಯನ್ನು ಒದಗಿಸುತ್ತಿರುವುದು ಶ್ಲಾಘನೀಯವಾಗಿದೆ.

ಉಲ್ಲಂಘನೆಯ ದಂಡವನ್ನು ಪೇಟಿಎಂ ಮೂಲಕ ಪಾವತಿಸುವಲ್ಲಿನ ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ ದಂಡವನ್ನು ಪೇಟಿಎಂ ಮೂಲಕ ಪಾವತಿಸುವ ಪ್ರಕ್ರಿಯೆಗೆ ಇದೇ ಜುಲೈ 5 ರಂದು ನಗರ ಪೊಲೀಸ್ ಆಯುಕ್ತರಾದ ಕಮಲ್‌ಪಂತ್ ಅವರು ಇನ್‌ಫೆಂಟ್ರಿ ರಸ್ತೆಯಲ್ಲಿರುವ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ವಿದ್ಯುಕ್ತವಾಗಿ ಚಾಲನೆ ನೀಡಿರುತ್ತಾರೆ. ಸಮಾರಂಭದಲ್ಲಿ ಬೆಂಗಳೂರು ನಗರ ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತರಾದ ಡಾ. ಬಿ.ಆರ್. ರವಿಕಾಂತೇಗೌಡ ಅವರು ಹಾಗೂ ಸಂಚಾರ ವಿಭಾಗದ ಎಲ್ಲಾ ಡಿಸಿಪಿ ಮತ್ತು ಎಸಿಪಿ ಅವರುಗಳು ಮತ್ತು ಪೇಟಿಎಂನ ಹಿರಿಯ ಸಲಹೆಗಾರರಾದ ಶ್ರೀ ವೇಣುಗೋಪಾಲ್ ರವರು ಭಾಗವಹಿಸಿದ್ದರು.

ನಗರ ಸಂಚಾರ ಪೊಲೀಸ್ ಅವರು ಕೈಗೊಂಡಿರುವ ಈ ಪ್ರಕ್ರಿಯೆಯಿಂದ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ. ವಾಹನ ಸವಾರರು ಈ ಸೌಲಭ್ಯವನ್ನು ಬಳಸಿಕೊಳ್ಳುವ ಮೂಲಕ ಸುರಕ್ಷಿತವಾಗಿ ವಾಹನ ಚಾಲನೆ ಮಾಡಿ.

**ಪಾವತಿ ಹೇಗೆ?**

**ನಿಮ್ಮ ಮೊಬೈಲ್‌ನಲ್ಲಿ**

1. ಪೇ ಟಿಎಂ ಆಪ್ ತೆರೆಯಿರಿ
2. ರಿಚಾರ್ಜ್ ಅಥವಾ ಪೇ ಫಾರ್ ಚಲನ್ ಆಯ್ಕೆ ಮಾಡಿ ಕ್ಲಿಕ್ ಮಾಡಿ
3. ನಿಮ್ಮ ನಗರ ಬೆಂಗಳೂರು ಸಂಚಾರ ಪೊಲೀಸ್(BTP) ಆಯ್ಕೆ ಮಾಡಿ ವಾಹನ ನೋಂದಣಿ ಸಂಖ್ಯೆಯನ್ನು ನಮೂದಿಸಿ ಮುಂದುವರೆಯಿರಿ
4. ನಿಮ್ಮ ಚಲನ್ ವಿವರಗಳನ್ನು ಪರಿಶೀಲಿಸಿ ದಂಡ ಪಾವತಿಸುವ ಚಲನ್‌ಗಳನ್ನು ಸೆಲೆಕ್ಟ್ ಮಾಡಿ ಮುಂದುವರೆಯಿರಿ
5. ನಿಮ್ಮ ಡೆಬಿಟ್ ಕಾರ್ಡ್, ಕ್ರೆಡಿಟ್‌ಕಾರ್ಡ್, ನೆಟ್ ಬ್ಯಾಂಕಿಂಗ್ ಮತ್ತು ಯು.ಪಿ.ಐ. ಮುಖಾಂತರ ಹಣವನ್ನು ಪಾವತಿಸಿ
6. ದಂಡ ಪಾವತಿಸಿದ ರಶೀದಿ ಪಡೆಯಿರಿ
7. ನಿಮ್ಮ ಉಲ್ಲಂಘನೆಗಳು ಸ್ವಯಂ ಚಾಲಿತ ವ್ಯವಸ್ಥೆಯ ಮೂಲಕ ಮುಕ್ತಾಯಗೊಳ್ಳುತ್ತವೆ.



Downloaded From: www.kpscvaani.com

## ಬೆಂಗಳೂರಿನಲ್ಲಿ ಮತ್ತೊಂದು

# ಮಿನಿ ಲಾಲ್‌ಬಾಗ್





**ಗಾರ್ಡನ್ ಸಿಟಿ ಎಂಬ ಖ್ಯಾತಿಯನ್ನು ಗಳಿಸಿದ್ದ ಬೆಂಗಳೂರು ನಗರ, ಏರುತ್ತಿರುವ ಜನಸಂಖ್ಯೆಯಿಂದಾಗಿ ಈ ಖ್ಯಾತಿಯನ್ನು ಕಳೆದುಕೊಳ್ಳಲಿದೆ ಎನಿಸಿತ್ತು. ಆದರೆ ಗಾರ್ಡನ್ ಸಿಟಿ ಖ್ಯಾತಿಯನ್ನು ಉಳಿಸುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಮತ್ತೊಂದು ಮಿನಿ ಲಾಲ್‌ಬಾಗ್ ಸಿದ್ಧವಾಗಿದೆ.**

ಕೆ. ಎಸ್ . ರಾಜಮನ್ನಾರ್

ಬೆಂಗಳೂರಿನ ಕೆಂಪು ತೋಟ, ಲಾಲ್‌ಬಾಗ್ ಹೆಸರು ಯಾರಿಗೆ ತಾನೇ ಗೊತ್ತಿಲ್ಲ. ಲಾಲ್‌ಬಾಗ್ ಎಂಬ ನಾಲ್ಕು ಅಕ್ಷರದ ಪದ ಕೇಳಿದ ತಕ್ಷಣ ಹಣ್ಣು, ಹಸಿರು, ಗಿಡ– ಮರ ವಿವಿಧ ಜಾತಿಯ ಬಣ್ಣ–ಬಣ್ಣದ ಹೂಗಳು ಕಣ್ಣ ಮುಂದೆ ಸಾಲು ಸಾಲಾಗಿ ಬಂದು ನಿಲ್ಲುತ್ತವೆ. ರಾಜ್ಯಕ್ಕೆ ಸಸ್ಯ ಪ್ರಬೇಧ ಪರಿಚಯಿಸಿದ ಕೀರ್ತಿ ಕೆಂಪು ತೋಟಕ್ಕಿದೆ. ಇಲ್ಲಿನ ಗಾಜಿನ ಮನೆಯಲ್ಲಿ ವರ್ಷಕ್ಕೆ ಎರಡು ಬಾರಿ ನಡೆಯುವ ಫಲಪುಷ್ಪ ಪ್ರದರ್ಶನ ನಾಡಿನಾಚೆಗೂ ಹೆಸರುವಾಸಿ. ಬೆಂಗಳೂರಿನ ಕೀರ್ತಿ ಪತಾಕೆಯನ್ನು ಹೆಚ್ಚಿಸಿದೆ ಎಂದರೆ ಅತಿಶಯೋಕ್ತಿಯೇನಲ್ಲ.

1760 ರಿಂದ 1800 ರವರೆಗೆ ಈ ತೋಟ ಸುಲ್ತಾನರ ವೈಯಕ್ತಿಕ ಉದ್ಯಾನವನವಾಗಿತ್ತು. ಆ ಸಮಯದಲ್ಲಿ ಸಾರ್ವಜನಿಕ ಪ್ರವೇಶವಿರಲಿಲ್ಲ. ಲಾಲ್‌ಬಾಗ್‌ನಲ್ಲಿ ಪುಷ್ಪ ಪ್ರದರ್ಶನ ಆರಂಭಗೊಂಡಿದ್ದು 1857ರಲ್ಲಿ. ಈಗ ಪುಷ್ಪ ಪ್ರದರ್ಶನ ಎಷ್ಟು ಜನಪ್ರಿಯವಾಗಿದೆ ಎಂದರೆ, ವರ್ಷಕ್ಕೆ ಎರಡು ಭಾರಿ ಫಲಪುಷ್ಪ ಪ್ರದರ್ಶನ ಏರ್ಪಡಿಸುವ ಅನಿವಾರ್ಯತೆ ಸೃಷ್ಟಿಯಾಯಿತು. ಬೆಂಗಳೂರಿನ ಹೊರವಲಯದ ಮಹದೇವಪುರ ವಿಧಾನಸಭಾ ಕ್ಷೇತ್ರದ ಕನ್ನಮಂಗಲದಲ್ಲಿ ಹಲವು ವರ್ಷಗಳ ಬಳಿಕ ಮತ್ತೊಂದು ಮಿನಿ ಲಾಲ್‌ಬಾಗ್ ತಲೆ ಎತ್ತಿರುವುದು ಸಮಯೋಚಿತವಾಗಿದೆ. ಅಳಿವಿನಂಚಿನಲ್ಲಿರುವ ಅಪರೂಪದ ಸಸ್ಯ ಪ್ರಬೇಧಗಳನ್ನು ಕಾಪಾಡಿ ಜೀವ ವೈವಿಧ್ಯ ತಾಣವಾಗಿಸುವುದೇ ಇದರ ಮುಖ್ಯ ಉದ್ದೇಶವಾಗಿದೆ.



Downloaded From: www.kpscvaani.com

ಲಾಲ್‌ಬಾಗ್ ಹೆಸರು ಕೇಳಿದ್ದೀರಿ. ಆದರೆ ಮಿನಿ ಲಾಲ್‌ಬಾಗ್? ಅದು ಎಲ್ಲಿದೆ? ಹೇಗಿದೆ? ಏನೆಲ್ಲ ವಿಶೇಷತೆಗಳಿವೆ? ಬೆಂಗಳೂರಿನ ಹೊರವಲಯದಲ್ಲಿ 70 ಎಕರೆ ವಿಶಾಲ ಪ್ರದೇಶದಲ್ಲಿ ಮಿನಿ ಲಾಲ್‌ಬಾಗ್ ತಲೆಯೆತ್ತಿದೆ. 2011 ರಲ್ಲಿ ಆರಂಭಗೊಂಡು ಹಂತ–ಹಂತವಾಗಿ ಅಭಿವೃದ್ಧಿಯಾಗಿ ಈಗ ಈ ಮಟ್ಟಕ್ಕೆ ಬಂದಿದೆ.

ವಿಶೇಷವಾಗಿ ಅಳಿವಿನಂಚಿನಲ್ಲಿರುವ ಅಪರೂಪದ ಸಸ್ಯ ಪ್ರಭೇದಗಳನ್ನು ಗುರುತಿಸಿ, ಪತ್ತೆಹಚ್ಚಿ ಅವುಗಳನ್ನು ತಂದು ಇಲ್ಲಿ ನಾಟಿ ಮಾಡಿ, ಬೆಳೆಸುವ ಮೂಲಕ, ಮನುಷ್ಯನಿಗೆ ಶುದ್ಧ ಗಾಳಿ ನೀಡುವುದರ ಜೊತೆಗೆ ಪ್ರಾಣಿ–ಪಕ್ಷಿಗಳ ಸಂತತಿಯನ್ನು ಮತ್ತು ಅವುಗಳಿಗೆ ಬೇಕಾದ ಆಹಾರ ಪೂರೈಸಲು ಶ್ರಮಿಸುವುದು ಉದ್ಯಾನವನದ ಮುಖ್ಯ ಧ್ಯೇಯವಾಗಿದೆ.

ವಿಜ್ಞಾನಿಗಳು ಹಾಗೂ ಕೃಷಿ ವಿಶ್ವವಿದ್ಯಾಲಯದ ಪರಿಣಿತರು ಕಾಡಿನಲ್ಲಿ ನಶಿಸಿ ಹೋಗುತ್ತಿರುವ ಗಿಡ–ಮರಗಳ ಸಂತತಿಯನ್ನು ಪತ್ತೆಹಚ್ಚಿ ಅವುಗಳನ್ನು ಕಾಪಾಡುವ ಬಗ್ಗೆ ಮಾಹಿತಿ ನೀಡುತ್ತಿದ್ದು, ಅದರಂತೆ ಅಪರೂಪದ ಸಸ್ಯ ಪ್ರಭೇದಗಳನ್ನು ಹುಡುಕಿ ತಂದು, ನಾಟಿ ಮಾಡಿ ಅವುಗಳನ್ನು ಜತನದಿಂದ ಕಾಪಾಡಲಾಗುತ್ತಿದೆ. ಇನ್ನು ಮಿನಿ ಲಾಲ್‌ಬಾಗ್‌ಗೆ ಹೊಂದಿಕೊಂಡಂತೆ 20 ಎಕರೆ ಪ್ರದೇಶದಲ್ಲಿ ನರ್ಸರಿ ಪ್ಲಾಂಟ್ ಸ್ಥಾಪಿಸಲಾಗಿದೆ. ಇಲ್ಲಿ ರೈತರಿಗೆ ಮತ್ತು ಜನರಿಗೆ ಬೇಕಾಗುವ ಹೂವು, ಹಣ್ಣು, ತರಕಾರಿ ಗಿಡಗಳನ್ನು ಬೆಳೆಸಿ ಅವುಗಳನ್ನು ಮಾರಾಟ ಮಾಡಲಾಗುತ್ತಿದೆ. ಜೊತೆಗೆ ರೈತರಿಗೆ ಇವುಗಳನ್ನು ಬೆಳೆಸುವ ವಿಧಾನಗಳ ಬಗ್ಗೆಯೂ ಸೂಕ್ತ ತರಬೇತಿ ನೀಡಲಾಗುತ್ತಿದೆ. ಇದರಿಂದ ಕೊಂಚ ಮಟ್ಟಿನ ಆದಾಯ ಬರುತ್ತಿದೆ. ಮುಂದಿನ ದಿನಗಳಲ್ಲಿ ಆಯುರ್ವೇದ ಗಿಡಗಳನ್ನು ಬೆಳೆಸಲು ಪ್ರತ್ಯೇಕ ಬ್ಲಾಕ್ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ, ಔಷಧ ತಯಾರಿಕೆಗೆ ಬೇಕಾಗುವ ಅಪರೂಪದ ಸಸ್ಯ ಸಂಪತ್ತನ್ನು ಬೆಳೆಸುವ ಮೂಲಕ ಆರ್ಥಿಕ ಸಂಪನ್ಮೂಲ ವೃದ್ಧಿಸಿಕೊಳ್ಳುವ ಹೇರಳ ಅವಕಾಶವಿದೆ.

ಬೆಂಗಳೂರಿನ ಲಾಲ್‌ಬಾಗ್, ತಮಿಳುನಾಡಿನ ಊಟಿ ಸೇರಿದಂತೆ ಹಲವು ಬೊಟಾನಿಕಲ್ ಗಾರ್ಡನ್‌ಗಳು ದೇಶದಲ್ಲಿ ತುಂಬಾ ಹೆಸರುವಾಸಿಯಾಗಿವೆ. ಪ್ರಕೃತಿ ಪ್ರಿಯರನ್ನು ಕೈಬೀಸಿ ಕರೆಯುತ್ತಿದೆ. ಈವರೆಗೆ ಕೋಟ್ಯಂತರ ಮಂದಿ ಈ ತೋಟಗಳಿಗೆ ಭೇಟಿ ನೀಡಿ ಮರ, ಗಿಡ, ಹಣ್ಣು ಹೂಗಳನ್ನು ನೋಡಿ ಕಣ್ತುಂಬಿಕೊಂಡಿದ್ದಾರೆ.

ಉಸಿರಾಡುವ ಗಾಳಿ ಮನುಷ್ಯನಿಗೆ ಎಷ್ಟು ಮುಖ್ಯ ?, ಪ್ರಕೃತಿ ಮತ್ತು ಮಾನವ ಸಂಬಂಧ ಹದಗೆಟ್ಟರೆ ಏನೆಲ್ಲ ಅನಾಹುತವಾದೀತು?, ಎಂಬುದನ್ನು ಕೊರೊನಾ ಜಗತ್ತಿಗೆ ಮನವರಿಕೆ ಮಾಡಿಕೊಟ್ಟಿದೆ. ಬೆಂಗಳೂರಿನಲ್ಲಿ ಮತ್ತೊಂದು, ಅದೂ ಮಿನಿ ಲಾಲ್‌ಬಾಗ್ ತಲೆ ಎತ್ತಿದ್ದು, ಕಳೆದ ತಿಂಗಳು ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರು ಇದನ್ನು ಉದ್ಘಾಟನೆ ಮಾಡಿದ್ದಾರೆ.

> **ವಿಶೇಷವಾಗಿ ಅಳಿವಿನಂಚಿನಲ್ಲಿರುವ ಅಪರೂಪದ ಸಸ್ಯ ಪ್ರಭೇದಗಳನ್ನು ಗುರುತಿಸಿ, ಪತ್ತೆಹಚ್ಚಿ ಅವುಗಳನ್ನು ತಂದು ಇಲ್ಲಿ ನಾಟಿ ಮಾಡಿ, ಬೆಳೆಸುವ ಮೂಲಕ, ಮನುಷ್ಯನಿಗೆ ಶುದ್ಧ ಗಾಳಿ ನೀಡುವುದರ ಜೊತೆಗೆ ಪ್ರಾಣಿ–ಪಕ್ಷಿಗಳ ಸಂತತಿಯನ್ನು ಮತ್ತು ಅವುಗಳಿಗೆ ಬೇಕಾದ ಆಹಾರ ಪೂರೈಸಲು ಶ್ರಮಿಸುವುದು ಉದ್ಯಾನವನದ ಮುಖ್ಯ ಧ್ಯೇಯವಾಗಿದೆ.**

ಬೆಂಗಳೂರು ಅಳತೆ ಮೀರಿ, ಬೃಹದಾಕಾರವಾಗಿ ಬೆಳೆದಿದ್ದರೂ ಸಾಕಷ್ಟು ಗಿಡ, ಮರ ಜೊತೆಗೆ ಉದ್ಯಾನವನಗಳಿವೆ. ದೇಶದ ಬೇರೆ, ಬೇರೆ ನಗರಗಳಿಗೆ ಹೋಲಿಕೆ ಮಾಡಿದರೆ ಬೆಂಗಳೂರು ಹಸಿರು ಪರಿಸರವನ್ನು ಮತ್ತು ಸಾಕಷ್ಟು ಸಂಖ್ಯೆಯ ಉದ್ಯಾನವನಗಳನ್ನು ಕಾಪಾಡಿಕೊಂಡೇ ಬಂದಿದೆ. ಗಾರ್ಡನ್ ಸಿಟಿ ಎಂಬ ಹೆಸರನ್ನು ಮುಂದೆಯೂ ಉಳಿಸಿಕೊಳ್ಳಲು ನಗರದ ಜನತೆ ಮತ್ತು ಆಡಳಿತ ಮತ್ತಷ್ಟು ಪ್ರಯತ್ನ ಮಾಡಲೇಬೇಕು. ಇಲ್ಲಿರುವ ಖಾಲಿ ಜಾಗಗಳಲ್ಲಿ ಪುಟ್ಟ, ಪುಟ್ಟ ಕೈತೋಟ ನಿರ್ಮಿಸಿ ಬೆಂಗಳೂರಿನ ಹಸಿರು ವಲಯದ ವ್ಯಾಪ್ತಿಯನ್ನು ವಿಸ್ತರಿಸಬೇಕು. ಜೊತೆಗೆ ಗಾರ್ಡನ್ ಸಿಟಿ ಎಂಬ ಹೆಸರನ್ನು ಉಳಿಸಿಕೊಳ್ಳಬೇಕು. ಬೆಂಗಳೂರಿಗೆ ಒಂದು ಕಬ್ಬನ್ ಪಾರ್ಕ್, ಒಂದು ಲಾಲ್‌ಬಾಗ್ ಸಾಲುವುದಿಲ್ಲ, ಹತ್ತಾರು ಲಾಲ್ ಬಾಗ್ ಮತ್ತು ಕಬ್ಬನ್ ಪಾರ್ಕ್ ಬೇಕು ಎಂಬ ತುಡಿತ – ಮಿಡಿತ ಬೆಂಗಳೂರು ನಿವಾಸಿಗಳನ್ನು ಈಗಲೂ ಕಾಡುತ್ತಿರುವುದು ಸುಳ್ಳಲ್ಲ.

### ಏನೆಲ್ಲ ವಿಶೇಷತೆಯಿದೆ ಬಲ್ಲಿರಾ..?

ಇಲ್ಲಿ ವಿವಿಧ ದೇಶಗಳ 2,800 ಕ್ಕೂ ಹೆಚ್ಚು ತೆಂಗಿನ ತಳಿಗಳಿವೆ. 150 ಕ್ಕೂ ಹೆಚ್ಚು ಗೋಡಂಬಿ ಗಿಡಗಳು, 20 ವಿವಿಧ ಜಾತಿಯ ಹಲಸು, ಮಾವಿನ ಮರಗಳು, 150ಕ್ಕೂ ಹೆಚ್ಚು ವಿವಿಧ ಜಾತಿಯ ವೈದ್ಯಕೀಯ ಸಸ್ಯ ಮತ್ತು ಗಿಡ–ಮರಗಳು ಹಾಗೂ 1500 ಕ್ಕೂ ಹೆಚ್ಚು ವಿವಿಧ ಬಗೆಯ ಅಲಂಕಾರಿಕ ಗಿಡಗಳು ಉದ್ಯಾನವನಕ್ಕೆ ಮತ್ತಷ್ಟು ಮೆರಗು ನೀಡಿವೆ.

ಗಿಡ–ಮರಗಳು ಇದ್ದ ಮೇಲೆ ಅವುಗಳನ್ನು ಸಾಕಲು ನೀರು ಬೇಕಲ್ಲ? ಇದಕ್ಕಾಗಿ ಇಲ್ಲಿ ಎರಡು ಬೋರ್‌ವೆಲ್‌ಗಳಿವೆ. ಜೊತೆಗೆ 6 ಕೃಷಿ ಹೊಂಡಗಳಿವೆ. ಮಳೆಗಾಲದಲ್ಲಿ ಸಂಗ್ರಹವಾಗುವ ನೀರು ಇಲ್ಲಿನ ಗಿಡ–ಮರಗಳಿಗೆ ವರ್ಷವಿಡೀ ಬೆಳವಣಿಗೆಗೆ ಆಸರೆಯಾಗಿದೆ.

ಒಂದೊಂದು ಕೃಷಿ ಹೊಂಡಗಳು ತಲಾ ಮೂರು ಲಕ್ಷ ಲೀಟರ್ ನೀರು ಹಿಡಿದಿಡುವ ಸಾಮರ್ಥ್ಯ ಹೊಂದಿವೆ. ಇದರ ಜೊತೆಗೆ ಎರಡು ನೀರಿನ ಸಿಮೆಂಟ್ ತೊಟ್ಟಿಗಳಿವೆ. ಇವುಗಳಲ್ಲಿ ತಲಾ 1 ಲಕ್ಷ ಲೀಟರ್ ನೀರನ್ನು ಸಂಗ್ರಹ ಮಾಡಬಹುದಾಗಿದೆ. ಇಲ್ಲಿಯವರೆಗೆ ಉದ್ಯಾನವನ ಅಭಿವೃದ್ಧಿಗಾಗಿ 4 ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ.

ಪಾದಚಾರಿಗಳು ಓಡಾಡುವುದಕ್ಕಾಗಿ 3,500 ಮೀಟರ್ ಉದ್ದದ ಪಾಥ್‌ವೇ (ಪಾದಚಾರಿಮಾರ್ಗ) ನಿರ್ಮಿಸಲಾಗಿದೆ. ಬೆಳಗ್ಗೆ 6 ರಿಂದ 10 ವರೆಗೆ ಮತ್ತು ಸಂಜೆ 4 ರಿಂದ 6 ಗಂಟೆಯವರೆಗೆ ಪಾದಚಾರಿಗಳು ವಾಯುವಿಹಾರ ಮಾಡಲು ಅವಕಾಶ ಮಾಡಲಾಗಿದೆ. ಸದ್ಯ ಪ್ರತಿನಿತ್ಯ ಸಾವಿರಕ್ಕೂ ಹೆಚ್ಚು



Downloaded From: www.kpscvaani.com



ವಾಯುವಿಹಾರಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಹೊಸ ತಳಿಗಳ ಸಂಶೋಧನೆ ಮಾಡುವವರಿಗೆ, ಹೊಸ ತಳಿಗಳನ್ನು ಬೆಳೆದು ಆರ್ಥಿಕವಾಗಿ ಮುಂದೆ ಬರುವಂತಹ ರೈತರಿಗೆ, ವಿಶೇಷವಾಗಿ ಸಂಶೋಧನೆಯಲ್ಲಿ ಆಸಕ್ತಿ ವಹಿಸುವಂತಹ ಶಾಲಾ – ಕಾಲೇಜು ವಿದ್ಯಾರ್ಥಿಗಳಿಗೆ ಇದು ಮುಂದೆ ಅಚ್ಚುಮೆಚ್ಚಿನ ತಾಣವಾಗಲಿದೆ. ಹೊಸ ಸಸ್ಯ ಪ್ರಭೇದಗಳನ್ನು ಪರಿಚಯಿಸಿ, ರೈತರ ಕೈಗಿಡುವ ಮೂಲಕ ಆರ್ಥಿಕ ಅಭಿವೃದ್ಧಿಗೂ ನಾಂದಿ ಹಾಡಲಿದೆ.

ವಿಶ್ವ ಆರೋಗ್ಯ ಸಂಸ್ಥೆ ಜಗತ್ತಿನಲ್ಲಿ 1,650 ನಗರಗಳ ವಾಯುಮಾಲಿನ್ಯದ ಪ್ರಮಾಣವನ್ನು ಸಮೀಕ್ಷೆ ಮಾಡಿದೆ. ಅದರ ಪ್ರಕಾರ ದೇಶದ ರಾಜಧಾನಿ ದೆಹಲಿಯಲ್ಲಿ ಉಸಿರಾಡುವ ಗಾಳಿಯ ಗುಣಮಟ್ಟ ಕಲುಷಿತಗೊಂಡು ದೊಡ್ಡ ಸುದ್ದಿಯಾಗುತ್ತಿದೆ. ಇದೇ ಕಾರಣಕ್ಕಾಗಿ ದೆಹಲಿ ನಗರ ಕೆಟ್ಟ ಪರಿಸ್ಥಿತಿ ಅನುಭವಿಸುತ್ತಿದೆ ಎಂದು ಸುಪ್ರಿಂ ಕೋರ್ಟ್ ಅಭಿಪ್ರಾಯಪಟ್ಟಿರುವುದನ್ನು ಗಮನಿಸಿದರೆ ವಾಯುಮಾಲಿನ್ಯ ಮತ್ತು ಅದು ಉಂಟುಮಾಡುತ್ತಿರುವ ಸಮಸ್ಯೆ, ಅಪಾಯದ ಗಂಭೀರತೆ ಅರ್ಥವಾಗಲಿದೆ.

ಬೆಂಗಳೂರಿಗೆ ದೆಹಲಿಯಂತಹ ಕೆಟ್ಟ, ಅಪಾಯಕಾರಿ ಪರಿಸ್ಥಿತಿ ಬರಬಾರದು ಎಂದರೆ ಬೆಂಗಳೂರು ನಗರಕ್ಕೆ ಹಸಿರು ಹೊದಿಕೆಯನ್ನು ಹೊದಿಸುವುದು, ವಿಸ್ತರಿಸುವುದು ಹಾಗೂ ಅದನ್ನು ಕಾಪಾಡುವ ಅವಶ್ಯಕತೆಯಿದೆ. ಹೆಚ್ಚುತ್ತಿರುವ ವಾಯುಮಾಲಿನ್ಯ ತಡೆಗೆ ಮತ್ತು ಜನರ ಆರೋಗ್ಯ ಕಾಪಾಡುವ, ಜೊತೆಗೆ ಅಪರೂಪದ ಸಸ್ಯ ಪ್ರಬೇಧ ಸಂರಕ್ಷಿಸಿ ಅವುಗಳನ್ನು ಮುಂದಿನ ಪೀಳಿಗೆಗೂ ಉಳಿಸುವಂತಹ ಕೆಲಸ ನಿರಂತರವಾಗಿ ಸಾಗಬೇಕು. ಈ ನಿಟ್ಟಿನಲ್ಲಿ ಮಿನಿ ಲಾಲ್‌ಬಾಗ್ ಶರವೇಗದಲ್ಲಿ ಬೆಳೆಯಲಿ, ಉದ್ದೇಶ, ಗುರಿಯನ್ನು ಈಡೇರಿಸಿಕೊಳ್ಳಲಿ, ಜೀವ ವೈವಿಧ್ಯ ತಾಣವಾಗಿ ಮುಗಿಲೆತ್ತರಕ್ಕೆ ಬೆಳೆಯಲಿ.

### ಬೊಟಾನಿಕಲ್ ಗಾರ್ಡನ್ ಎಂದರೆನು?

ದೇಶದ ಹಲವು ನಗರಗಳಲ್ಲಿ ಬೊಟಾನಿಕಲ್ ಗಾರ್ಡನ್‌ಗಳು ತಲೆ ಎತ್ತಿವೆ. ಪ್ರಕೃತಿ ಪ್ರಿಯರನ್ನು ಕೈ ಬೀಸಿ ಕರೆದು ಎದೆಗೆ ಅವಚಿಕೊಳ್ಳುತ್ತಿವೆ. ನಗರಗಳ ಸೌಂದರ್ಯಕ್ಕೂ ಮುಕುಟಪ್ರಾಯವಾಗಿದೆ. ಪ್ರವಾಸೋದ್ಯಮಕ್ಕೂ ದಾರಿ ಮಾಡಿಕೊಟ್ಟಿದೆ, ಅಲ್ಲದೆ ಆರ್ಥಿಕ ಚಟುವಟಿಕೆಗೆ ಮಾರ್ಗವಾಗಿದೆ.

ಪ್ರಾಣಿ ಸಂಗ್ರಹಾಲಯದಲ್ಲಿ ಹೇಗೆ ವಿವಿಧ ಜಾತಿಯ ಪ್ರಾಣಿಗಳನ್ನು ಒಂದೇ ಸೂರಿನಡಿ ನೋಡಬಹುದಾಗಿದೆಯೋ, ಅದೇ ರೀತಿ ಒಂದೇ ಸೂರಿನಡಿ ವಿವಿಧ ಜಾತಿಯ ಗಿಡ, ಮರಗಳು, ಹೂವಿನ ಗಿಡಗಳು, ಹಣ್ಣಿನ ಗಿಡಗಳು, ಅಲಂಕಾರಿಕ ಮತ್ತು ಔಷಧೀಯ ಸಸ್ಯಗಳನ್ನು ಬೆಳೆಸಿ, ಪೋಷಣೆ ಮಾಡುವ ಅದನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ತೋಟಗಳನ್ನೇ ಬೊಟಾನಿಕಲ್ ಗಾರ್ಡನ್ ಎಂದು ಕರೆಯುತ್ತಾರೆ.

ಪ್ರವಾಹ, ಬೆಂಕಿ, ಜ್ವಾಲಾಮುಖಿ, ಭೂಕುಸಿತ ಸೇರಿದಂತೆ ಯಾವುದೇ ನೈಸರ್ಗಿಕ ವಿಕೋಪಗಳಿಂದ ಕಣ್ಮರೆಯಾಗುವ ಗಿಡ, ಮರಗಳ ಸಂತತಿಯನ್ನು ಬೀಜೋತ್ಪಾದನೆಯ ಮೂಲಕ ಕಾಪಾಡುವುದೇ ಬೊಟಾನಿಕಲ್ ಗಾರ್ಡನ್‌ಗಳ ಮುಖ್ಯ ಧ್ಯೇಯವಾಗಿದೆ.

ಬೆಂಗಳೂರು ನಗರದ ನಾಲ್ಕು ಕಡೆ ಲಾಲ್‌ಬಾಗ್ ತಲೆ ಎತ್ತಬೇಕು ಎಂಬುದು ಎಲ್ಲರ ಆಶಯವಾಗಿತ್ತು. ಆದರೆ ಇದುವರೆಗೂ ಅನುಷ್ಠಾನಕ್ಕೆ ಬಂದಿರಲಿಲ್ಲ. ಸದ್ಯ ಈಗ ಮತ್ತೊಂದು ಮಿನಿ ಲಾಲ್‌ಬಾಗ್ ಜನ್ಮ ತಾಳಿದೆ. ಮುಂದಿನ ವರ್ಷಗಳಲ್ಲಿ, ಮತ್ತಷ್ಟು, ಮಗದಷ್ಟು ಲಾಲ್‌ಬಾಗ್ ಉದಯಿಸಲಿ, ಬೆಂಗಳೂರು ಸದಾಕಾಲ ಅಚ್ಚ ಹಸಿರಿನಿಂದ ನಳನಳಿಸಲಿ ಎಂಬುದು ಪ್ರಕೃತಿ ಪ್ರಿಯರ ಸದಾಶಯವಾಗಿದೆ.



Downloaded From: www.kpscvaani.com



## ರಾಜ್ಯ ಪ್ರವಾಸೋದ್ಯಮಕ್ಕೆ ಗರಿಮೆ ಹೆಚ್ಚಿಸಿದ

# ವಿಸ್ಟಾಡೋಮ್ ರೈಲು

● ವರಪ್ರಸಾದ್ ರಾವ್ ಪಿ.ವಿ

**ಮಂಗಳೂರು ಮತ್ತು ಬೆಂಗಳೂರಿನ ರೈಲು ಮಾರ್ಗದಲ್ಲಿ ಗೋಚರಿಸುವ ಪ್ರಕೃತಿಯ ಸೊಬಗನ್ನು ಭರಪೂರವಾಗಿ ಸವಿಯಲು ಸಾಧ್ಯವಾಗುವಂತಹ ಗಾಜಿನ ಛಾವಣಿ ಹಾಗೂ ಇತರ ಸೌಲಭ್ಯಗಳನ್ನು ಹೊಂದಿರುವ ವಿಸ್ಟಾಡೋಮ್ ರೈಲು ಸೌಲಭ್ಯವನ್ನು ಪ್ರಕೃತಿ ಪ್ರಿಯರಿಗಾಗಿ ಭಾರತೀಯ ರೈಲ್ವೆಯು ಒದಗಿಸಿದೆ.**

ವಿಸ್ಟಾಡೋಮ್ ಬೋಗಿಗಳುಳ್ಳ ರೈಲನ್ನು ದಕ್ಷಿಣ ಭಾರತದಲ್ಲಿ ರೈಲ್ವೆ ಇಲಾಖೆಯಿಂದ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಈ ಹೊಸ ವಿನ್ಯಾಸದ ರೈಲು ಸಂಚಾರಕ್ಕೆ ಪ್ರಕೃತಿ ಪ್ರಿಯರು ಪುಲ್ ಖುಷ್ ಆಗಿದ್ದಾರೆ.

ಎತ್ತರದ ಪರ್ವತಗಳ ಅದ್ಭುತ ನೋಟ, ಕಣಿವೆಗಳು, ಆಳವಾದ ಕಮರಿಗಳು ಮತ್ತು ಹಚ್ಚ ಹಸಿರಿನ ಈ ಪ್ರದೇಶ ಮಾನ್ಸೂನ್‌ನಲ್ಲಿ ಇನ್ನಷ್ಟು ಸುಂದರ ದೃಶ್ಯಾವಳಿಗಳು ನೋಡುಗರನ್ನು ಬೆರಗುಗೊಳಿಸುತ್ತದೆ.ಈ ಬೋಗಿಯಲ್ಲಿ ಫೋಟೋಗ್ರಫಿಗೆ ಪ್ರತ್ಯೇಕ ವಿಕಲಚೇತನರ ಅನುಕೂಲಕ್ಕೆ ಪ್ರತ್ಯೇಕ ಸ್ಥಳಾವಕಾಶ ಸೇರಿದಂತೆ ಮೆಟ್ರೋ ರೈಲಿನಲ್ಲಿ ಸಂಚರಿಸಿದ ಅನುಭವವಾಗಲಿದೆ. ಅತಿ ದೊಡ್ಡ ಗಾಜಿನ ಕಿಟಕಿಗಳಿಂದಾಗಿ ಪ್ರಯಾಣಿಕರು ಪ್ರಾಕೃತಿಕ ಸೊಬಗನ್ನು ಕಣ್ತುಂಬಿಕೊಳ್ಳಬಹುದಾಗಿದೆ.

ಈಗ ಮಳೆ ಮತ್ತು ಗಾಳಿಯ ಕಾಲ. ಮೈ ತುಂಬ ಹಸಿರನ್ನು ಹೊದ್ದು, ಸಸ್ಯ ಶ್ಯಾಮಲೆಯಂತೆ ಕಂಗೊಳಿಸುವ ಪಶ್ಚಿಮ ಘಟ್ಟದ ಬೆಟ್ಟಗಳ ಸೊಬಗನ್ನು ಕೂತಲ್ಲೇ ಸವಿಯ ಬೇಕೆ?, ಹಾಗಿದ್ದರೆ.. ಬನ್ನೀ .... ಸಂಪೂರ್ಣ ಗಾಜಿನಿಂದ ಕೂಡಿದ ಕಿಟಕಿ ಹಾಗೂ ಛಾವಣಿಯನ್ನು



Downloaded From: www.kpscvaani.com



**ಸುಬ್ರಹ್ಮಣ್ಯದಿಂದ ದೋಣಿಗಲ್ ವರೆಗಿನ ಸುಮಾರು 60 ಕಿಲೋಮೀಟರ್ ಪ್ರಯಾಣವನ್ನು ಯಾವುದೇ ಕಾರಣಕ್ಕೂ ಪ್ರಯಾಣಿಕರು ಮರೆಯಲು ಸಾಧ್ಯವಾಗದು. ಈ ಮಾರ್ಗದಲ್ಲಿ ಸಿಗುವ 57 ಟನಲ್‌ಗಳು, ನೂರಾರು ಸೇತುವೆಗಳು, ನದಿ–ಜರಿಗಳು ಮತ್ತು ಪ್ರಕೃತಿಯ ಸೌಂದರ್ಯವು ಪ್ರಯಾಣಿಕರನ್ನು ಮೂಕವಿಸ್ಮಿತರನ್ನಾಗಿಸುತ್ತದೆ**

ಹೊಂದಿರುವ ಆಕರ್ಷಕ ವಿಸ್ಟಾಡೋಮ್ ರೈಲಿನಲ್ಲಿ ಪ್ರಯಾಣಿಸೋಣ. ರೈಲು ಬೋಗಿಯ ಸೀಟುಗಳು 180 ಡಿಗ್ರಿಯಲ್ಲಿ ತಿರುಗಲಿದ್ದು, ರೈಲು ಮಾರ್ಗದ ಸೌಂದರ್ಯ ಸವಿಯಲು ಈ ರೈಲು ಪ್ರಯಾಣಿಕರನ್ನು ಕೈಬೀಸಿ ಕರೆಯುತ್ತಿದೆ.

ಕರ್ನಾಟಕ ರಾಜ್ಯದ ಪ್ರವಾಸೋದ್ಯಮದ ಸಾಧ್ಯತೆಗಳನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಹಗಲಿನಲ್ಲಿ ಪ್ರಕೃತಿಯ ರಮಣೀಯ ದೃಶ್ಯಗಳನ್ನು ವೀಕ್ಷಿಸಲು ಅನುಕೂಲವುಳ್ಳ ವಿಸ್ಟಾಡೋಮ್ ಹೆಸರಿನ ವಿಶೇಷ ರೈಲು ಸಂಚಾರ ಆರಂಭಗೊಂಡಿದೆ. ಪ್ರಯಾಣಿಕರಿಗೆ ವಿಶೇಷ ಅನುಕೂಲತೆ ಕಲ್ಪಿಸಿದೆ.

ಕರ್ನಾಟಕದ ಪ್ರಮುಖ ಪ್ರವಾಸಿ ತಾಣಗಳ ದರ್ಶನ ಮಾಡಿಸಲು ಗೋಲ್ಡನ್ ಚಾರಿಯಟ್ ಎಂಬ ಹೆಸರಿನ ಐಷರಾಮಿ ರೈಲನ್ನು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು 2008 ರಂದು ರೈಲ್ವೆ ಮಂಡಲಿಯ ಜಂಟಿ ಉದ್ಯಮವಾಗಿ ಚಾಲನೆ ನೀಡಲಾಗಿತ್ತು. 2018 ರಲ್ಲಿ ಗೋಲ್ಡನ್ ಚಾರಿಯಟ್ ರೈಲನ್ನು ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಐಆರ್‌ಸಿಟಿಸಿಗೆ ಹಸ್ತಾಂತರ ಮಾಡಿತ್ತು. ಇದೀಗಾ ಪ್ರವಾಸೋದ್ಯಮಕ್ಕೆ ಮತ್ತಷ್ಟು ಪುಷ್ಠಿ ನೀಡಲು ಪ್ರಯಾಣಿಕರಿಗೆ ಪಶ್ಚಿಮಘಟ್ಟದ ಬೆಟ್ಟಗುಡ್ಡಗಳು, ಝರಿ ತೋರೆಗಳು ಸೇರಿದಂತೆ ಪ್ರಕೃತಿಯ ರಮಣೀಯ ಸೊಬಗನ್ನು ವೀಕ್ಷಿಸಲು ಅನುಕೂಲವಾಗುವಂತೆ ರೈಲ್ವೆ ಇಲಾಖೆಯಿಂದ ವಿಸ್ಟಾಡೋಮ್ ಬೋಗಿಗಳ ರೈಲು ಪ್ರಯಾಣಕ್ಕೆ ಚಾಲನೆ ನೀಡಲಾಗಿದೆ.

ವಾರಕ್ಕೆ ಮೂರು ಬಾರಿ ಸಂಚಾರ ನಡೆಸುವ ಯಶವಂತಪುರ–ಕಾರವಾರ (06211/ 06212) ರೈಲು, ಯಶವಂತಪುರ–ಮಂಗಳೂರು ಜಂಕ್ಷನ್ ವಿಶೇಷ ರೈಲು (06575/06576) ರೈಲು, ಯಶವಂತಪುರ–ಮಂಗಳೂರು (06539) ಹಾಗೂ ಮಂಗಳೂರು ಜಂಕ್ಷನ್–ಯಶವಂತಪುರ (06540) ದಕ್ಷಿಣ ಭಾರತದಲ್ಲಿ ರೈಲ್ವೆ ಇಲಾಖೆಯಿಂದ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ.

ಈ ವಿಶೇಷ ರೈಲಿನಲ್ಲಿ ಪ್ರತೀ ವಿಸ್ಟಾಡೋಮ್ ಬೋಗಿಯಲ್ಲಿ 44 ಮಂದಿಯಂತೆ ಎರಡು ಬೋಗಿಯಿಂದ 88 ಮಂದಿ ಪ್ರಯಾಣಿಸಬಹುದಾಗಿದೆ. ಈ ವಿಶೇಷ ಬೋಗಿಯು ಪಶ್ಚಿಮ ಘಟ್ಟದ ನಡುವೆ ಸಂಚರಿಸುವ ಸಂದರ್ಭ ರೈಲು ಪ್ರಯಾಣಿಕರಿಗೆ ಪ್ರಕೃತಿಯ ರಮಣೀಯ ಸೌಂದರ್ಯವನ್ನು ಕಣ್ತುಂಬಿಸುವ ಅವಕಾಶ ಸಿಗಲಿವೆ.

**ವಿಸ್ಟಾಡೋಮ್ ಕೋಚ್ ದರ ಪಟ್ಟಿ:**

ಯಶವಂತಪುರ–ಮಂಗಳೂರು ಜಂಕ್ಷನ್ – 1395 ರೂ.
ಹಾಸನ–ಮಂಗಳೂರು ಜಂಕ್ಷನ್ –960 ರೂ.
ಹಾಸನ–ಸುಬ್ರಮಣ್ಯ ರಸ್ತೆ –725 ರೂ.
ಸಕಲೇಶಪುರ–ಸುಬ್ರಮಣ್ಯ ರಸ್ತೆ –625 ರೂ.
ಯಶವಂತಪುರ–ಸುಬ್ರಮಣ್ಯ ರಸ್ತೆ – 1175 ರೂ.



Downloaded From: www.kpscvaani.com



ಪಶ್ಚಿಮಘಟ್ಟ ಮತ್ತು ಕರಾವಳಿ ಭಾಗದಲ್ಲಿ ಸಂಚರಿಸುವ ಮೂರು ರೈಲುಗಳ ದ್ವಿತೀಯ ದರ್ಜೆಯ ಒಂದು ಸಾಮಾನ್ಯ ಬೋಗಿಯನ್ನು ತೆಗೆದು ತಲಾ ಎರಡು ವಿಸ್ಟಾಡೋಮ್ ಕೋಚ್‌ಗಳನ್ನು ಜೋಡಿಸಲಾಗಿದೆ. ಬೆಂಗಳೂರು–ಮಂಗಳೂರು ನಡುವೆ ಸುಬ್ರಹ್ಮಣ್ಯದಿಂದ ಸಕಲೇಶಪುರದವರೆಗೆ ಸುಮಾರು 57 ಸುರಂಗ ಮಾರ್ಗಗಳಿದ್ದು, ಅವುಗಳಲ್ಲಿ ರೈಲು ಸಾಗುತ್ತಿದ್ದಂತೆ ಕಗ್ಗತ್ತಲ ಅನುಭವ. ಮಂಜಿನಿಂದ ಮರೆಯಾಗಿದ್ದ ದೂರದ ಬೆಟ್ಟಗಳು, ಪ್ರಕೃತಿಯ ಸೊಬಗಿನ ದರ್ಶನವನ್ನು ಪ್ರಯಾಣಿಕರು ಪಡೆಯಲಿದ್ದಾರೆ.

ಕಳೆದ ಹಲವು ವರ್ಷಗಳಿಂದ ಈ ಮಾರ್ಗದಲ್ಲಿ ಸಂಚರಿಸುವ ರೈಲುಗಳಿಗೆ ಗಾಜಿನ ಛಾವಣಿ, ಕಿಟಕಿಗಳನ್ನು ಅಳವಡಿಸುವಂತೆ ಸಾರ್ವಜನಿಕರು ಮನವಿ ಮಾಡಿದ ಮೇರೆಗೆ ವಿಸ್ಟಾಡೋಮ್ ರೈಲು ಸಂಚಾರ ಆರಂಭಗೊಂಡಿದೆ. ಪಶ್ಚಿಮ ಘಟ್ಟದ ನಡುವೆ ಹಾದುಹೋಗುವ ಈ ರೈಲುಮಾರ್ಗದಲ್ಲಿ ಸಂಚರಿಸುವವರಿಗೆ ದಟ್ಟವಾದ ಅರಣ್ಯ, ಅಲ್ಲಲ್ಲಿ ಕಾಣುವ ಜಲಪಾತ, ರೈಲು ಸುರಂಗ ಮಾರ್ಗ, ಶಿರಾಡಿ ಘಾಟ್‌ನ ಸೌಂದರ್ಯವನ್ನು ಜನರು ರೈಲಿನಲ್ಲಿಯೇ ಕುಳಿತು ಕಣ್ತುಂಬಿಕೊಳ್ಳಬಹುದಾಗಿದೆ.

ಈಗ ಮಳೆಗಾಲವೂ ಆಗಿರುವುದರಿಂದ ಪಶ್ಚಿಮ ಘಟ್ಟದ ಸೌಂದರ್ಯ ಇಮ್ಮಡಿಯಾಗಿದೆ. ಮಳೆಗಾಲದಲ್ಲೇ ಈ ಸಂಚಾರ ಆರಂಭಗೊಂಡ ಕಾರಣ ಪ್ರಕೃತಿಯ ಸೊಬಗು ಸವಿಯಲು ಪ್ರಯಾಣಿಕರು ಪುಳಕಿತರಾಗಿದ್ದಾರೆ. ನೈಋತ್ಯ ರೈಲ್ವೆ ಇದೇ ಮೊದಲ ಬಾರಿಗೆ ಕರ್ನಾಟಕದಲ್ಲಿ ರೈಲುಗಳಿಗೆ ವಿಸ್ಟಾಡೋಮ್ ಕೋಚ್ ಅಳವಡಿಕೆ ಮಾಡಿದೆ. ಗಾಜಿನ ಛಾವಣಿಯನ್ನು ಹೊಂದಿರುವ ಬೋಗಿಗಳ ಮೂಲಕ ನಿಸರ್ಗದ ಸೌಂದರ್ಯ ಸವಿಯಬಹುದಾಗಿದೆ. 180 ಡಿಗ್ರಿ ತಿರುಗುವಂತಹ ಆಸನದ ವ್ಯವಸ್ಥೆಯನ್ನು ಮಾಡಲಾಗಿರುವುದರಿಂದ ಪ್ರಯಾಣಿಕರು ಆರಾಮವಾಗಿ ತಮಗಿಷ್ಟ ಬಂದಂತೆ ಆಸನವನ್ನು ತಿರುಗಿಸಿ ಕುಳಿತುಕೊಂಡು ಪ್ರಕೃತಿಯನ್ನು ವೀಕ್ಷಣೆ ಮಾಡಬಹುದು. ಮೆಟ್ರೋ ರೈಲಿನಲ್ಲಿ ಸಂಚರಿಸಿದ ಅನುಭವ ನೀಡಲಿದೆ.

ಆಸನವನ್ನು ತಮಗೆ ಅನುಕೂಲವಾಗುವಂತೆ ಜೋಡಿಸಿಕೊಂಡು, ಪ್ರಯಾಣಿಕರು ರಮಣೀಯ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿಯಬಹುದು. ಸುಬ್ರಹ್ಮಣ್ಯ ರೈಲು ನಿಲ್ದಾಣ ದಾಟುತ್ತಿದ್ದಂತೆ ಪಶ್ಚಿಮಘಟ್ಟದ ಸೊಬಗು ರೋಮಾಂಚನಗೊಳಿಸದೆ ಇರದು. ಈ ಬೋಗಿಯಲ್ಲಿ ಫೋಟೋಗ್ರಫಿಗೆ ಪ್ರತ್ಯೇಕ, ವಿಕಲಚೇತನರ ಅನುಕೂಲಕ್ಕೆ ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಲಾಗಿದೆ.

ವಿಸ್ಟಾಡೋಮ್ ಬೋಗಿಗಳನ್ನು ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿ ಎಲ್‌ಎಚ್‌ಬಿ (ಲಿಂಕ–ಹಾಫ್ಮನ್–ಬುಶ್ ಪ್ಲಾಟ್‌ಫಾರ್ಮ್ –ತಂತ್ರಜ್ಞಾನ) ನಲ್ಲಿ ತಯಾರಿಸಲಾಗಿದೆ. ಈ ಬೋಗಿಗಳು ಗಾಜಿನ ಮೇಲ್ಛಾವಣಿ ಹೊಂದಿದ್ದು, ಇದು ಆಕಾಶದ ಸ್ಪಷ್ಟ ನೋಟಗಳನ್ನು ನೀಡುತ್ತದೆ.

ಕೋಚ್‌ನಲ್ಲಿ ಸಿಸಿಟಿವಿ ಕಣ್ಗಾವಲು, ಅಗ್ನಿ ಶಾಮಕ ಸುರಕ್ಷತಾ ವ್ಯವಸ್ಥೆಗಳು, ಎಲ್‌ಇಡಿ, ಓವನ್ ಮತ್ತು ರೆಫ್ರಿಜರೇಟರ್, ಮಿನಿ ಪ್ಯಾಂಟ್ರಿ, ಮಲ್ಟಿ–ಟೈರ್ಡ್ ಸ್ಟೀಲ್ ಲಗೇಜ್ ಕಪಾಟುಗಳು, ಪ್ರತಿ ಸೀಟಿನಲ್ಲಿ ಮೊಬೈಲ್ ಚಾರ್ಜಿಂಗ್ ಸಾಕೆಟ್‌ಗಳಿವೆ. ಇದಲ್ಲದೆ, ಕೋಚ್ ಸ್ವಯಂಚಾಲಿತ ಟ್ರೈಡಿಂಗ್ ಬಾಗಿಲುಗಳು ಮತ್ತು ಜೈವಿಕ ಶೌಚಾಲಯಗಳನ್ನು ಹೊಂದಿದೆ.

ಈ ಪ್ರಯಾಣವು ಪ್ರವಾಸಿಗರಿಗೆ ಪಶ್ವಿಮ ಘಟ್ಟದ ಪ್ರಕೃತಿಯ ಸೌಂದರ್ಯವನ್ನು ಒದಗಿಸುವ ಜೊತೆಗೆ ಮಾರ್ಗದಲ್ಲಿ ಸುಬ್ರಮಣ್ಯ ದೇವಸ್ಥಾನವೂ ಸಿಗುವುದರಿಂದ ಧಾರ್ಮಿಕ ಅನುಭವವನ್ನು ಒದಗಿಸಿಕೊಡುತ್ತದೆ. ಒಟ್ಟಿನಲ್ಲಿ ಭಾರತೀಯ ರೈಲ್ವೆಯು ಪ್ರಕೃತಿ ಪ್ರಿಯರಿಗೊಂದು ಅತ್ಯುತ್ತಮ ಅವಕಾಶವನ್ನು ಒದಗಿಸಿಕೊಟ್ಟಿದೆ. ಖುದ್ದು ಅನುಭವಿಸಿ, ಆಸ್ವಾದಿಸಿದಾಗಲೇ ನಿಮಗೆ ಈ ಪ್ರಯಾಣ ಎಷ್ಟು ಚಂದವಾಗಿದೆ ಎಂದು ತಿಳಿಯುವುದು. ■



Downloaded From: www.kpscvaani.com



# ಭಾರತ ಸ್ವಾತಂತ್ರ್ಯೋತ್ಸವ

# ಅಮೃತ ಮಹೋತ್ಸವದ ಸಂಭ್ರಮ

## ಒಂದು ಕ್ಷಿಪ್ರ ನೋಟ

**ಇಂಟ್ರೋ -ಭಾರತ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಸಂಭ್ರಮದಲ್ಲಿ ನಾವು ಇದೀಗ ಪಯಣಿಸುತ್ತಿದ್ದೇವೆ. ಬಹು-ಧರ್ಮ, ಬಹು-ಭಾಷೆ ಮತ್ತು ಬಹು-ಸಂಸ್ಕೃತಿಯ ಬೀಡಾಗಿರುವ ಭಾರತವು ಸ್ವಾತಂತ್ರ್ಯಗಳಿಸಿದ ಪರಿಯೇ ರೋಚಕದ ಸಂಗತಿ.**

ಡಿ. ಪಿ. ಮುರಳೀಧರ್

ಶತ ಶತಮಾನಗಳ ಇತಿಹಾಸವಿರುವ ಭಾರತವು ನಾಲ್ಕು ನೂರು ವರ್ಷಗಳ ಮೊಘಲರ ಆಳ್ವಿಕೆ ಹಾಗೂ ಎರಡು ನೂರು ವರ್ಷಗಳ ಬ್ರಿಟೀಷರ ದಬ್ಬಾಳಿಕೆಯ ನಂತರವು ಸ್ವಾತಂತ್ರ್ಯ ಪಡೆದ ವೀರೋಚಿತ ಚರಿತೆ ಇಂದಿಗೂ ನಮ್ಮ ನರನಾಡಿಗಳಲ್ಲಿ ಸಂಚಲನ ಮೂಡಿಸುತ್ತದೆ.

ಸತ್ಯದ ತಳಹದಿಯಲ್ಲಿ, ಧರ್ಮದ ಚೌಕಟ್ಟಿನಲ್ಲಿ ಹಾಗೂ ನ್ಯಾಯದ ನಿಲುವಿನಲ್ಲಿ 1857 ರಲ್ಲಿ ಪುಟಿದೆದ್ದ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ 90 ವರ್ಷಗಳ ನಿರಂತರ ಹೋರಾಟದ ನಂತರ ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು ಎಂಬುದು ಇದೀಗ ಇತಿಹಾಸ.

ಸ್ವ-ರಾಜ್ಯ ಮತ್ತು ಸ್ವ-ದೇಶಿ ಎಂಬ ಸಾರ್ವತ್ರಿಕ ಕರೆ ಕೊಟ್ಟು, ಸ್ವಾತಂತ್ರ್ಯ ನನ್ನ ಆಜನ್ಮ ಸಿದ್ಧ ಹಕ್ಕು ಎಂಬ ರಣ ಕಹಳೆಯ ಮೊಳಗಿಸಿ, ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿದ ಲೋಕಮಾನ್ಯ ಬಾಲಗಂಗಾಧರ್ ತಿಲಕ್ ಅವರು ಗಣೇಶ ಚತುರ್ಥಿ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕ ಗಣಪತಿ ಪ್ರತಿಷ್ಠಾಪನೆ ಹಾಗೂ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಿದರು. ಅಲ್ಲದೆ, ಆಂಗ್ಲರ ಆಡಳಿತಕ್ಕೆ ಅಂತ್ಯ ಕಾಣಿಸಲು ರಸ್ತೆ-ರಸ್ತೆಗಳಲ್ಲಿ ಯುವ ಸಮೂಹದ ವಿಶೇಷ ವೇದಿಕೆಗಳನ್ನು ಸೃಷ್ಟಿಸಲು ಕಾರಣರಾದರು.

ಭಾರತ ಸ್ವಾತಂತ್ರ್ಯಕ್ಕೆ ಯುವ ಜನರ ಕೊಡುಗೆಯೂ ಅನನ್ಯ, ಅಪಾರ ಮತ್ತು ಅಗಾಧ. ಭಗತ್‌ಸಿಂಗ್, ಶಿವರಾಮ್ ರಾಜ್‌ಗುರು ಮತ್ತು ಸುಖದೇವ್ ಎಂಬ ಮೂವರು ಯುವಕರ ತ್ಯಾಗವನ್ನು ಭಾರತವು ಎಂದೂ ಮರೆಯುವಂತಿಲ್ಲ. ಇಂಕ್ವಿಲಾಬ್ ಜಿಂದಾಬಾದ್ ಎಂಬ ಭಗತ್ ಸಿಂಗ್ ಅವರ ಘೋಷಣೆ ಇಂದಿಗೂ ಮೈ ನವಿರೇಳಿಸುವಂತಹುದು.

"ಬ್ರಿಟೀಷರು ನನ್ನನ್ನು ಕೊಲ್ಲಬಹುದು. ಆದರೆ, ನನ್ನ ವಿಚಾರ ಧಾರೆಯನ್ನು ಕೊಲ್ಲಲು ಅವರಿಂದ ಸಾಧ್ಯವಿಲ್ಲ. ಅವರು ನನ್ನ ದೇಹವನ್ನು ಬಡಿದು ಜಜ್ಜಬಹುದು. ಆದರೆ, ನನ್ನಲ್ಲಿನ ಪ್ರೇರಣಾ ಶಕ್ತಿಯನ್ನು ಎಂದಿಗೂ ಕುಂದಿಸಲು ಸಾಧ್ಯವೇ ಇಲ್ಲ"



Downloaded From: www.kpscvaani.com



ಎಂಬ ಶಾಹೀದ್ ಭಗತ್ ಸಿಂಗ್ ಅವರ ಮಾತುಗಳು ಅವರಲ್ಲಿನ ರಕ್ತದ ಕಣಕಣದಲ್ಲೂ ಸ್ವಾತಂತ್ರ್ಯದ ಕಿಚ್ಚು ಇತ್ತು ಎಂಬುದನ್ನು ಸಾಬೀತುಪಡಿಸುವಂತಹುದು.

ಕ್ರಾಂತಿಯಿಂದಲೇ ಸ್ವಾತಂತ್ರ್ಯ ಎಂದು ಪ್ರತಿಪಾದಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರಿಗೂ ಸಮಪಾಲು ಇದೆ ಎಂದು ಪ್ರಕಟಿಸಿ ಇಂಡಿಯನ್ ನ್ಯಾಷನಲ್ ಆರ್ಮಿ ಎಂದೇ ಕರೆಯಲ್ಪಡುತ್ತಿದ್ದ ಆಜಾದ್ ಹಿಂದ್ ಫೌಜ್ ಸೈನ್ಯದಲ್ಲಿ ಮಹಿಳೆಯರಿಗೂ ಅವಕಾಶ ಕಲ್ಪಿಸಿದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಜೈ ಹಿಂದ್ ಎಂಬ ಘೋಷಣೆಯ ಮೂಲಕ ಎಲ್ಲರನ್ನೂ ಒಗ್ಗೂಡಿಸಲು ಮುಂದಾಗಿ ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ವೇಗ ತರಲು ಪ್ರಯತ್ನಿಸಿದ್ದು ಗಮನಾರ್ಹ.



ಬ್ರಿಟೀಷರ ಗುಲಾಮಗಿರಿಯಲ್ಲಿದ್ದ ಭಾರತವನ್ನು ದಾಸ್ಯದಿಂದ ಮುಕ್ತಗೊಳಿಸಲು ಭಾರತ ಸ್ವಾತಂತ್ರ್ಯದ ಹೋರಾಟಕ್ಕೆ ಅಹಿಂಸಾ ಮಾರ್ಗವನ್ನು ತೋರಿದ್ದು ಹಾಗೂ ಸತ್ಯಾಗ್ರಹ ಎಂಬ ಪ್ರತಿಭಟನಾ ಚಳವಳಿಯನ್ನು ಈ ಜಗತ್ತಿಗೆ ಪರಿಚಯಿಸಿದ್ದು ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ.

ಲಂಡನ್‌ನಲ್ಲಿ ಬಾರ್-ಆಟ್-ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ದಕ್ಷಿಣ ಆಫ್ರಿಕಾದಲ್ಲಿ ವಕೀಲರಾಗಿ ಹಣ ಮತ್ತು ಹೆಸರು ಸಂಪಾದಿಸಲು ವಿಪುಲ ಅವಕಾಶವಿದ್ದರೂ, ಭಾರತದ ಬಡ ಜನತೆಯ ಕಷ್ಟ-ಸಂಕಷ್ಟಗಳನ್ನು ಕಂಡು ಮರುಗಿ, ತಾವು ಧರಿಸುತ್ತಿದ್ದ ಸೂಟು-ಬೂಟುಗಳನ್ನು ತ್ಯಜಿಸಿ ಅರೆ ಬಟ್ಟೆಯನ್ನು ತೊಟ್ಟು, ಹರಿಜನ್ ಮತ್ತು ಯಂಗ್ ಇಂಡಿಯಾ ಎಂಬ ತಮ್ಮ ಪತ್ರಿಕೆಗಳಲ್ಲಿ ಪೂರಕ ಸಂದೇಶಗಳನ್ನು ಪ್ರಕಟಿಸಿ ಸ್ವಾತಂತ್ರ್ಯ ಚಳುವಳಿಗೆ ಪುಷ್ಟಿ ನೀಡಿದ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಅವರನ್ನು ರಾಷ್ಟ್ರಪಿತ ಎಂದು ಕರೆದದ್ದು ನೇತಾಜಿ ಸುಭಾಷ್‌ಚಂದ್ರ ಬೋಸ್ ಹಾಗೂ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಅವರನ್ನು ಮಹಾತ್ಮ ಎಂದು ಬಣ್ಣಿಸಿದ್ದು ಭಾರತಕ್ಕೆ ಜನ ಗಣ ಮನ ಹಾಗೂ ಬಾಂಗ್ಲಾದೇಶಕ್ಕೆ ಅಮರ್ ಸೋನಾರ್ ಬಾಂಗ್ಲಾ ಹೆಸರಿನ ರಾಷ್ಟ್ರಗೀತೆಯ ಕೊಟ್ಟ ಗುರುದೇವ್ ರವೀಂದ್ರನಾಥ್ ಠ್ಯಾಗೂರ್.

ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವ ಎನಿಸಿದ ಭಾರತಕ್ಕೆ ಉತ್ಕೃಷ್ಟ ಮಟ್ಟದ ಲಿಖಿತ ಸಂವಿಧಾನವನ್ನು ಕೊಟ್ಟ ಸಂವಿಧಾನ ಶಿಲ್ಪಿ ಡಾ ಬಿ. ಆರ್. ಅಂಬೇಡ್ಕರ್ ಅವರ ಕೊಡುಗೆ ಕೂಡಾ ಬಲಿಷ್ಠ ಭಾರತದ ನಿರ್ಮಾಣಕ್ಕೆ ಇಂಬುಕೊಟ್ಟಿದೆ.

ಬ್ರಿಟೀಷರ ವಿರುದ್ಧ ಸೆಟೆದು ನಿಂತು ತ್ಯಾಗ ಬಲಿದಾನಗಳನ್ನು ಮಾಡಿದವರಲ್ಲಿ ಕೋಟ್ಯಾಂತರ ಮನಸ್ಸುಗಳಿವೆ. ಲಕ್ಷಾಂತರ ಮಹನೀಯರ ಹೆಸರುಗಳಿವೆ. ಇದೇ ಸಂದರ್ಭದಲ್ಲಿ, ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ನೀಡಿ ರೊಟ್ಟಿಯ ತಟ್ಟಿ ಕೊಟ್ಟ ಸಾವಿರಾರು ತಾಯಂದಿರ ಸೇವೆಯನ್ನೂ ಕೂಡಾ ಯಾರೂ ಉಪೇಕ್ಷಿಸಲಾಗದು.

ಅಂದು 1947 ರ ಆಗಸ್ಟ್ 15 ರಂದು ಬೆಳಿಗ್ಗೆ ದೆಹಲಿಯ ಕೆಂಪು ಕೋಟೆಯಲ್ಲಿ ಧ್ವಜಾರೋಹಣ ನಡೆದ ಸುಸಂದರ್ಭ. ಭೂಮಿಗೆ ತುಂತುರು ಮಳೆಯ ಸ್ಪರ್ಶ ! ಆಗಸದಲ್ಲಿ ಮೂಡಿದ ಇಂದ್ರ ಧನುಸ್ಸಿನ ಚಿತ್ತಾರ ! ನೆರೆದ ಜನಸ್ತೋಮದಲ್ಲಿ ಮುಗಿಲು ಮುಟ್ಟಿದ ಹರ್ಷೋದ್ಗಾರ ! ಇವೆಲ್ಲಕ್ಕೂ ಇದೀಗ 75 ಸಂಭ್ರಮ.

ಭಾರತದ ಮೊದಲ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರಿಂದ ರಾಮ್‌ನಾಥ್ ಕೋವಿಂದ್ ಅವರವರೆಗೆ 14 ಪೂರ್ಣ ಪ್ರಮಾಣದ ರಾಷ್ಟ್ರಪತಿಗಳು ಹಾಗೂ ಭಾರತದ ಮೊದಲ ಪ್ರಧಾನ ಮಂತ್ರಿ ಪಂಡಿತ್ ಜವಾಹರ ಲಾಲ್ ನೆಹರೂ ಅವರಿಂದ ನರೇಂದ್ರ ದಾಮೋದರ್‌ದಾಸ್ ಮೋದಿ ಅವರವರೆಗೆ 14 ಪೂರ್ಣ ಪ್ರಮಾಣದ ಪ್ರಧಾನ ಮಂತ್ರಿಗಳು ಭಾರತವನ್ನು ಮುನ್ನಡೆಸಿದ್ದಾರೆ. ಅಭಿವೃದ್ಧಿಯ ನಕ್ಷೆಯಲ್ಲಿ ಸಮೃದ್ಧಿಯ ಕಕ್ಷೆಯಲ್ಲಿ ಭಾರತಕ್ಕೆ ವಿಶಿಷ್ಟ ಸ್ಥಾನಮಾನವನ್ನು ದೊರಕಿಸಿಕೊಡುವಲ್ಲಿ ವಿಶೇಷವಾಗಿ ಶ್ರಮಿಸಿದ್ದಾರೆ ಎಂಬುದನ್ನೂ ಈ ಸಂದರ್ಭದಲ್ಲಿ ಸ್ಮರಿಸುವುದು ಸೂಕ್ತ.



Downloaded From: www.kpscvaani.com



# ತಾಯಿ ಭಾರತಿಗೆ

# ಅಮೃತ ಚೇತನ..

**ತಾಯಿ ಭಾರತಿಗೆ ತೊಡರಿಕೊಂಡಿದ್ದ ಎಲ್ಲ ವಿಷ ಬಳ್ಳಿಗಳನ್ನು ಒಂದೊಂದಾಗಿ ಸವರಿ, ಕಿತ್ತೆಸೆದು, ಅಮೃತ ಚೇತನ ಮಾಡಿಸಿ ಎಪ್ಪತ್ತೈದು ವರ್ಷಗಳಾಗಿ ಹೋದವು. ಬ್ರಿಟಿಷರ ಮತ್ತು ರಾಜ-ಮಹಾರಾಜರ ಮುಷ್ಟಿಯಲ್ಲಿದ್ದ ಪ್ರಭುತ್ವವನ್ನು, ಪ್ರಜೆಗಳ ಕೈಗಿಟ್ಟ ಸಂಭ್ರಮಕ್ಕೀಗ ಅಮೃತ ಮಹೋತ್ಸವದ ಕಿರೀಟ.**

ಟಿ. ಗುರುರಾಜ್

ಸತ್ಯಾಗ್ರಹ, ಚಳವಳಿ, ಹರತಾಳ, ಅಹಿಂಸೆ, ತ್ಯಾಗ, ಬಲಿದಾನಗಳನ್ನೇ ಸುದರ್ಶನ ಚಕ್ರವನ್ನಾಗಿಸಿ, ಯುದ್ಧ–ರಕ್ತಪಾತಗಳೇ ಇಲ್ಲದಂತೆ ಶಾಂತಿಯನ್ನೇ ಬೀಜಮಂತ್ರವನ್ನಾಗಿಸಿ ಶತ–ಶತಮಾನಗಳ ಬ್ರಿಟಿಷ್ ದಾಸ್ಯವನ್ನು ಕೊನೆಗಾಣಿಸಿದ ಗಾಂಧಿ ಎಂಬ ಗಾರುಡಿಗನ ನೆನಪಿನಲ್ಲಿ ಭಾರತಾಂಬೆಗೆ ಅಮೃತ ಚೇತನ ತೊಡಿಸುವ ಖುಷಿಯನ್ನು ಇಡೀ ದೇಶ ಸವಿಯುತ್ತಿದೆ.

ಸರ್ವತಂತ್ರ ಸ್ವತಂತ್ರ ಭಾರತಕ್ಕೀಗ ಎಪ್ಪತ್ತೈದರ ಹಿರಿತನ. ದೇಶವಾಸಿಗಳ ಅವಿರತ ಹೋರಾಟದ ಫಲವಾಗಿ ದಕ್ಕಿದ ಭಾರತದಲ್ಲೀಗ ಅಮೃತ ಮಹೋತ್ಸವದ ಸಡಗರ. ನಡುರಾತ್ರಿಯಲ್ಲಿ ದೊರೆತ ಬೆಳಕಿನ ಕಿರಣಗಳೀಗ ರಾಷ್ಟ್ರವ್ಯಾಪೀ ಹರಡಿಕೊಂಡು, ಹೊಸತನದ ಹೊಸ ಗಾಳಿಯನ್ನು ಹೊಮ್ಮಿಸುತ್ತಿವೆ.

ಭಾರತ ಸ್ವಾತಂತ್ರ್ಯಕ್ಕೆ ಎಪ್ಪತ್ತೈದರ ಹಿರಿತನ ದಕ್ಕಿದೆಯಾದರೂ, ಈ ಹೋರಾಟದ ಕಥೆಗೆ ಹತ್ತಿರತ್ತಿರ ಮುನ್ನೂರು ವರುಷಗಳ ಸುದೀರ್ಘ ಇತಿಹಾಸವಿದೆ. 1611ರಲ್ಲಿ ಸೂರತ್ ಬಂದರಿಗೆ ಬಂದಿಳಿದು, ನಿಧಾನವಾಗಿ ಬೀಡುಬಿಟ್ಟು, 1619ರಲ್ಲಿ ಆಗ್ರಾಕ್ಕೆ ಹೆಜ್ಜೆಗಳನ್ನಿಕ್ಕಿ, ಚಕ್ರವರ್ತಿ ಜಹಾಂಗೀರ್ ಬಳಿ ವ್ಯಾಪಾರದ ಭಿಕ್ಷೆ ಪಡೆದುಕೊಂಡು ನೆಲೆನಿಂತ ಬ್ರಿಟಿಷರು, ಹಂತ–ಹಂತವಾಗಿ ಇಡೀ ದೇಶವನ್ನೇ ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದು ಚರಿತ್ರೆಯ ಅತಿ ರೋಚಕ ಅಧ್ಯಾಯ.

ಸೇರು–ತಕ್ಕಡಿಗಳನ್ನಿಡಿದು ಭಾರತಕ್ಕೆ ಬಂದ ಇಂಗ್ಲೀಷರು, ದೇಶೀಯರ ಒಳ ಜಗಳ, ಸ್ವಾರ್ಥ ಮತ್ತು ಹಣದಾಹದ ಲಾಭಗಳನ್ನು ಪಡೆದುಕೊಳ್ಳುತ್ತಲೇ ಈ ನೆಲದಾಳಕ್ಕೆ ಬೇರುಗಳನ್ನು ಇಳಿಬಿಟ್ಟು ಬೆಳೆದು, ಮೂರು ಶತಮಾನಗಳಿಗೂ ಹೆಚ್ಚು ಕಾಲ ಭಾರತವನ್ನು ಕಂಗೆಡಿಸಿದ್ದು, ಅತಿದೊಡ್ಡ ಚರಿತ್ರೆ..

ವಿಷಯದ ಹರಹು ದೊಡ್ಡದಿರುವ ಕಾರಣದಿಂದಾಗಿ ಸ್ವಾತಂತ್ರ್ಯ ಚಳವಳಿಯ ವಿಸ್ತಾರವನ್ನು, ಮೊದಲ ಬ್ರಿಟಿಷ್ ಭಾರತ ಸಂಗ್ರಾಮದಿಂದಾರಂಭಿಸಿ 1942ರ ವರೆಗಿನ ಭಾರತ ಬಿಟ್ಟು ತೊಲಗಿ ಚಳವಳಿಯವರೆಗೆ ಹಾಗೂ 1947ರ ಆಗಸ್ಟ್ 15ರವರೆಗೆ ಸಂಕ್ಷಿಪ್ತವಾಗಿ ಹೇಳುವ ಪ್ರಯತ್ನ ಇಲ್ಲಿದೆ.

ಭಾರತದ ಚರಿತ್ರೆಯನ್ನು ಹಲವರು, ಹಲವು ರೀತಿಗಳಲ್ಲಿ ದಾಖಲಿಸಿದ್ದಾರೆ. ಈ ಸಾಲಿನಲ್ಲಿ ಬ್ರಿಟಿಷರಿಗೇ ಸಿಂಹಪಾಲು. ಬ್ರಿಟಿಷರು ಅವರ ಭಾಷೆಯಲ್ಲಿ, ಅವರ ದೃಷ್ಟಿಕೋನದೊಂದಿಗೆ, ಅವರ ಹಿತಾಸಕ್ತಿಗನುಗುಣವಾಗಿ ಬರೆದಿಟ್ಟರು. ಬಿಳಿಯರ ಧೋರಣೆಯಿಂದ ಕೂಡಿದ್ದ ಈ ಭಾರತೀಯ ಚರಿತ್ರೆ, ಸ್ವಾಭಾವಿಕವಾಗಿಯೇ ದೇಶೀಯರ





Downloaded From: www.kpscvaani.com

ಬಗ್ಗೆ ಪೂರ್ವಾಗ್ರಹಪೀಡಿತವಾಗಿತ್ತಲ್ಲದೆ, ಭಾರತೀಯರನ್ನು ಕೀಳಾಗಿ ಕಾಣುವ ಅವಗುಣಗಳನ್ನೇ ಪ್ರಧಾನವಾಗಿರಿಸಿಕೊಂಡಿತ್ತು. ಭಾರತ ಸ್ವಾತಂತ್ರ್ಯ ಚರಿತ್ರಾ ರಚನೆಯ ಈ ಕಾಲಘಟ್ಟವನ್ನು ಕೇಂಬ್ರಿಡ್ಜ್ ಪಂಥೀಯ ಇತಿಹಾಸ ಎಂದೇ ಗುರುತಿಸಲಾಗುತ್ತಿದೆ.

ಎರಡನೆಯ ಹಂತದಲ್ಲಿ ರಾಷ್ಟ್ರೀಯ ದೃಷ್ಟಿಕೋನವನ್ನಿಟ್ಟುಕೊಂಡು, ಭಾರತೀಯರಿಂದ ಭಾರತೀಯ ಹಿತಾಸಕ್ತಿಗಳ ರಕ್ಷಣೆಗೆ ಅನುಗುಣವಾಗಿ ರಚಿಸಲ್ಪಟ್ಟ ಇತಿಹಾಸವೊಂದು ಸಿದ್ಧಗೊಂಡಿತು. ನಮ್ಮದೇ ನೆಲದ, ನಮ್ಮದೇ ಕಥೆಯಿಲ್ಲಿ ರಾಷ್ಟ್ರೀಯವಾದ ಮತ್ತು ಪ್ರಾಚೀನ ದೇಶಭಕ್ತಿಗಳ ಪ್ರತೀಕವಾಗಿಯೇ ಪಡಿಮೂಡಿತು.

ದಾದಾಬಾಯಿ ನವರೋಜಿಯವರಂತಹ ಅಧ್ವರ್ಯುಗಳ ನೇತೃತ್ವದಲ್ಲಿ, ಆರ್.ಸಿ.ದತ್, ಬಾಲಗಂಗಾಧರ ತಿಲಕ್‌ರಂಥವರ ಮುಂಚೂಣಿ ನಾಯಕತ್ವದಲ್ಲಿ ದೇಶದ ದಾಸ್ಯ ವಿಮೋಚನೆಯನ್ನೇ ಹೆಗ್ಗುರಿಯನ್ನಾಗಿ ಹೊಂದಿದ್ದ ಈ ಎರಡನೆಯ ಹಂತದ ಇತಿಹಾಸ ದಾಖಲೀಕರಣಕ್ಕೆ ಮುಂದಾಗಲಾಯಿತು. ಇಲ್ಲಿ ಕೆಲವೊಮ್ಮೆ ಅತಿಶಯೋಕ್ತಿ ಎನ್ನಬಹುದಾದಷ್ಟು ಅತಿರೇಕದ ಆವೇಶಗಳೂ ಕಾಣಿಸಲ್ಪಟ್ಟಿವೆಯಾದರೂ, ಇವು ಅಪ್ಪಟ ಭಾರತೀಯ ಮನಸ್ಸುಗಳ ಕಾಣ್ಕೆ ಎಂಬಂತೆಯೇ ಬಿಂಬಿಸಲ್ಪಟ್ಟಿವೆ.

ಸ್ವಾತಂತ್ರ್ಯಾ ನಂತರದಲ್ಲಿಯೂ ಭಾರತ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು ವಸ್ತುನಿಷ್ಠ ನೆಲೆಯಿಂದ ಗ್ರಹಿಸಿ, ಪುನರ್ ರಚಿಸುವ ಗಂಭೀರ ಪ್ರಯತ್ನ ನಡೆಸಲಾಯಿತು. ಬಿಪಾನ್‌ಚಂದ್ರ, ಇರ್ಫಾನ್ ಹಬೀಬ್‌ರಂತಹ ಖ್ಯಾತನಾಮರು ಮಾರ್ಕ್ಸ್‌ವಾದದ ಹಂಗಿನಲ್ಲಿ ಆರ್ಥಿಕ ದೃಷ್ಟಿಕೋನದಿಂದ ಅವಲೋಕನಕ್ಕೆ ಮುಂದಾದರು.

ಇದಕ್ಕೂ ಮುಂದುವರೆದ ಹಂತದಲ್ಲಿ ಇಟಲಿಯ ಅಂಟಾನಿಯೋ ಗ್ರಾಮ್ಸಿ ಆರಂಭಿಸಿದ ಕೆಳಸ್ತರ (ಸಬ್‌ಅಲ್ಟನ್) ಪಂಥವನ್ನು ಅನುಸರಿಸಿದ ಆಸ್ಟ್ರೇಲಿಯಾ ಮೂಲದ ಭಾರತೀಯ ಇತಿಹಾಸಕಾರ ರಣಜಿತ್ ಗುಹಾ, ಜನ ಸಾಮಾನ್ಯರ ದೃಷ್ಟಿಕೋನದಿಂದ ಸ್ವತಂತ್ರ್ಯ ಭಾರತದ ಚಾರಿತ್ರಿಕ ಘಟನೆಗಳನ್ನು ವಿವೇಚಿಸುವ ಗಂಭೀರ ಪ್ರಯತ್ನ ಮಾಡಿದ್ದಾನೆ. ಹಾಗಾಗಿ ಈ ಹೊತ್ತು ಇದೇ ಮಾದರಿ ಜನಪ್ರಿಯತೆಯನ್ನೂ ಗಳಿಸುತ್ತಿದೆ.

ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು ಎಲ್ಲಿಂದ ಪರಿಗ್ರಹಿಸಬೇಕೆಂಬ ಸಂಗತಿಯೂ ಸಹ ಇಲ್ಲಿ ಮುಖ್ಯವಾಗುತ್ತದೆ. ಬ್ರಿಟಿಷರ ವಿರುದ್ಧ ಹೋರಾಡುತ್ತಲೇ ಪ್ಲಾಸಿ ಯುದ್ದದಲ್ಲಿ ಜೂನ್ 23–1757ರಲ್ಲಿ ಹುತಾತ್ಮನಾದ ಬಂಗಾಲದ ನವಾಬ ಸಿರಾಜುದ್ದೀದೌಲನೇ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ ಎಂದು ಪರಿಗಣಿಸುವ ವಿಚಾರವೂ ಚಾಲ್ತಿಯಲ್ಲಿದೆ. ಹಾಗೆಯೇ ಸರಿ ಸುಮಾರು ಐವತ್ತು ವರ್ಷಗಳ ಕಾಲ (1750–1799) ಯುದ್ದರಂಗದಲ್ಲೇ ಬ್ರಿಟಿಷರೊಂದಿಗೆ ಸತತವಾಗಿ ಹೋರಾಡಿ ಹತರಾದ ಹೈದರ್–ಟಿಪ್ಪು ಅವರನ್ನೂ ಸಹ ಸ್ವಾತಂತ್ರ್ಯ ಹೋರಾಟದ ಮುಂಚೂಣಿಗರೆಂದೇ ಹಲವು ಇತಿಹಾಸಕಾರರು ಗುರುತಿಸುತ್ತಾರೆ.

ನಂತರ ಮಂಜರಾಬಾದಿನಿಂದ ಮಲಬಾರಿನತನಕ ಬ್ರಿಟಿಷ್ ವಿರೋಧಿ ಬಂಡಾಯದ ಬಾವುಟ ಹಾರಿಸಿದ ಟಿಪ್ಪು ಅನುಯಾಯಿ ದೋಂಡಿಯಾ ವಾಘ್ ಕೂಡಾ ಸ್ವಾತಂತ್ರ್ಯ ಹೋರಾಟಗಾರ ಎನ್ನುವ ಮಂದಿ ಇದ್ದಾರೆ. ಬ್ರಿಟಿಷರ ವಿರುದ್ಧ ಬಂಡಾಯವೆಸಗಿದ ತಿರುವಾಂಕೂರಿನ ವೇಲುತಂಬಿ, ಕೊಡಗಿನ ಅಪರಂಪರ ಮತ್ತು ಕಲ್ಯಾಣಸ್ವಾಮಿ, ಕಿತ್ತೂರಿನ ರಾಣಿ ಚೆನ್ನಮ್ಮ, ಆಕೆಯ ಭಂಟ ಸಂಗೊಳ್ಳಿ ರಾಯಣ್ಣನನ್ನೂ ಸ್ವಾತಂತ್ರ್ಯ ಹೋರಾಟಗಾರರೆಂದು ಗುರುತಿಸುವ ಬರವಣಿಗೆಗಳಿವೆ.

ಅಲ್ಲದೆ ಅಸಂಘಟಿತ ರೈತ ಹೋರಾಟಗಳು. ಉದಾಹರಣೆಗೆ ಟಿಪ್ಪು ಪತನೋತ್ತರ ಕಾಲದಲ್ಲಿ ಮಲಬಾರಿಗೆ ಹಿಂದಿರುಗಿದ ನಂಬೂದರಿ–ನಾಯರ್ ಜಮೀನುದಾರರ ವಿರುದ್ಧ ರೈತ ಮಾಪಿಳ್ಳೆಗಳು ನಡೆಸಿದ ಸುದೀರ್ಘ ಹೋರಾಟ(1799ರ ಅಂತ್ಯದಿಂದ 1831) ಕೋಲಾ ದಂಗೆ ( ಮಧ್ಯಪ್ರದೇಶ) ಭಿಲ್ಲರ ದಂಗೆಗಳೂ ಕೂಡಾ ಸ್ವಾತಂತ್ರ್ಯ ಹೋರಾಟದ ಭಾಗಗಳನ್ನಾಗಿ ಕಾಣುವ ಚಿಂತನೆಗಳು ಇಂದಿಗೂ ಜೀವಂತವಾಗಿವೆ.

ಬ್ರಿಟಿಷರಿಂದ ಆದ ಅರಣ್ಯಾಕ್ರಮಣ ಮತ್ತು ಆದಿವಾಸಿಗಳು ಬಳಸುತ್ತಿದ್ದ ಪಾರಂಪರಿಕ ಬಿಲ್ಲು–ಬಾಣ, ಬತ್ತಳಿಕೆಗಳ ವಿರುದ್ಧ ಅವರು ಜಾರಿಗೊಳಿಸಿದ ನಿಷೇಧ ನಿಯಮಗಳು ಆದಿವಾಸಿಗಳನ್ನು ಕೂಡಾ ಬ್ರಿಟಿಷರ ವಿರುದ್ಧ ಎರಗಿ ಬೀಳುವಂತೆ ಮಾಡಿದ್ದವೆಂಬುದು ಕೂಡಾ ಬ್ರಿಟಿಷ್–ಭಾರತ ಸಂಗ್ರಾಮದ ಸೂಚಕಗಳೆ ಎಂಬುದನ್ನು ಮರೆಯುವಂತಿಲ್ಲ.



**ಕ್ರಾಂತಿಕಾರಿ ಹೋರಾಟಗಾರರೆಂದೇ ಗುರುತಿಸಿಕೊಂಡ ಭಗತ್‌ಸಿಂಗ್, ರಾಜಗುರು, ಚಂದ್ರಶೇಖರ ಆಜಾದ್ ಮತ್ತು ಸುಖ್‌ದೇವ್ ರಂಥವರು ನೇಣಿಗೆ ಕೊರಳೊಡ್ಡಿ ಹುತಾತ್ಮರಾಗಿ ಸ್ವಾತಂತ್ರ್ಯದ ಹಣತೆಗೆ ತೈಲಗಳಾದರು.**


Downloaded From: www.kpscvaani.com

ಮುಂದಿನದು 1857ರ ಹೋರಾಟದ ಘಟ್ಟ. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಡಾಲ್‌ಹೌಸಿಯ ನಿಯಮದಿಂದಾಗಿ ಹೊಸದೊಂದು ಆಸ್ಫೋಟವೇ ಸಂಭವಿಸಿತು. ಮಹಾರಾಷ್ಟ್ರದ ಸತಾರಾ, ಮಧ್ಯಪ್ರದೇಶದ ಝಾನ್ಸಿ, ಕಾನ್ಪುರ ಇದಕ್ಕೆ ಬಲಿಯಾದವು. ಸಾಂಪ್ರದಾಯಿಕ ಸಂಸ್ಥಾನಧಿಕಾರವನ್ನು ಅನುಭವಿಸುತ್ತಿದ್ದ ಈ ಪ್ರದೇಶಗಳು, ಬ್ರಿಟಿಷರ ವಿರುದ್ಧ ಬಂಡೇಳುವುದಕ್ಕೆ ಈ ಸಮಯವನ್ನು ಬಳಕೆ ಮಾಡಿಕೊಂಡವು.

ಇದರೊಂದಿಗೆ ಭಾರತ-ಬ್ರಿಟಿಷ್ ಸೈನ್ಯದಲ್ಲಿ ಉರಿಯುವ ಅನೇಕಾನೇಕ ಸಮಸ್ಯೆಗಳಿದ್ದುದು ಮಾತ್ರವಲ್ಲ, ತಾರತಮ್ಯವೂ ಅಗಾಧ ಪ್ರಮಾಣದಲ್ಲಿತ್ತು. ಎರಡು ಲಕ್ಷದ ಮೂವತ್ತಮೂರು ಸಾವಿರದ ಇನ್ನೂರ ಇಪ್ಪತ್ತನಾಲ್ಕು ಮಂದಿಯ ಸೈನ್ಯ ಬಲವಿದ್ದ ಬ್ರಿಟಿಷ್ ಪಾಳೆಯದಲ್ಲಿ ಒಂದು ಲಕ್ಷದ ಎಂಬತ್ತೇಳು ಸಾವಿರದ ಒಂಬೈನೂರ ತೊಂಬತ್ತು ಮಂದಿ ಭಾರತೀಯರೇ ಇದ್ದರು. ಉಳಿದ ನಲವತ್ತೈದು ಸಾವಿರದ ಇನ್ನೂರಮೂವತ್ನಾಲ್ಕು ಮಂದಿ ಮಾತ್ರವೇ ಬ್ರಿಟಿಷ್ ಸಂಜಾತರಾಗಿದ್ದರು. ಅದರಲ್ಲಿಯೂ ಹಿರಿಯ ಶ್ರೇಣಿ ಅಧಿಕಾರಯುತ ಹುದ್ದೆಗಳೆಲ್ಲವೂ ಬ್ರಿಟಿಷರಿಗೆ ಸಂಪೂರ್ಣವಾಗಿ ಮೀಸಲಾಗಿದ್ದವು. ಇದು ಅಸಮಧಾನಕ್ಕೆ ಮುಖ್ಯ ಕಾರಣವಾಯಿತು.

ಪ್ರತಿ ಐವರು ಭಾರತೀಯ ಸೈನಿಕರ ಮೇಲ್ವಿಚಾರಣೆಗೆ ಓರ್ವ ಆಂಗ್ಲ ಅಧಿಕಾರಿಯನ್ನು ನಿಯೋಜಿಸಲಾಗಿತ್ತಲ್ಲದೆ, ಕಟ್ಟುನಿಟ್ಟಾದ ಸೈನಿಕ ನೀತಿಯನ್ವಯ ಹೇಳಿದಲ್ಲಿಗೆ ತೆರಳಿ ಯುದ್ಧ ಮಾಡಬೇಕಾದುದು ಕಡ್ಡಾಯವಾಗಿತ್ತು. ಬರ್ಮಾ ಮತ್ತು ಆಫ್ಘಾನ್ ಯುದ್ಧಗಳು ಜರುಗಿದ ಸಂದರ್ಭದಲ್ಲಿ ಅಲ್ಲಿಗೆ ತೆರಳಲು ಭಾರತೀಯ ಸೈನ್ಯ ನಿರಾಕರಿಸಿ ಪ್ರತಿಭಟಿಸಿದಾಗ ಕಡ್ಡಾಯ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಲಾಯಿತು. ಭಾರತೀಯ ಸೈನಿಕರು ಪರದೇಶಗಳಿಗೆ ತೆರಳಿ ಯುದ್ಧಮಾಡಿ, ಪ್ರಾಣ ಕಳೆದುಕೊಳ್ಳುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದೂ ಸಹ ಭಾರತೀಯ ಬ್ರಿಟಿಷ್ ಪ್ರಭುತ್ವ ವಿರೋಧಿ ಹೋರಾಟದ ಒಂದು ಹಂತವೆಂದು ದಾಖಲಾಯಿತು.

ಈ ನಡುವೆ ಬ್ರಿಟಿಷರು ಎನ್‌ಫೀಲ್ಡ್ ಬಂದೂಕುಗಳನ್ನು ಬಳಸಲಾರಂಭಿಸಿದರು. ಅದಕ್ಕೆ ತುಂಬುವ ತೋಟಾದ (ಗುಂಡು)ಕವಚಕ್ಕೆ ಗೋವು ಮತ್ತು ಹಂದಿಯ ಕೊಬ್ಬನ್ನು ಸವರಲಾಗಿದೆ ಎಂಬ ಪುಕಾರು ಹಿಂದೂ-ಮುಸ್ಲಿಮರೇ ಅಧಿಕವಾಗಿದ್ದ ಸೈನ್ಯ ವಲಯದಲ್ಲಿ ಆಕ್ರೋಶವನ್ನುಂಟುಮಾಡಿತು. ಬ್ರಿಟಿಷರು ಗೊತ್ತೋ-ಗೊತ್ತಿಲ್ಲದೆಯೋ ಎಲಿಚ್‌ಪುರ, ಢಂಢಂ ಮತ್ತು ಅಂಬಾಲ ಶಸ್ತ್ರಾಗಾರಗಳಲ್ಲಿ ಈ ಪ್ರಮಾದವನ್ನೆಸಗಿದ್ದು ಕೂಡಾ ಸಾಬೀತಾಯಿತು.

ಪ್ರತಿಭಟನೆ ವ್ಯಕ್ತಪಡುತ್ತಿದ್ದಂತೆ ಕೊಬ್ಬಿನ ಬಳಕೆಯನ್ನು ನಿಲ್ಲಿಸಲಾಯಿತಾದರೂ, ಪರಿಸ್ಥಿತಿ ಕೈಮೀರಿಹೋಗಿತ್ತು. 1834ರಲ್ಲಿ ಬಂಗಾಲದ ಬ್ಯಾರಕ್‌ಪುರದ ದಂಡುಪ್ರದೇಶದಲ್ಲಿ ಮಂಗಲಪಾಂಡೆ ಸಾಮೂಹಿಕ ಕವಾಯತಿನ ಸಂದರ್ಭದಲ್ಲೇ ಪ್ರತಿಭಟನೆಯ ಕೂಗು ಹಾಕಿದ್ದಲ್ಲದೆ, ಅಲ್ಲಿದ್ದ ಬ್ರಿಟಿಷ್ ಅಧಿಕಾರಿಯ ಮೇಲೆ ಗುಂಡನ್ನು ಹಾರಿಸಿಯೇಬಿಟ್ಟ. ಗುಂಡೇಟು ಬಿದ್ದ ಅಧಿಕಾರಿ ಹೇಗೋ ತಪ್ಪಿಸಿಕೊಂಡನಾದರೂ, ಈ ಆರೋಪದಲ್ಲಿ ಮಂಗಲಪಾಂಡೆಯನ್ನು ಗಲ್ಲಿಗೇರಿಸಿದ್ದು, ಆಕ್ರೋಶಕ್ಕೆ ಎಡೆ ಮಾಡಿಕೊಟ್ಟಿತು.

ಮುಂದಿನದು 1857ರ ಮೇ 10ರ ಘಟನೆ. ಅದರ ಹಿಂದಿನ ದಿನ ಅಂದರೆ ಮೇ 9ರಂದು ದೆಹಲಿಗೆ ಮುವತ್ತಾರು ಮೈಲುಗಳ ದೂರದಲ್ಲಿರುವ ಮೀರತ್ ದಂಡುಪ್ರದೇಶದಲ್ಲಿ ಸೈನಿಕ ನಿಯಮ ಉಲ್ಲಂಘನೆಯ ಕಾರಣಕ್ಕೆ 90 ಮಂದಿ ಭಾರತೀಯ ಸೈನಿಕರ ಸಮವಸ್ತ್ರಗಳನ್ನು ಕಳಚಿಸಿ, ಕೈಗಳಿಗೆ ಕೋಳಗಳನ್ನು ತೊಡಿಸಿ ಮೆರವಣಿಗೆಯಲ್ಲಿ ಸೆರೆಮನೆಗೆ ಕರೆದೊಯ್ಯಲಾಯಿತಲ್ಲದೆ, ಹತ್ತು ವರ್ಷಗಳ ಕಠಿಣ ಶಿಕ್ಷೆಗೂ ಒಳಪಡಿಸಲಾಯಿತು. ಈ ಕರುಣಾಜನಕ ದೃಶ್ಯ ಕಂಡು ಕಣ್ಣೀರು ಮಿಡಿದ ಅವರ ಬಂಧು-ಬಾಂಧವರು, ಅಲ್ಲಿದ್ದ ಉಳಿದ ಸೈನಿಕರಿಗೆ ಬಳೆಗಳನ್ನು ಕೊಟ್ಟು ಅವರ ಹೇಡಿತನವನ್ನು ಹೀಗಳೆದರು.

ಮಾರನೆಯ ದಿನ ರೊಚ್ಚಿಗೆದ್ದ ಇತರೆ ಸೈನಿಕರು, ಸೆರೆಮನೆಯ ಬಾಗಿಲುಗಳನ್ನು ಮುರಿದು ಬಂಧಿತ ಸಹೋದ್ಯೋಗಿಗಳನ್ನು ಮುಕ್ತಗೊಳಿಸಿ, ಅಡ್ಡಿಪಡಿಸಿದ ಬ್ರಿಟಿಷ್ ಅಧಿಕಾರಿಗಳನ್ನು ಯಮಲೋಕಕ್ಕೆ ರವಾನಿಸಿದರು. ಈ ಕಾರಣಕ್ಕಾಗಿ ಇದನ್ನು ಸಿಪಾಯಿದಂಗೆ ಎನ್ನಲಾಗುತ್ತದೆ ಹಾಗೂ ಭಾರತೀಯ ಸ್ವಾತಂತ್ರ್ಯ ಹೋರಾಟದ ಪ್ರಥಮ ಘಟ್ಟ ಎಂದು ಗುರುತಿಸಲಾಗುತ್ತದೆ.

ಇದು ಇಷ್ಟಕ್ಕೇ ನಿಲ್ಲಲಿಲ್ಲ. ಉದ್ರಿಕ್ತ ಬಂಡಾಯ ಸೇನೆ ಮೀರತ್ ಅನ್ನು ವಶಪಡಿಸಿಕೊಂಡು ದೆಹಲಿಗೆ ಧಾವಿಸಿ, ಕೆಂಪುಕೋಟೆಯನ್ನು ಪ್ರವೇಶಿಸಿ, ಎಂಬತ್ತು ವರ್ಷದ ಮೊಘಲ್ ಬಾದಷಾ ಬಹದ್ದೂರ್ ಷಾ ಜಫರ್‌ನನ್ನು ಭಾರತದ ಚಕ್ರವರ್ತಿ ಎಂದು ಘೋಷಿಸಿಬಿಟ್ಟಿತು. ಇದರೊಟ್ಟಿಗೆ ದೆಹಲಿಯಲ್ಲಿದ್ದ ಬ್ರಿಟಿಷ ನಿವಾಸಿಗಳ ಮೇಲೆ ಭಾರೀ ಧಾಳಿ, ಹಲ್ಲೆಗಳನ್ನು ನಡೆಸಿ, ಅಲ್ಲಿಂದ ಕಾಲು ಕೀಳುವಂತೆ ಮಾಡಲಾಯಿತು. ಅಂತಿಮವಾಗಿ ದೆಹಲಿ ಬಂಡಾಯ ಸೇನೆಯ ಕೈವಶವಾಯಿತು(ಮೇ13-1857)

ಈ ಸೈನಿಕ ದಂಗೆಯ ಪ್ರತಿಧ್ವನಿ ಎಂಬಂತೆ ಝಾನ್ಸಿ, ಬರೇಲಿ, ಲಕ್ನೋ ಮತ್ತು ಕಾನ್ಪುರಗಳು ಹೊತ್ತಿ ಉರಿಯತೊಡಗಿದವು. ಅಲ್ಲಿಯ ದಂಗೆಗಳು ಬಹುತೇಕವಾಗಿ ರಾಜನಿಷ್ಠೆಯನ್ನು ತಾಳಿದ್ದವು. ಮೌಲ್ವಿ ಅಹಮದುಲ್ಲ ಬರೇಲಿಯ ಬಂಡಾಯದ ನಾಯಕನಾದರೆ, ಲಕ್ನೋದಲ್ಲಿ ಉಚ್ಚಾಟಿತ ನವಾಬನ ಮಡದಿ ಸುಲ್ತಾನಾ ಬೇಗಂ ಹಜರತ್ ಮಹಲ್ ನಾಯಕತ್ವ ವಹಿಸಿದ್ದರು. ನಾನಾ ಸಾಹೇಬ ಕಾನ್ಪುರದ ದಂಗೆಕೋರರ ನಾಯಕತ್ವ ವಹಿಸಿಕೊಂಡಿದ್ದರು.

ತಾತ್ಯಾಟೋಪೆ ಮತ್ತು ಲಕ್ಷ್ಮೀಬಾಯಿ ಝಾನ್ಸಿಯಲ್ಲಿ ಬಂಡಾಯದ ಕಹಳೆ ಮೊಳಗಿಸಿದ್ದರು. ಬ್ರಿಟಿಷರಿಗೆ ನಿಂತ ನೆಲವೇ ಬೆಂಕಿಯ ಕುಂಡವಾಗಿ

**ಜನ ಸಾಮಾನ್ಯರು ಸ್ವಾತಂತ್ರ್ಯ ಹೋರಾಟದ ಅವಿಭಾಜ್ಯ ಅಂಗವಾದರು. ಅಸಹಕಾರ ಚಳವಳಿ, ಸತ್ಯಾಗ್ರಹದ ವಿಚಾರಗಳಿಗೆ ಹೊಸ ಹುರುಪು ದೊರಕಿದಂತಾಯಿತು. 1929ರ ಲಾಹೋರ್ ಅಧಿವೇಶನ ಪೂರ್ಣ ಸ್ವರಾಜ್ಯದ ಘೋಷಣೆಗೆ ಮುಂದಾಯಿತು. ಜವಹರಲಾಲ್ ನೆಹರೂರವರ ಅಧ್ಯಕ್ಷೀಯ ಭಾಷಣದ ಪರಿವಿಡಿಯೇ ಸಂಪೂರ್ಣ ಸ್ವರಾಜ್ಯದ್ದಾಗಿತ್ತು. ಮುಂದೆ ಜರುಗಿದ ದಂಡಿಯ ಉಪ್ಪಿನ ಸತ್ಯಾಗ್ರಹ ಸ್ವಾತಂತ್ರಾಂದೋಲನದ ನಿರ್ಣಾಯಕ ಘಟ್ಟವಾಯಿತು.**



Downloaded From: www.kpscvaani.com

ಮೃತ್ಯುಕೂಪಗಳಾಗಿ, ಜೀವನ್ಮರಣದ ಪ್ರಶ್ನೆ ಅವರಿಗೆ ಎದುರಾಗಿತ್ತು.

ಆದಾಗ್ಯೂ ದೇಶೀಯ ರಾಜರುಗಳ ಸಹಾಯ–ಸಹಕಾರಗಳು ಅವರಿಗೆ ಸಕಾಲಿಕವಾಗಿಯೇ ಒದಗಿಬಂದವು. ಪಟಿಯಾಲದ ಸಿಖ್ ಮಹಾರಾಜ, ಗ್ವಾಲಿಯರ್‌ನ ಸಿಂಧಿಯಾ, ಮತ್ತು ಝಾನ್ಸಿಯ ದಿನಕರರಾವ್ ಅವರ ಪಾಲಿಗೆ ಆಪದ್ಬಾಂಧವರಾದರು. ಇಂಥ ಒಳ ಪಿತೂರಿಗಾರರ ಸೈನ್ಯ ಸಹಾಯ ಪಡೆದು, ದೆಹಲಿಯನ್ನು ಮತ್ತೆ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಮುಂದಾದ ಬ್ರಿಟಿಷರಿಗೆ ಆಗಷ್ಟೇ ವ್ಯಾಪಕವಾಗತೊಡಗಿದ್ದ ವಿದ್ಯುಚ್ಛಕ್ತಿ ಬಳಕೆ ಮತ್ತು ತಂತಿ ಸಂಪರ್ಕ ಜಾಲಗಳು ಮತ್ತಷ್ಟು ಬಲ ತುಂಬಿಕೊಟ್ಟವು.

ಹ್ಯಾವ್‌ಲಾಕ್, ಹಡ್ಸನ್, ಹಗ್ರೋಸ್, ನಿಕಲ್ಸನ್, ಒಟ್ರಾಮ್‌ರಂತಹ ಬ್ರಿಟಿಷ್ ನಿಷ್ಣಾತ ದಂಡನಾಯಕರು, ಅಹೋರಾತ್ರಿ ಬಂಡಾಯ ಶಮನಕ್ಕೆ ಶ್ರಮಿಸಿದ ಫಲವಾಗಿ ಸೆಪ್ಟಂಬರ್ 18–1857ರಂದು ದೆಹಲಿ ಬ್ರಿಟಿಷರ ಕೈವಶವಾಯಿತು. ಮೊಘಲ್ ಚಕ್ರವರ್ತಿ ಬಂಧಿತನಾಗಿ, ರಾಜದ್ರೋಹದ ಆಪಾದನೆಯನ್ನು ಎದುರಿಸಬೇಕಾಯಿತು.

ಚಕ್ರವರ್ತಿಯ ಇಬ್ಬರು ಗಂಡು ಮಕ್ಕಳು ಮತ್ತು ಓರ್ವ ಮೊಮ್ಮಗನ ರುಂಡಗಳನ್ನು ಚೆಂಡಾಡಿದ ಬ್ರಿಟಿಷರು, ಅದನ್ನೇ ತಟ್ಟೆಯಲ್ಲಿಟ್ಟು ಅವನಿಗೆ ಅರ್ಪಿಸಿದರು. ತನ್ನ ನೆಲದಲ್ಲಿ ಹೂಳಿಸಿಕೊಳ್ಳುವುದಕ್ಕೂ ಜಾಗ ದಕ್ಕಲಿಲ್ಲವಲ್ಲ ಎಂಬ ಕೊರಗಿನಲ್ಲಿಯೇ ಮೊಘಲ್ ಚಕ್ರವರ್ತಿ ಸಾವನ್ನಪ್ಪಿದರೆ, ತನ್ನವರ ಕುತಂತ್ರದಿಂದಾಗಿ ಹೋರಾಡುತ್ತಲೇ ರಾಣಿ ಲಕ್ಷ್ಮೀಬಾಯಿ ಹತಳಾದಳು. ಅತ್ತ ನಾನಾ ಸಾಹೇಬ್ ಮತ್ತು ಬೇಗಂ ಹಜರತ್ ಮಹಲ್ ಕಾನ್ಪುರ, ಲಕ್ನೋಗಳನ್ನು ತೆರವುಗೊಳಿಸಬೇಕಾಯಿತು. ನೇಪಾಳದ ಗೊಂಡಾರಣ್ಯವನ್ನು ಸೇರಿಕೊಂಡ ಹಜರತ್ ಮಹಲ್ ಹೋರಾಟ ಮುಂದುವರೆಸಿದರೂ, ಬ್ರಿಟಿಷರನ್ನು ಜಯಿಸಲಾಗಲಿಲ್ಲ.

ಮೌಲಾನಾ ಅಹಮದುಲ್ಲಾ ಮತ್ತು ಅಜೀಜುಲ್ಲಾ ಸೇರಿದಂತೆ ಹದಿನೆಂಟು ಸಾವಿರ ಮೌಲ್ವಿಗಳ ಶವಗಳು ನೂರಾರು ಮರದ ಕೊಂಬೆಗಳಲ್ಲಿ ನೇತಾಡಿದವು. ದಿಯೋಬನ್, ಬರೇಲಿ, ರಾಮ್‌ಪುರ, ಮುರಾದಾಬಾದ್ ಮತ್ತು ದಿಲ್ಲಿ ನಗರಗಳಲ್ಲಿ ಇಪ್ಪತ್ತೇಳು ಸಾವಿರ ಮಂದಿಯನ್ನು ಹತ್ಯೆ ಮಾಡಲಾಯಿತು.

ಈ ಮೇಲ್ಕಾಣಿಸಿದ ಸ್ಥಳಗಳನ್ನು ಹೊರತುಪಡಿಸಿ, ವಿಶಾಲ ಭಾರತದ ಬೇರೆ ಯಾವ ಭಾಗಗಳಲ್ಲೂ ದಂಗೆ, ಹೋರಾಟ ಪ್ರತಿಭಟನೆಗಳು ನಡೆಯಲೇ ಇಲ್ಲ. ಖ್ಯಾತ ಇತಿಹಾಸಕಾರ ಆರ್.ಸಿ.ಮಜುಂದಾರ್ ಈ ಘಟನೆಯನ್ನು ಪ್ರಥಮವೂ ಅಲ್ಲ, ರಾಷ್ಟ್ರೀಯವೂ ಅಲ್ಲ. ಸ್ವಾತಂತ್ರ್ಯ ಹೋರಾಟವೂ ಅಲ್ಲ ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.

1885ರ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಯೊಂದಿಗೆ ಸ್ವಾತಂತ್ರ್ಯ ಹೋರಾಟದ ಮತ್ತೊಂದು ಘಟ್ಟ ಆರಂಭವಾಯಿತು. ಇದಕ್ಕೂ ಮುನ್ನ ಬೆಂಗಾಲ ಜಮೀನುದಾರರ ಸಂಘ, ಮದರಾಸ್ ಮಹಾಜನ ಸಭಾ ಮತ್ತು ಪೂನಾದ ಮಹಾಜನ ಸಭಾಗಳು ಸ್ವಾಭಿಮಾನದ ಮತ್ತು ಸ್ವಾವಲಂಬನೆಯ ದಿಕ್ಕಿನಲ್ಲಿ ತಮ್ಮ ಕೆಲಸಗಳನ್ನಾರಂಭಿಸಿದ್ದವು. ಡಬ್ಲ್ಯುಸಿ ಬ್ಯಾನರ್ಜಿ, ಓಮೇಶ್ ಚಂದ್ರ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ 1885ರ ಡಿಸೆಂಬರ್ 28,29,30ರಲ್ಲಿ ಬೊಂಬಾಯಿಯಲ್ಲಿ ಜರುಗಿದ ಪ್ರಥಮ ಕಾಂಗ್ರೆಸ್ ಅಧಿವೇಶನ ಭಾರತ ರಾಷ್ಟ್ರೀಯತೆಯ ಮತ್ತು ಸ್ವಾತಂತ್ರ್ಯ ಹೋರಾಟದ ದಿಕ್ಕಿನಲ್ಲಿ ಇಟ್ಟ ಮೊದಲ ದಿಟ್ಟ ಹೆಜ್ಜೆಯಾಯಿತು.

ಗೋಪಾಲಕೃಷ್ಣ ಗೋಖಲೆ, ದಾದಾಬಾಯಿ ನವರೋಜಿ, ಫಿರೋಜ್ ಷಾ ಮೆಹತಾ, ಬಾಲ ಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್‌ರಂತಹ ಮುಂಚೂಣಿ ನಾಯಕರ ಮುಂದಾಳತ್ವದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ ದಿನೇದಿನೇ ವೃದ್ಧಿಸಲಾರಂಭಿಸಿತು.

1903 ಮತ್ತು 1905ರ ನಡುವೆ ಜರುಗಿದ ಬಂಗಾಲ ವಿಭಜನಾ ವಿರೋಧಿ ಚಳವಳಿ ಭಾರತೀಯರ ಸ್ವಾಭಿಮಾನವನ್ನು ಉದ್ದಿಪನಗೊಳಿಸಿತು. ಸ್ವಾತಂತ್ರಾಭಿಲಾಷೆಯನ್ನು, ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡು ಜಾಗೃತಗೊಳಿಸಿತು.

1917ರಲ್ಲಿ ಗಾಂಧೀಜಿ ರಾಷ್ಟ್ರೀಯ ರಾಜಕಾರಣಕ್ಕೆ ಪ್ರವೇಶಿಸುವ ತನಕ ಈ ಸ್ವಾತಂತ್ರ್ಯ ಹೋರಾಟ ನಿಧಾನಗತಿಯಲ್ಲಿ ಹೆಜ್ಜೆ ಹಾಕುತ್ತಿತ್ತು. 1917–18ರ ಚಂಪಾರಣ್ಯ ರೈತ ಚಳವಳಿ, ಅಹಮದಾಬಾದ್‌ನ ಗಿರಣಿ ಕಾರ್ಮಿಕರ ಚಳವಳಿ, ಖೇಡಾ ರೈತ ಚಳವಳಿಗಳಿಗೆ ಗಾಂಧೀಜಿಯವರ ಮಾರ್ಗದರ್ಶನ ಲಭ್ಯವಾಯಿತು.

ಈ ನಡುವೆ ಕ್ರಾಂತಿಕಾರಿ ಹೋರಾಟಗಾರರೆಂದೇ ಗುರುತಿಸಿಕೊಂಡ ಭಗತ್‌ಸಿಂಗ್, ರಾಜಗುರು, ಚಂದ್ರಶೇಖರ ಆಜಾದ್ ಮತ್ತು ಸುಖ್‌ದೇವ್‌ರಂಥವರು ನೇಣಿಗೆ ಕೊರಳೊಡ್ಡಿ ಹುತಾತ್ಮರಾಗಿ ಸ್ವಾತಂತ್ರ್ಯದ ಹಣತೆಗೆ ತೈಲಗಳಾದರು.

ಅಶಿಕ್ಷಿತರು, ಅಲಕ್ಷಿತ ರೈತ ಕಾರ್ಮಿಕ ವರ್ಗಗಳು ರಾಷ್ಟ್ರೀಯ ಮುಖ್ಯ ವಾಹಿನಿಯಲ್ಲಿ ವಿಲೀನಗೊಂಡವು. ರಾಷ್ಟ್ರೀಯತೆ ಮತ್ತು ಸ್ವಾತಂತ್ರ್ಯ ಚಳವಳಿಗೆ ಭೀಮಬಲ ಪ್ರಾಪ್ತವಾಯಿತು. 1919–20ರ ಅಸಹಕಾರ ಚಳವಳಿಯ ಯಶಸ್ಸಿಗೆ ಇದು ಹಿನ್ನೆಲೆಯಾಗಿ ಪರಿಣಮಿಸಿತು.

ಜನ ಸಾಮಾನ್ಯರು ಸ್ವಾತಂತ್ರ್ಯ ಹೋರಾಟದ ಅವಿಭಾಜ್ಯ ಅಂಗವಾದರು. ಅಸಹಕಾರ ಚಳವಳಿ, ಸತ್ಯಾಗ್ರಹದ ವಿಚಾರಗಳಿಗೆ ಹೊಸ ಹುರುಪು ದೊರಕಿದಂತಾಯಿತು. 1929ರ ಲಾಹೋರ್ ಅಧಿವೇಶನ ಪೂರ್ಣ ಸ್ವರಾಜ್ಯದ ಘೋಷಣೆಗೆ ಮುಂದಾಯಿತು. ಜವಹರಲಾಲ್ ನೆಹರೂರವರ ಅಧ್ಯಕ್ಷೀಯ ಭಾಷಣದ ಪರಿವಿಡಿಯೇ ಸಂಪೂರ್ಣ ಸ್ವರಾಜ್ಯದ್ದಾಗಿತ್ತು. ಮುಂದೆ ಜರುಗಿದ ದಂಡಿಯ ಉಪ್ಪಿನ ಸತ್ಯಾಗ್ರಹ ಸ್ವಾತಂತ್ರಾಂದೋಲನದ ನಿರ್ಣಾಯಕ ಘಟ್ಟವಾಯಿತು.

ಮಹಾತ್ಮಾ ಗಾಂಧೀಜಿ ಅಸಹಕಾರ ಚಳವಳಿಯ ಪ್ರಧಾನ ಆಕರ್ಷಣೆಯಾಗಿ ಹೊರಹೊಮ್ಮಿದರು. 1942ರ ಕ್ವಿಟ್ ಇಂಡಿಯಾ ಚಳವಳಿ ಬ್ರಿಟಿಷರ ವಿರುದ್ಧ ಭಾರತದಲ್ಲಿ ಜರುಗಿದ ಕಟ್ಟಕಡೆಯ ಪ್ರಧಾನ ಪ್ರತಿಭಟನೆಯಾಗಿತ್ತು. ರಾಷ್ಟ್ರವ್ಯಾಪಿ ವಿರೋಧಿ ಅಲೆಯನ್ನು ಕಂಡ ಬ್ರಿಟಿಷರು 1945ರ ದ್ವಿತೀಯ ಮಹಾಯುದ್ಧ ಮುಕ್ತಾಯದ ನಂತರ, ಭಾರತದಲ್ಲಿ ಯಾವೊಂದೂ ಬಂಡಾಯ, ಪ್ರತಿಭಟನೆ, ಪ್ರತಿರೋಧಗಳ ಸುಳಿವೂ ಇಲ್ಲದಿದ್ದ ಸಂದರ್ಭದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಘೋಷಿಸುವ ನಿರ್ಧಾರ ತಾಳಿದುದು ಇತಿಹಾಸದ ಸೋಜಿಗಗಳಲ್ಲಿ ಒಂದಾಯಿತು.

ಹಲವು ಹಂತಗಳ ಸಮಾಲೋಚನೆ, ಸುದೀರ್ಘ ಚಿಂತನೆಗಳ ನಂತರ 1947ರ ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯವಾಗಿ, ಇಲ್ಲಿಗೆ ಎಪ್ಪತ್ತೈದು ವರುಷಗಳ ಸುದೀರ್ಘ ನಡೆಯನ್ನು ದಾಖಲಿಸಿತು.



Downloaded From: www.kpscvaani.com




ಲೋಕಾರ್ಪಣೆಗೊಂಡ

# ಸರ್ಕಾರಿ ನೌಕರರ ಶತಮಾನೋತ್ಸವ ಭವನ

**ಶತಮಾನೋತ್ಸವ ಆಚರಣೆಯ ಅಂಗವಾಗಿ ಆಧುನಿಕ ಮಾದರಿಯಲ್ಲಿ ನವೀಕರಣಗೊಂಡು ಲೋಕಾರ್ಪಣೆಯಾದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದ ಒಂದು ನೋಟ.**

ಎನ್. ಮಾಲತೇಶ್

ಸರ್ಕಾರದ ಕೆಲಸ ಸುಸೂತ್ರವಾಗಿ ಜರುಗಲು ಕಾರ್ಯಾಂಗ ಸಕ್ರಿಯವಾಗಿರಬೇಕು. ಕಾರ್ಯಾಂಗ ಸಕ್ರಿಯವಾಗಿರಬೇಕಾದರೆ, ಅಧಿಕಾರಿ ಮತ್ತು ಸಿಬ್ಬಂದಿಗಳು, ಅದರಲ್ಲೂ ಸರ್ಕಾರಿ ನೌಕರರ (ಸಿಬ್ಬಂದಿ) ಸೇವೆಯು ಅತ್ಯಂತ ಅವಶ್ಯಕವಾಗಿರುತ್ತದೆ.

ಸರ್ಕಾರದ ಯೋಜನೆಗಳನ್ನು ಜನರಿಗೆ ಮುಟ್ಟಿಸುವ ದಿಸೆಯಲ್ಲಿ ಹಗಲಿರುಳು ಕಾರ್ಯನಿರತರಾಗಿರುವ ಸರ್ಕಾರಿ ನೌಕರರು ತಮ್ಮ ಕ್ಷೇಮಾಭಿವೃದ್ಧಿಗಾಗಿ 1920 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ, ನೌಕರರ ಸಂಘವನ್ನು ಸ್ಥಾಪಿಸಿಕೊಂಡರು.

ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸುಮಾರು 6 ಲಕ್ಷ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ಏಕೈಕ ಹಾಗೂ ರಾಷ್ಟ್ರದಲ್ಲೆ ಮಾದರಿ ಸಂಘಟನೆಯಾಗಿ ಈ ಸಂಘವು ಇಂದು ಬೆಳೆದಿದೆ ಎಂದರೆ ತಪ್ಪಾಗಲಾರದು.

ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾಗಿರುವ ಸಿ.ಎಸ್.ಷಡಾಕ್ಷರಿ ಅವರು 2020ಕ್ಕೆ ಸಂಘ ನೂರು ವರ್ಷಗಳ ಶತಮಾನೋತ್ಸವ ಆಚರಣೆಗೆ ಸನ್ನದ್ಧವಾಗುತ್ತಿದ್ದ ಹಿನ್ನೆಲೆಯಲ್ಲಿ ನೌಕರರ ಭವನವನ್ನು ಆಧುನಿಕತೆಗೆ ಅನುಗುಣವಾಗಿ ನವೀಕರಣ ಮಾಡುವ ಉದ್ದೇಶವನ್ನು ಹೊಂದಿದರು.



Downloaded From: www.kpscvaani.com

**ರಾಷ್ಟ್ರಲಾಂಛನವಾದ ಅಶೋಕ ಸ್ತಂಭವನ್ನು ಭವನದ ಆವರಣದಲ್ಲಿ ನಿರ್ಮಿಸಲಾಗಿದೆ. ಅಲ್ಲದೆ ಆವರಣದ ಉಳಿದ ಭಾಗದಲ್ಲಿ ಉದ್ಯಾನವನ, ವಾಕಿಂಗ್ ಪಥ, ಕುಳಿತುಕೊಳ್ಳಲು ಆಸನ ವ್ಯವಸ್ಥೆ ಮುಂತಾದವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಒಳ್ಳೆಯ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ.**





**ನವೀಕರಣಗೊಂಡಿರುವ ರಾಜ್ಯ ಸರ್ಕಾರಿ ನೌಕರರ ಶತಮಾನೋತ್ಸವ ಭವನದಲ್ಲಿ ಸುಸಜ್ಜಿತ ಹಾಗೂ ವಿಶಾಲವಾದ ಕಾರ್ಯಾಲಯ, ಕಾನೂನು ಸಲಹಾ ಕೇಂದ್ರ, ಬೋರ್ಡ್ ಹಾಲ್, ಅತ್ಯಾಧುನಿಕ ಮಾದರಿಯ ಮೀಟಿಂಗ್ ಹಾಲ್, ಸುಸಜ್ಜಿತವಾದ ಸುಮಾರು 350 ಆಸನವುಳ್ಳ ಸಭಾಂಗಣ, 8 ಹವಾ ನಿಯಂತ್ರಿತ ವಿ.ವಿ.ಐ.ಪಿ. ಕೊಠಡಿಗಳು, 40 ಸುಸಜ್ಜಿತ ವಸತಿಗೃಹ, ವಿಶಾಲವಾದ ವಾಹನ ನಿಲುಗಡೆ ಪ್ರದೇಶ, ವಿಶಾಲವಾದ ಪ್ರಾಂಗಣ ಇವೇ ಮುಂತಾದ ಸವಲತ್ತುಗಳಿವೆ.**

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಭವನವನ್ನು ಆಧುನಿಕ ಮಾದರಿಯಲ್ಲಿ ನವೀಕರಿಸಲು ಸರ್ಕಾರಕ್ಕೆ ಸಂಘದ ವತಿಯಿಂದ ಪ್ರಸ್ತಾವನೆ ಸಲ್ಲಿಸಿ, ಅನುದಾನವನ್ನು ಕೋರಲಾಯಿತು. ನೌಕರರ ಸಂಘದ ಬೇಡಿಕೆಯನ್ನು ಪರಿಗಣಿಸಿದ ಮುಖ್ಯಮಂತ್ರಿಗಳು ಭವನದ ನವೀಕರಣಕ್ಕಾಗಿ ಸರ್ಕಾರದಿಂದ 12 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದರು.

ಅನುದಾನ ಬಿಡುಗಡೆಯಾದ ಬೆನ್ನಲ್ಲೇ ಕಳೆದ ವರ್ಷ ಜನವರಿಯಲ್ಲಿ ಭವನದ ನವೀಕರಣ ಕಾಮಗಾರಿಯನ್ನು ಪ್ರಾರಂಭಿಸಲಾಯಿತು. ಕೋವಿಡ್-19 ನಿಂದಾಗಿ ಕಾಮಗಾರಿ ಕೆಲಸ ಪೂರ್ಣಗೊಳ್ಳಲು ತುಸು ಸಮಯ ಹಿಡಿದರೂ ಭವನವನ್ನು ಅತ್ಯಂತ ಆಕರ್ಷಕವಾಗಿ ನವೀಕರಣಗೊಳಿಸಲಾಗಿದೆ.

ನವೀಕರಣಗೊಂಡಿರುವ ಭವ್ಯ ಹಾಗೂ ಅಲಂಕೃತ ಶತಮಾನೋತ್ಸವ ಭವನವನ್ನು ಜುಲೈ 1 ರಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಲೋಕಾರ್ಪಣೆಗೊಳಿಸಿದರು. ಆ ಸಂದರ್ಭದಲ್ಲಿ ಮಾತನಾಡಿದ ಅವರು ರಾಜ್ಯ ಸರ್ಕಾರಿ ನೌಕರರ ಸಂಘ ಒಂದು ಮಾದರಿ ಸಂಘವಾಗಿ ಬೆಳೆದು ಬಂದಿದೆ. ಆಡಳಿತ ಯಂತ್ರ ಸರಿಯಾಗಿ ನಡೆಸಲು ಸರ್ಕಾರಿ ನೌಕರರ ಸಹಕಾರ ಅತ್ಯಗತ್ಯ. ಸರ್ಕಾರದ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವ ಮುಖಾಂತರ ಸರ್ಕಾರದ ಗೌರವವನ್ನು ಮತ್ತಷ್ಟು ಹೆಚ್ಚಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಷಿ.ಎಸ್.ಷಡಾಕ್ಷರಿ ಅವರು ನಾನು ನೋಡಿದ ಸರ್ಕಾರಗಳಲ್ಲಿ ಇಷ್ಟು ಉದಾರವಾಗಿ ಅನುದಾನ ನೀಡಿರುವುದು ಇದೇ ಮೊದಲು. ಮುಖ್ಯಮಂತ್ರಿಗಳು ಕೋವಿಡ್ ಸಂಕಷ್ಟದ ಸಮಯದಲ್ಲೂ ನಮ್ಮ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುತಿದ್ದಾರೆ. ಆದ್ದರಿಂದ ಎಲ್ಲಾ ನೌಕರರ ಪರವಾಗಿ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ.ಕಾರಜೋಳ ಅವರು ಮಾತನಾಡಿ **"ಈ ಹಿಂದೆ ಸಂಘದ ಕಟ್ಟಡ ಕಟ್ಟಬೇಕಿದ್ದರೆ, ನೌಕರರಿಂದ ಹಣ ಸಂಗ್ರಹ ಮಾಡಬೇಕಾಗಿತ್ತು, ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಬಳಿಗೆ ಬಂದವರನ್ನು ಬರಿ ಕೈಯಲ್ಲಿ ಕಳುಹಿಸುವುದಿಲ್ಲ. ಹಾಗಾಗಿ ನೌಕರರ ಸಂಘಕ್ಕೆ ಹೆಚ್ಚಿನ ಅನುದಾನ ನೀಡಿ ಈ ಶತಮಾನೋತ್ಸವ ಭವನ ನಿರ್ಮಾಣಕ್ಕೆ ಸಹಕಾರಿಯಾಗಿದ್ದಾರೆ"** ಎಂದರು.

ಶತಮಾನೋತ್ಸವ ಭವನದ ಲೋಕಾರ್ಪಣೆ ಸಂದರ್ಭದಲ್ಲಿ ಸಂಸದ ಬಿ.ವೈ.ರಾಘವೇಂದ್ರ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಒಟ್ಟಿನಲ್ಲಿ ಸುಸಜ್ಜಿತ ಸವಲತ್ತುಗಳನ್ನು ಪಡೆದುಕೊಂಡು ನವೀಕರಣಗೊಂಡಿರುವ ರಾಜ್ಯ ಸರ್ಕಾರಿ ನೌಕರರ ಶತಮಾನೋತ್ಸವ ಭವನವು ನೌಕರರ ಕ್ಷೇಮಾಭಿವೃದ್ಧಿಗಾಗಿ ಸಭೆ ಸಮಾರಂಭಗಳನ್ನು ನಡೆಸಲು ಸಜ್ಜಾಗಿದೆ.



Downloaded From: www.kpscvaani.com



# ನಾಡಿನ ಹೆಮ್ಮೆಯ ಲಾಂಛನ ಗಂಡಭೇರುಂಡ

**ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಹದ್ದಿನ ರೂಪದ ಗಂಡಭೇರುಂಡ ನಮ್ಮ ಕನ್ನಡ ನಾಡಿನ ಲಾಂಛನವಾದುದು ಅತ್ಯಂತ ಸ್ವಾರಸ್ಯಕರ ಸಂಗತಿ.**

ಪಿ.ಎಸ್.ಪರ್ವತಿ

ಪ್ರತಿಯೊಂದು ರಾಷ್ಟ್ರ ಹಾಗೂ ರಾಜ್ಯಕ್ಕೆ ಅದರದೇ ಆದ ಲಾಂಛನವಿರುತ್ತದೆ. ನಮ್ಮ ನಾಡಿನ ಹೆಮ್ಮೆ ಹಾಗೂ ಘನತೆಯ ಸಂಕೇತವಾಗಿ "ಗಂಡಭೇರುಂಡ" ಪಕ್ಷಿಯು ಅಧಿಕೃತ ಲಾಂಛನವಾಗಿದೆ. ಹದ್ದಿನರೂಪದ ಈ ವಿಚಿತ್ರ ಪಕ್ಷಿಗೆ ಸಾವಿರಾರು ವರ್ಷಗಳ ಐತಿಹ್ಯವಿದೆ. ಈ ಬಲಿಷ್ಠ "ಗಂಡಭೇರುಂಡ" ಪಕ್ಷಿಯು ಒಟ್ಟೊಟ್ಟಿಗೆ ಎರಡೆರಡು ಆನೆ ಮತ್ತು ಎರಡೆರಡು ಸಿಂಹಗಳನ್ನು ತನ್ನ ಕಾಲು ಮತ್ತು ರೆಕ್ಕೆಗಳ ಮೂಲಕ ಎತ್ತಿ ಒಗೆಯುವ ಶಕ್ತಿಯನ್ನು ಹೊಂದಿರುವ ಶಿಲ್ಪಗಳು ನಾಡಿನ ದೇವಾಲಯಗಳಲ್ಲಿ ಕಂಡುಬರುತ್ತವೆ. ಕನ್ನಡಿಗರು ಸಹ ಜಗತ್ತಿನ ಅತ್ಯಂತ ಬಲಶಾಲಿಗಳು ಎಂಬುದು ಈ ಲಾಂಛನದ ಸಂಕೇತವಾಗಿದೆ.

ಕರ್ನಾಟಕದ ಲಾಂಛನವಾಗಿರುವ ಈ ಪಕ್ಷಿಯನ್ನು ಗಮನವಿಟ್ಟು ಅವಲೋಕಿಸಿದಾಗ, ಇದೊಂದು ಸಯಾಮಿಪಕ್ಷಿಯಂತೆ ಗೋಚರಿಸುತ್ತದೆ. ಎರಡು ತಲೆಗಳಿರುವ ಈ ಪಕ್ಷಿಯು ಚೂಪಾದ ಕೊಕ್ಕು, ರೆಕ್ಕೆಪುಕ್ಕಗಳನ್ನು ಹರಡಿಕೊಂಡು, ಎರಡು ತಲೆಗಳನ್ನು ಪರಸ್ಪರ ವಿರುದ್ಧ ದಿಕ್ಕಿಗೆ ತಿರುಗಿಸಿಕೊಂಡು ನಿಂತಿದೆ. ಒಂದೇ ಶರೀರ ಹೊಂದಿರುವ ಈ ವಿಶಿಷ್ಟ ಪಕ್ಷಿಯು ಹಿಂದಿನಿಂದಲೂ ಪ್ರಭುತ್ವದ ಲಾಂಛನವಾಗಿ ಕರ್ನಾಟಕದ ಹಲವು ರಾಜವಂಶಗಳಲ್ಲಿ ಪ್ರಚಲಿತವಾಗಿದ್ದು ಕಾಣುತ್ತದೆ. ಗಂಡಭೇರುಂಡದ ಮಾಹಿತಿಯನ್ನು ಹುಡುಕುತ್ತಾ ಹೊರಟಂತೆ ಅನೇಕ ರೋಚಕ ಸಂಗತಿಗಳು ವಿದಿತವಾಗುತ್ತವೆ.

ಕರ್ನಾಟಕದಲ್ಲಿ ಗಂಡಭೇರುಡವನ್ನು ಲಾಂಛನವಾಗಿ ಉಪಯೋಗಿಸಲು ಆರಂಭವಾದದ್ದು ಬಹುಶಃ ಹದಿಮೂರನೆಯ ಶತಮಾನದ ಅಂತ್ಯದಲ್ಲಿ ಎಂದು ಹೇಳಲಾಗಿದೆ. ಹೊಯ್ಸಳರ ಮೂರನೆಯ ನರಸಿಂಹ(1253–1292) ಮತ್ತು ಮೂರನೆಯ ಬಲ್ಲಾಳರ (1292–1342) ಕಾಲದ ಕೆಲವು



Downloaded From: www.kpscvaani.com

ಶಿಲಾಶಾಸನಗಳ ಮೇಲೆ ಗಂಡಭೇರುಂಡವನ್ನು ಬಿಡಿಸಲಾಗಿದೆ. ವಿಜಯನಗರದ ಸಾಮ್ರಾಟರಾಗಿದ್ದ ಅಚ್ಯುತರಾಯನ(1530–42) ಚಿನ್ನದ, ತಾಮ್ರದ ನಾಣ್ಯಗಳ ಮೇಲೆ ಗಂಡಭೇರುಂಡದ ಮುದ್ರೆಯಿದೆ. ನಾಣ್ಯಗಳ ಮುಮ್ಮುಖದಲ್ಲಿ ಗಂಡಭೇರುಂಡವು ತನ್ನ ಬೆನ್ನು ಕಾಣುವಂತೆ ಮೇಲಕ್ಕೆ ಹಾರುತ್ತಿದ್ದು ಸೊಂಡಿಲು, ಬಾಲಗಳನ್ನೆತ್ತಿಕೊಂಡು ಭಯಗ್ರಸ್ತವಾದ ಆನೆಗಳನ್ನು ಆ ಪಕ್ಷಿ ತನ್ನೆರಡು ಕೊಕ್ಕುಗಳಲ್ಲೂ ಕಾಲುಗಳಲ್ಲೂ ಸಿಕ್ಕಿಸಿಕೊಂಡಿದೆ. ವಿಜಯನಗರ ಚಕ್ರಾಧಿಪತ್ಯದ ಪತನದ ಅನಂತರ ಸ್ವತಂತ್ರರಾಗಿ ಆಳಿದ ಅನೇಕ ಪಾಳೆಗಾರರಲ್ಲಿ ಮಧುರೆಯ ನಾಯಕರು, ಕೆಳದಿಯ ನಾಯಕರೂ ಗಂಡಭೇರುಂಡವನ್ನು ಮುಂದುವರೆಸಿಕೊಂಡು ಬಂದರು. ಕೆಳದಿಯ ವೀರಭದ್ರ ದೇವಾಲಯದ(16 ನೇ ಶತಮಾನ) ಭುವನೇಶ್ವರಿಯಲ್ಲಿರುವ ಗಂಡಭೇರುಂಡ ಶಿಲ್ಪ ವಿಜಯನಗರದಂತೆಯೇ ಇದ್ದು, ತನ್ನ ಕಾಲುಗಳಲ್ಲಿ ಆನೆಗಳನ್ನು ಸಿಕ್ಕಿಸಿಕೊಂಡಿದೆ. ಬಲಗಾಲಿಗೆ ಸಿಕ್ಕಿಸಿಕೊಂಡಿರುವ ಆನೆಯ ಸೊಂಡಿಲಿನಿಂದ ಮನುಷ್ಯನೊಬ್ಬ ತೂಗಾಡುತ್ತಿದ್ದಾನೆ. ಗಂಡಭೇರುಂಡ ತನ್ನ ಎರಡು ಕೊಕ್ಕುಗಳಲ್ಲಿಯೂ, ಹರಿತವಾದ ಉಗುರುಗಳಿಂದ, ತಮ್ಮ ಕಾಲುಗಳಿಂದ ಆನೆಗಳನ್ನು ಎತ್ತಿಕೊಂಡಿರುವ ಸಿಂಹಗಳನ್ನು ಕಚ್ಚಿಕೊಂಡಿದೆ. ಈ ಗಂಡಭೇರುಂಡ ಶಿಲ್ಪವು ಶ್ರೇಷ್ಠ ಕಲಾಕೃತಿಯಾಗಿದೆ.

ಮೈಸೂರು ಅರಸರು ವಿಜಯನಗರದ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಾಗ ಅವರು ಸಹ ತಮ್ಮ ಧ್ವಜದ ಮೇಲೆ ಗಂಡಭೇರುಂಡವನ್ನು ತಮ್ಮ ಶಕ್ತಿ ಸಾಮರ್ಥ ಹಾಗೂ ರಾಜತ್ವದ ಸಂಕೇತವಾಗಿ ಪ್ರತಿಷ್ಠಾಪಿಸಿಕೊಂಡರು. ಅಂದಿನಿಂದ ಇದು ಮೈಸೂರು ದೊರೆಗಳ ರಾಜಲಾಂಛನವಾಗಿದ್ದನ್ನು ಕಾಣುತ್ತೇವೆ. ಮೈಸೂರು ಸಂಸ್ಥಾನದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಸಾಧಕರಿಗೆ "ಆರ್ಡರ್ ಆಫ್ ಗಂಡಭೇರುಂಡ" ಎಂಬ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿತ್ತು. 1956 ರಲ್ಲಿ ಮೈಸೂರು ರಾಜ್ಯದ ರಚನೆಯೊಂದಿಗೆ ಈ ಲಾಂಛನವೂ ಉಳಿದುಬಂದಿತು. ನಂತರ ಮೈಸೂರು ರಾಜ್ಯ 1973ರಲ್ಲಿ ಕರ್ನಾಟಕ ರಾಜ್ಯವೆಂದು ನಾಮಕರಣವಾದ ನಂತರವೂ ಈ ಸತ್ಸಂಪ್ರದಾಯ ಮುಂದುವರೆದು ಇಂದಿನ ಕರ್ನಾಟಕ ಸರಕಾರದ ಅಧಿಕೃತ ಲಾಂಛನವಾಗಿ ರಾರಾಜಿಸುತ್ತಿದೆ.

**ಕರ್ನಾಟಕದ ಪ್ರತಿಮೆ:**

ರಾಜ್ಯದ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾಮೆಯಲ್ಲಿರುವ ಪ್ರತಿಮೆ ಕರ್ನಾಟಕದ ಗಂಡಭೇರುಂಡ ಶಿಲ್ಪಗಳಲ್ಲಿ ಅತಿ ಪ್ರಾಚೀನವಾದದು. ಎತ್ತರದ ಕಂಬವೊಂದರ ಮೇಲಿರುವ ಈ ಶಿಲ್ಪ ಮಾನವನ ಪ್ರಮಾಣದ್ದು. ಮನುಷ್ಯ ದೇಹಾಕೃತಿಯ ಕಂಠದಿಂದ ಮೇಲೆ ಗಿಡುಗ ಪಕ್ಷಿಯ ರೀತಿಯ ಎರಡು ತಲೆಗಳಿವೆ. ಈ ಪಕ್ಷಿ ರಾಕ್ಷಸರನ್ನು ನುಂಗುತ್ತಿರುವಂತೆ ಚಿತ್ರಿಸಲಾಗಿದೆ. ಈ ಕಂಬದ ಅಡಿಯಲ್ಲಿರುವ ಶಾಸನದಲ್ಲಿ ಇದನ್ನು "ಭೇರುಂಡೇಶ್ವರ" ಎಂದು ಹೆಸರಿಸಲಾಗಿದೆ. ಕಲ್ಯಾಣ ಚಾಲುಕ್ಯರ ಮಹಾಮಂಡಲೇಶ್ವರನಾಗಿದ್ದ ಚಾವುಂಡರಾಯ ಅರಸ ಶಕ 969ರಲ್ಲಿ(1047) ಇದನ್ನು ಸ್ಥಾಪಿಸಿದನೆಂದು ಅದೇ ಶಾಸನದಿಂದ ತಿಳಿಯುತ್ತದೆ.

ಹೊಯ್ಸಳರ ಕಾಲದ "ನಾಶದಸರಪಣಿ" ಶಿಲ್ಪಗಳಲ್ಲಿ ಗಂಡಭೇರುಂಡಕ್ಕೆ ಉನ್ನತ ಸ್ಥಾನ ನೀಡಲಾಗಿದೆ. ಬೇಲೂರಿನ ಕೇಶವದೇವಾಲಯ (1117) ಮತ್ತು ಕೋರಮಂಗಲದ ಬೂಚೇಶ್ವರ ದೇವಾಲಯಗಳಲ್ಲಿ (1173) ಇದನ್ನು ನೋಡಬಹುದು. ಜಿಂಕೆಯನ್ನು ನುಂಗುತ್ತಿರುವ ಹೆಬ್ಬಾವನ್ನು ಆನೆಯೊಂದು ತನ್ನ ಸೊಂಡಿಲಲ್ಲಿ ಸಿಕ್ಕಿಸಿಕೊಂಡಿದೆ. ಆನೆಯನ್ನು ಸಿಂಹವು, ಸಿಂಹವನ್ನು ಶರಭವೂ, ಶರಭವನ್ನು ಗಂಡಭೇರುಂಡವೂ ಕೊಲ್ಲುತ್ತಿದೆ.

**ಪೌರಾಣಿಕ ಹಿನ್ನೆಲೆ:**

ವಿಷ್ಣುವಿನ ವಾಹನ ಗರುಡ. ಋಗ್ವೇದದಲ್ಲಿ ಬರುವ ಎರಡು ಹಕ್ಕಿಗಳು, ಇವುಗಳಿಂದ ಎರಡು ತಲೆಗಳುಳ್ಳ ಗಂಡಭೇರುಂಡ ಪಕ್ಷಿ ವಿಕಾಸಗೊಂಡಿರಬಹುದೆಂದೂ ಊಹಿಸಲಾಗಿದೆ. ವಿಷ್ಣು ನರಸಿಂಹ ಅವತಾರ ತಾಳಿ ಹಿರಣ್ಯಕಶಿಪುವನ್ನು ಸಂಹಾರ ಮಾಡಿದ ಮೇಲೂ ಅವನ ಕೋಪ ಶಮನವಾಗದಿದ್ದಾಗ, ಅವನಿಂದ ವಿಶ್ವ ವಿನಾಶವಾದೀತು ಎಂಬ ಅಂಜಿಕೆಯಿಂದ ಶಿವನು ಶರಭಾವತಾರದಿಂದ ನರಸಿಂಹನನ್ನು ಎದುರಿಸಿದನಂತೆ. ಆಗ ವಿಷ್ಣು ಶರಭನನ್ನು ಎದುರಿಸಲು ಗಂಡಭೇರುಂಡನಾದನೆಂದು ಮಾರ್ಕಂಡೇಯ ಪುರಾಣದಲ್ಲಿದೆ. ಗಂಡಭೇರುಂಡವು ಶರಭಕ್ಕಿಂತ ಶಕ್ತಿಯುತವಾದುದೆಂದು, ಶರಭವೇ ಇದಕ್ಕೆ ಆಹಾರವೆಂದು ಹೇಳಲಾಗಿದೆ. ಶಕ್ತಿಯ ಪರಾಕಾಷ್ಠೆಯ ಚಿಹ್ನೆಯೆನಿಸಿದ ಕಾರಣದಿಂದ ಪ್ರಭುತ್ವಗಳು ಪರಮಶಕ್ತಿಯ ಸಂಕೇತವಾಗಿ ಗಂಡಭೇರುಂಡವನ್ನು ರಾಜಚಿಹ್ನೆಯಾಗಿ ಬಳಸಿಕೊಂಡಿರುವದನ್ನು ಕಾಣಬಹುದು..



**ಪ್ರಾಚೀನತೆ:**


ಈ ಪಕ್ಷಿಯ ಪ್ರಾಚೀನತೆ ಹಾಗೂ ಭೌಗೋಳಿಕ ವ್ಯಾಪ್ತಿಯೂ ಬಹುವಿಶಾಲವಾಗಿದೆ. ತುರ್ಕಿ ಮತ್ತು ಇರಾನ್ ದೇಶದಲ್ಲಿ ದೊರಕಿರುವ ಕ್ರಿ.ಪೂ. 1000ಕ್ಕಿಂತಲೂ ಮುಂಚಿನ ಕೆಲವು ಹಿಟ್ಟೈಟ್ಕಲಾ ಕೇಂದ್ರಗಳಲ್ಲಿ ಗಂಡಭೇರುಂಡ ಶಿಲ್ಪಿತವಾಗಿದೆ. ಈಜಿಪ್ಟ್, ಅಸ್ಸೀರಿಯ ದೇಶಗಳಲ್ಲೂ ಇದು ಫಲವತ್ತತೆಯ ಆರಾಧನೆಗೆ ಸಂಬಂಧಪಟ್ಟ ಚಿಹ್ನೆಯಾಗಿತ್ತೆಂದು ಊಹಿಸಲಾಗಿದೆ. ಭಾರತ ಉಪಖಂಡಕ್ಕೆ ಸಂಬಂಧಿಸಿದಂತೆ ತಕ್ಷಶಿಲೆಯ ಭೌದ್ಧ ಸ್ತೂಪದಲ್ಲಿ ದೊರಕಿರುವ ಕ್ರಿಸ್ತಶಕ ಆರಂಭ ಕಾಲದ ಒಂದು ಶಿಲ್ಪ ಅತೀ ಪ್ರಾಚಿನವಾದುದು ಎಂದು ಹೇಳಲಾಗಿದೆ. ಇದು ನಿಜವಾದ ಪಕ್ಷಿಯೋ ಅಥವಾ ಕಾಲ್ಪನಿಕ ಪಕ್ಷಿಯೋ ಎಂಬ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆ ಇದೆ.

ಕನ್ನಡಿಗರ ಸಾರ್ವಭೌಮತ್ವ ಹಾಗೂ ಶಕ್ತಿಯ ಸಂಕೇತವಾಗಿರುವ ಈ ಗಂಡಭೇರುಂಡವು ಸುಮಾರು ನಾಲ್ಕು ಸಾವಿರ ವರ್ಷಗಳಲ್ಲಿ ಅನೇಕ ರಾಜಮನೆತನಗಳ ಚಿಹ್ನೆಯಾಗಿ, ಶಿಲ್ಪವಾಗಿ, ನಾಣ್ಯ ಹಾಗೂ ರಾಜಪತಾಕೆಗಳಲ್ಲಿ ವಿಜ್ರಂಭಿಸಿರುವುದನ್ನು ಕಾಣಬಹುದು. ಕರ್ನಾಟಕ ಸರಕಾರದ ಅಂಗಸಂಸ್ಥೆಯಾದ ಸಾರಿಗೆ ಸಂಸ್ಥೆಗೂ ಸಹ ಗಂಡಭೇರುಂಡವು ಲಾಂಛನವಾಗಿರುವುದನ್ನು ಕಾಣುತ್ತೇವೆ. ■



Downloaded From: www.kpscvaani.com

# ಪದಬಂಧ-21



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಪದ ಹೇಳಿ ಬಹುಮಾನವಾಗಿ ಸಿಕ್ಕಿರುವ ಮೆಡಲು! (3)
3. ಎರಡು ತಲೆಯ ಕಾಲ್ಪನಿಕ ಪಕ್ಷಿ,ನಮ್ಮ ರಾಜ್ಯದ ಲಾಂಛನ (5)
6. ಕಾಲವಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
8. ಕಚಕ್ಕನೆ ಕತ್ತರಿಸಿದ ತಲೆಗೂದಲು! (2)
10. ಹತ್ತನೆಯ ಭಾಗ (3)
12. ಲಗ್ನವಿಲ್ಲಿ ತಿರುವು ಮುರುವಾಗಿದೆ (3)
14. ರಾಷ್ಟ್ರಧ್ವಜ ವನ್ನು ತಯಾರಿಸುವ ಗ್ರಾಮವು ಧಾರವಾಡ ಜಿಲ್ಲೆಯಲ್ಲಿದೆ (3)
16. ಮುಟ್ಟು ಅಥವಾ ಸೇರು (3)
17. ಬ್ರೆಡ್ ಗೆ ಹಚ್ಚಿಕೊಳ್ಳುವ ಮುರಬ್ಬವಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
20. ಈಕೆ ಮನ್ಮಥನ ಪತ್ನಿ (2)
22. ದಕ್ಷಿಣ ಕಾಶಿ ಎಂದು ವಿಖ್ಯಾತಿ ಪಡೆದ ಈ ತಾಲ್ಲೂಕು ಪಟ್ಟಣವು ಮೈಸೂರು ಜಿಲ್ಲೆಯಲ್ಲಿದೆ (5)
23. ಮನಸ್ಸಿನ ಒಲವು(3)

## ಮೇಲಿಂದ ಕೆಳಕ್ಕೆ

1. ಈತ ದಾರಿಗ (3)
2. ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)
4. ಪರಸ್ಪರ ಸಂಧಿಸುವುದು (2)
5. ಲೋಹದ ಅಗಲವಾದ ಪಾತ್ರೆ (3)
7. ವೇದವನ್ನು ಚೆನ್ನಾಗಿ ತಿಳಿದವನು (6)
9. ರಾಜ,ಮಂತ್ರಿ,ಕಾಲಾಳು ಮುಂತಾದ ಕಾಯಿಗಳಿಂದ ಆಡುವ ಒಳಾಂಗಣದ ಆಟ (4)
11. ಬೆಂಗಳೂರಿನ ಇಲ್ಲಿ ಮಿನಿ ಲಾಲ್‌ಭಾಗ್ ನಿರ್ಮಾಣವಾಗಿದೆ (6)
13. ಬೆಂಗಳೂರು ಮತ್ತು ಮಂಗಳೂರು ನಡುವೆ ಸಂಚರಿಸುವ ಗಾಜಿನ ರೈಲು ಇದು (4)
15. ವಿಶ್ವಾಸವಿಲ್ಲಿ ಉಲ್ಟಾ ಕಾಣುತ್ತಿದೆ (3)
18. ಸಣ್ಣ ತೂತುಗಳಿರುವ ಸೌಟು (3)
19. ಅಧಮನ ಹತ್ತಿರವಿರುವ ಹಣ! (2)
21. ತಿಕ್ಕಲ ಹಿಡಿದಿರುವ ಎಳ್ಳು! (2)

## ಉತ್ತರ

**ಎಡದಿಂದ ಬಲಕ್ಕೆ**

1. ಪದಕ 3. ಗಂಡಭೇರುಂಡ 6. ಳಕಾ 8. ಕಚ 10. ದಶಮ 12. ಹವಾವಿ 14. ಗರಗ 16. ತಲಪ 17. ಮ್‌ಜಾ 20. ರತಿ 22. ನಂಜನಗೂಡು 23. ಲಹರಿ

**ಮೇಲಿಂದ ಕೆಳಕ್ಕೆ**

1. ಪಥಿಕ 2. ಕಳೆ 4. ಭೇಟಿ 5.ಡಬರಿ 7. ವೇದಪಾರಂಗತ 9. ಚದುರಂಗ 11. ಮಹದೇವಪುರ 13. ವಿಸ್ಟಾಡೋಮ್ 15. ಕೆಬಿನಂ 18. ಜಾಲರಿ 19. ಧನ 21. ತಿಲ

### -: ಸೂಚನೆ :-

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From: www.kpscvaani.com



ಜುಲೈ 10 ರಂದು ಕಲಬುರಗಿಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುವ ನೂತನ ಮಾದರಿಯ ಹಣ್ಣು ತರಕಾರಿ ಮಾರುಕಟ್ಟೆ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಭೂಮಿ ಪೂಜೆ ನೆರವೇರಿಸಿದರು. ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ ಕಾರಜೋಳ, ಸಚಿವರಾದ ಬಿ.ಶ್ರೀರಾಮುಲು, ಮುರುಗೇಶ್ ನಿರಾಣಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ದತ್ತಾತ್ರೇಯ ಸಿ.ಪಾಟೀಲ್ ರೇವೂರ, ವಿಧಾನ ಪರಿಷತ್ ಸದಸ್ಯರಾದ ಶಶೀಲ್ ನಮೋಶಿ, ಸಂಸದರಾದ ಉಮೇಶ್ ಜಾಧವ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಜುಲೈ 7 ರಂದು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯಡಿ ದೊಡ್ಡಬಳ್ಳಾಪುರದಲ್ಲಿ ನಿರ್ಮಿಸಿರುವ 70 ಹಾಸಿಗೆಗಳ ಮೇಕ್ ಶಿಫ್ಟ್ ಆಸ್ಪತ್ರೆಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಉದ್ಘಾಟಿಸಿದರು. ಪೌರಾಡಳಿತ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಟಿ.ಬಿ.ನಾಗರಾಜ್, ಕಂದಾಯ ಸಚಿವರಾದ ಆರ್. ಅಶೋಕ್, ಬಿಡಿಎ ಅಧ್ಯಕ್ಷರಾದ ಎನ್.ಆರ್. ವಿಶ್ವನಾಥ್, ಶಾಸಕರಾದ ಟಿ.ವೆಂಕಟರಮಣಯ್ಯ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From: www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From: www.kpscvaani.com